ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಡಿಸೆಂಬರ್ 19 ಗುರುವಾರ 2024
ಸಂಪುಟ: 45 | ಸಂಚಿಕೆ: 242 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಇನ್ನು ಬಿಡಿಎಯಂತೆ ಎಂಡಿಎ

ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕಕ್ಕೆ ವಿಧಾನಸಭೆಯಲ್ಲಿ ಅಂಗೀಕಾರ

ಬಹುತೇಕ ಅಧಿಕಾರಿಗಳು, ಇಬ್ಬರು ಜನಪ್ರತಿನಿಧಿಗಳ ನಾಮನಿರ್ದೇಶನಕ್ಕೆ ಅವಕಾಶ

ಬೆಳಗಾವಿ, ಡಿ.18–ಸಾವಿರಾರು ಕೋಟಿ ಹಗರಣದಲ್ಲಿ ಮುಳುಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ಕ್ಕೆ ಕಾಯಕಲ್ಪ ಕಲ್ಪಿಸುವ ನಿಟ್ಟಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಮಾದರಿಯಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಸ್ಥಾಪನೆಗಾಗಿ ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ಅವರು ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲ ಅಧಿವೇಶನದಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಮಂಡಿಸಿದ್ದು, ಧ್ವನಿಮತದ ಮೂಲಕ ಅಂಗೀಕಾರವಾಗಿದೆ.

2011ರ ಜನಗಣತಿಯಂತೆ ಮೈಸೂರು ನಗರದ ಜನಸಂಖ್ಯೆ 8,93,062 ಮತ್ತು ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ಜನಸಂಖ್ಯೆಯು 16,96,577 ಆಗಿದ್ದು, ಪ್ರಸ್ತುತ ಮೈಸೂರು ನಗರದ ಬೆಳವಣಿಗೆ ಮೆಟ್ರೋಪಾಲಿಟನ್ ಸಿಟಿಯ ಜನಸಂಖ್ಯೆ ಮತ್ತು ಸ್ಥಾನಮಾನವನ್ನು ಗಳಿಸುತ್ತಿರುವ ಸೂಚನೆ ದೊರೆತಿದೆ ಎಂದು ವಿಧೇಯಕ ಮಂಡನೆಯ ಉದ್ದೇಶವನ್ನು ಅವರು ತಿಳಿಸಿದ್ದಾರೆ. ಮೈಸೂರು ನಗರಾಭಿ


ಸಚಿವ ಬಿ.ಎಸ್.ಸುರೇಶ್

ವೃದ್ಧಿ ಪ್ರಾಧಿಕಾರದ ಆಯ–ವ್ಯಯ ಮತ್ತು ಇತರ ಚಟುವಟಿಕೆಗಳು ಅತೀ ಹೆಚ್ಚಿನ ವ್ಯಾಪ್ತಿಯಲ್ಲಿ ವಿಸ್ತರಣೆಗೊಳ್ಳುತ್ತಿವೆ. ಪ್ರಾಧಿಕಾರವು ತ್ವರಿತ ಬೆಳವಣಿಗೆ ಮತ್ತು ಬೃಹತ್ ಪ್ರಮಾಣದ ಅಭಿವೃದ್ಧಿಗಳ ಕಾರಣಗಳಿಂದಾಗಿ ಸಂಕೀರ್ಣ ಸಮಸ್ಯೆಗಳನ್ನು ಎದುರಿಸುತ್ತಿದೆ. ಆದ್ದರಿಂದ ಪರಿಣಾಮಕಾರಿ ಆಡಳಿತ ಹಾಗೂ ಪ್ರಾಧಿಕಾರದ ಆರ್ಥಿಕ ಸಂಪನ್ಮೂಲಗಳ ನಿರ್ವಹಣೆಗಾಗಿ ಬಿಡಿಎ ಮಾದರಿಯಲ್ಲಿ ಎಂಡಿಎಗೆ ಪ್ರತ್ಯೇಕ ಅಧಿನಿಯಮ ಅವಶ್ಯಕವಾಗಿದೆ ಎಂದು ವಿಧೇಯಕ ಮಂಡನೆಗೆ ಕಾರಣವನ್ನು ತಿಳಿಸಲಾಗಿದೆ. ಈ ವಿಧೇಯಕವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರಲಿದೆ. ಪ್ರಾಧಿಕಾರಕ್ಕೆ ವಿಭಾಗೀಯ ಆಯುಕ್ತರ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಯನ್ನು ಆಯುಕ್ತರನ್ನಾಗಿ ಸರ್ಕಾರದಿಂದ ನೇಮಿಸಲಾಗುವುದು. ಆದಷ್ಟು ಬೇಗ ಮೈಸೂರು ಸ್ಥಳೀಯ ಯೋಜನಾ ಪ್ರದೇಶಕ್ಕಾಗಿ ಸರ್ಕಾರವು 'ಮೈಸೂರು ಅಭಿವೃದ್ಧಿ ಪ್ರಾಧಿಕಾರ'ವನ್ನು ರಚಿಸುವುದು. ಈ ಪ್ರಾಧಿಕಾರಕ್ಕೆ ಓರ್ವ ಅಧ್ಯಕ್ಷನನ್ನು ಸರ್ಕಾರ ನೇಮಿಸುವುದು. ಲೆಕ್ಕಪತ್ರಗಳಲ್ಲಿ ಮತ್ತು ಲೆಕ್ಕ ಪರಿಶೋಧನೆಯಲ್ಲಿ ■ 2ನೇ ಪುಟಕ್ಕೆ

ಮುಡಾ ಹಗರಣಕ್ಕೆ ಎಳ್ಳು–ನೀರು...!

ಸಾವಿರಾರು ಕೋಟಿ ಭ್ರಷ್ಟಾಚಾರ ನಡೆದಿರುವ ಮುಡಾ ಹಗರಣಕ್ಕೆ ಮುಕ್ತಿ ಆಡುವ ಸಲುವಾಗಿಯೇ ಎಂಡಿಎ ವಿಧೇಯಕವನ್ನು ಮಂಡಿಸಲಾಗಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಅಲ್ಲದೇ ಈ ವಿಧೇಯಕವು ವಿಧಾನಸಭೆ ಮತ್ತು ವಿಧಾನಪರಿಷತ್‌ನಲ್ಲಿ ಸರ್ವಾನುಮತದಿಂದ ಅಂಗೀಕಾರಗೊಳ್ಳುತ್ತದೆ ಎನ್ನಲಾಗಿದೆ. ಎಂಡಿಎ ಅಸ್ತಿತ್ವಕ್ಕೆ ಬಂದ ನಂತರ ಎಲ್ಲ ಹೊಸ ಪ್ರಕ್ರಿಯೆಗಳು ನಡೆಯಲಿವೆ. ಅದೇ ವೇಳೆ ಮುಡಾದಲ್ಲಿ ನಡೆದಿರುವ ಸಾವಿರಾರು ಕೋಟಿ ಹಗರಣದ ದಿಕ್ಕುದೆಸೆ ಏನಾಗಬಹುದು ಎಂಬ ಪ್ರಶ್ನೆ ಈಗ ಉದ್ಭವಿಸಿದೆ. ಹೊಸದಾಗಿ ಅಸ್ತಿತ್ವಕ್ಕೆ ಬರಲಿರುವ ಎಂಡಿಎ ಭವಿಷ್ಯದ ಯೋಜನೆಗಳ ಬಗ್ಗೆ ಮಾತ್ರವೇ ಗಮನ ಹರಿಸುತ್ತದೆಯೇ ಹೊರತು, ಮುಡಾದಲ್ಲಿ ಇದುವರೆಗೂ ನಡೆದಿರುವ ಅಕ್ರಮಗಳ ಬಗ್ಗೆ ಪರಿವೆಯೇ ಇಲ್ಲ. ಮುಡಾದಲ್ಲಿ ನಡೆದಿರುವ ಹಗರಣದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು ಭಾಗಿಯಾಗಿದ್ದಾರೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಸಾರ್ವಜನಿಕವಾಗಿಯೇ ಕೇಳಿಬರುತ್ತಿದೆ. ಈ ಹಿನ್ನೆಲೆಯಲ್ಲಿ ಎಂಡಿಎ ವಿಧೇಯಕಕ್ಕೆ ಸರ್ವಪಕ್ಷಗಳು ಬೆಂಬಲ ಸೂಚಿಸಿ ಎಂಡಿಎ ಅಸ್ತಿತ್ವಕ್ಕೆ ಬಂದ ನಂತರ ಮುಡಾ ಹಗರಣವನ್ನು ಸಮಾಧಿ ಮಾಡಲು ಆಡಳಿತ ಪಕ್ಷಕ್ಕೆ ಅನುವು ಮಾಡಿಕೊಡಲಾಗುತ್ತಿದೆ ಎಂದು ಕೆಲವರು ವಿಶ್ಲೇಷಿಸಿದ್ದಾರೆ.



ಶಸ್ತ್ರಚಿಕಿತ್ಸೆ ಇಲ್ಲದೆ ಆಸ್ಪತ್ರೆಯಿಂದ ಮನೆಗೆ ಮರಳಿದ ದರ್ಶನ್

ಬೆಂಗಳೂರು, ಡಿ.18(ಕೆಎಂಶಿ)–ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ



ಪ್ರಕರಣದ ಆರೋಪಿ ನಟ ದರ್ಶನ್ ಶಸ್ತ್ರ ಚಿಕಿತ್ಸೆ ಇಲ್ಲದೆ ಆಸ್ಪತ್ರೆಯಿಂದ ಇಂದು ಬಿಡುಗಡೆಯಾಗಿದ್ದಾರೆ.

ಬೆನ್ನುನೋವು ಚಿಕಿತ್ಸೆಗೆಂದು ನ್ಯಾಯಾಲಯದಿಂದ ಮಧ್ಯಂತರ ಜಾಮೀನು ಪಡೆದು ಆಸ್ಪತ್ರೆ ಸೇರಿದ್ದ ದರ್ಶನ್ 48 ದಿನಗಳಿಂದ ವೈದ್ಯರ ನಿಗಾದಲ್ಲಿದ್ದರು. ಬೆನ್ನುನೋವು ಚಿಕಿತ್ಸೆಗೆಂದು ನವೆಂಬರ್ ಒಂದರಂದು ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿದ್ದರು. ಬಳ್ಳಾರಿ ಜೈಲಿನಿಂದ ಮಧ್ಯಂತರ ಜಾಮೀನಿನ ಮೇಲೆ ಬೆಂಗಳೂರಿಗೆ ಸ್ಥಳಾಂತರಗೊಂಡಿದ್ದ ದರ್ಶನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಈ ಮಧ್ಯೆ, ದರ್ಶನ್ ಹಾಗೂ ಪವಿತ್ರಾ ಗೌಡ ಸೇರಿದಂತೆ ಕೊಲೆ ಪ್ರಕರಣದ ಇತರ ಎಲ್ಲಾ 11 ಆರೋಪಿಗಳಿಗೂ ■ 5ನೇ ಪುಟಕ್ಕೆ

ವಿವಾಹ ಭಾಗ್ಯವಿಲ್ಲದಿದ್ದರೂ ಸಾವಿನಲ್ಲಿ ಒಂದಾದ ಪ್ರೇಮಿಗಳು!





ಮದ್ದೂರು, ಡಿ.18–ವಿವಾಹಿತರ ಪ್ರೇಮ ಕತೆಯೊಂದು ದುರಂತ ಅಂತ್ಯ ಕಂಡಿದೆ. ಪತಿಯೊಂದಿಗೆ ಇರಲಾರದೇ ಪ್ರಿಯಕರನದೇ ನೆನಪಿನಲ್ಲಿ ಗೃಹಿಣಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡರೆ, ಪ್ರಿಯತಮೆಯ ಸಾವಿನ ಸುದ್ದಿ ತಿಳಿದು ಪ್ರಿಯಕರನೂ ನೇಣಿಗೆ ಶರಣಾಗಿರುವ ಘಟನೆ ಮದ್ದೂರು ತಾಲೂಕಿನಲ್ಲಿ ನಡೆದಿದೆ.

ಮದ್ದೂರು ತಾಲೂಕು ಯರಗನಹಳ್ಳಿ ಗ್ರಾಮದ ಸೃಷ್ಟಿ(20) ಮತ್ತು ಆಕೆಯ ಪ್ರಿಯತಮ ಬನ್ನಹಳ್ಳಿ ಗ್ರಾಮದ ಪ್ರಸನ್ನ(25) ಆತ್ಮಹತ್ಯೆಗೆ ಶರಣಾದವರು.

ವಿವರ: ಯರಗನಹಳ್ಳಿ ಸೃಷ್ಟಿ ಮತ್ತು ಬನ್ನಹಳ್ಳಿಯ ಪ್ರಸನ್ನ ಹಲವು ವರ್ಷಗಳಿಂದ ಪರಸ್ಪರ ■ 2ನೇ ಪುಟಕ್ಕೆ

ಮುಡಾ ಹಗರಣ ತನಿಖೆಗೆ ನಿಯೋಜನೆಯಾಗಿರುವ ನಿವೃತ್ತ ನ್ಯಾ.ಪಿ.ಎಸ್.ದೇಸಾಯಿಗೆ ನಿಷೇಧ!


ಪಿ.ಎಸ್.ದೇಸಾಯಿ

ಮೈಸೂರು, ಡಿ.18–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಡೆದಿರುವ ಅಕ್ರಮಗಳ ತನಿಖೆಗಾಗಿ ನೇಮಕವಾಗಿರುವ ನಿವೃತ್ತ ನ್ಯಾಯಮೂರ್ತಿ ಪಿ.ಎಸ್.ದೇಸಾಯಿ ಅವರನ್ನು ಕೇಂದ್ರ ಸರ್ಕಾರ 3 ವರ್ಷಗಳ ಕಾಲ ಡಿಬಾರ್ ಮಾಡಿದ್ದರೂ ಅವರನ್ನು ವಿಚಾರಣಾ ಆಯೋಗದಿಂದ ತೆರವುಗೊಳಿಸದೇ ರಾಜ್ಯ ಸರ್ಕಾರ ಮುಂದುವರೆಸಿರುವುದು ಬೆಳಕಿಗೆ ಬಂದಿದೆ.

ದೇಸಾಯಿ ಅವರನ್ನು ಕೆಲ ಷರತ್ತುಗಳೊಂದಿಗೆ ಹೈದರಾಬಾದ್‌ನ ಕೇಂದ್ರೀಯ ಆಡಳಿತ ನ್ಯಾಯಾಧೀಕರಣದ (ಸಿಎಟಿ) ನ್ಯಾಯಿಕ ಸದಸ್ಯರನ್ನಾಗಿ ನೇಮಕ ಮಾಡಲಾಗಿತ್ತು. ಈ ನೇಮಕವನ್ನು ಒಪ್ಪಿಕೊಂಡಿದ್ದ ದೇಸಾಯಿ ಅವರು, 30 ದಿನಗಳ ಒಳಗಾಗಿ ತಾವು ಅಧಿಕಾರ ವಹಿಸಿಕೊಳ್ಳುವುದಾಗಿಯೂ, ಒಂದು ವೇಳೆ ನಿಯಮ ಉಲ್ಲಂಘಿಸಿದರೆ ನಿಯಮಾವಳಿ ಅನ್ವಯ ಷರತ್ತಿಗೆ ಬದ್ಧನಿರುವುದಾಗಿಯೂ ಲಿಖಿತವಾಗಿ ತಿಳಿಸಿದ್ದರು.

ಆದರೆ ನಿಯಮ ಉಲ್ಲಂಘಿಸಿದ್ದರಿಂದ ಅವರನ್ನು ಯಾವುದೇ ಸ್ವಾಯತ್ತ, ಶಾಸನಾತ್ಮಕ ಹಾಗೂ ಪ್ರಾಧಿಕಾರಗಳಿಗೆ ನಿಯೋಜನೆಗೊಳ್ಳುವಂತಿಲ್ಲ ಎಂದು ನ.7ರಂದು ಕೇಂದ್ರದ ಸಾರ್ವಜನಿಕ ಕುಂದು–ಕೊರತೆ ಮತ್ತು ಪಿಂಚಣಿ ಸಚಿವಾಲಯದ ಸಿಬ್ಬಂದಿ ಹಾಗೂ ತರಬೇತಿ ಇಲಾಖೆಯ ಜಂಟಿ ಕಾರ್ಯದರ್ಶಿ ಎಸ್.ಡಿ.ಶರ್ಮಾ ಅವರು ಕಳೆದ ಅಕ್ಟೋಬರ್ 21ಕ್ಕೆ ಅನ್ವಯಿಸುವಂತೆ ನ.7ರಂದು ಆದೇಶ ಹೊರಡಿಸಿದ್ದರು. ವಿಚಿತ್ರವೆಂದರೆ ನ್ಯಾಯಮೂರ್ತಿಗಳಾಗಿ ಕರ್ತವ್ಯ ನಿರ್ವಹಿಸಬಾರದು ಎಂದು ಕೇಂದ್ರ ಸರ್ಕಾರದಿಂದ ಆದೇಶ ಹೊರಡಿಸಿದ್ದರೂ ಕೂಡ ರಾಜ್ಯ ಸರ್ಕಾರವು ಮುಡಾ ಹಗರಣದ ತನಿಖೆಗಾಗಿ ನೇಮಿಸಿದ್ದ ಆಯೋಗದಿಂದ ಅವರನ್ನು ತೆರವುಗೊಳಿಸಿಲ್ಲ. ಅಲ್ಲದೇ ತಾವು ಡಿಬಾರ್ ಆಗಿರುವ ವಿಚಾರ ಗೊತ್ತಿದ್ದರೂ ಕೂಡ ಆಯೋಗದಿಂದ ಹೊರ ಹೋಗುವಂತಹ ನೈತಿಕತೆಯನ್ನು ದೇಸಾಯಿ ಅವರೂ ಕೂಡ ಪ್ರದರ್ಶಿಸಿಲ್ಲ.

ಸ್ನೇಹಮಯಿ ಕೃಷ್ಣ ದೂರು: ನ್ಯಾಯಮೂರ್ತಿ ದೇಸಾಯಿ ಅವರನ್ನು ಕೇಂದ್ರ ಸರ್ಕಾರವು ನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸಬಾರದು ಎಂದು ಡಿಬಾರ್ ಮಾಡಿರುವುದನ್ನು ■ 2ನೇ ಪುಟಕ್ಕೆ

ರಾಜ್ಯ ಬಿಜೆಪಿ ಬಣ ಬಡಿದಾಟ ತಾರಕಕ್ಕೆ: ವಿಜಯೇಂದ್ರಗೆ ಬಿಜೆಪಿ ವರಿಷ್ಠರ ಬುಲಾವ್

ಪಕ್ಷದಲ್ಲಿನ ಬೆಳವಣಿಗೆಗಳ ಬಗ್ಗೆ ಮಹತ್ವದ ಚರ್ಚೆ


ದೆಹಲಿಯಲ್ಲಿ ಬುಧವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ ಮಾಡಿ, ಅಭಿನಂದಿಸಿದರು.

ಬೆಂಗಳೂರು, ಡಿ.18(ಕೆಎಂಶಿ)–ಕರ್ನಾಟಕ ಬಿಜೆಪಿಯಲ್ಲಿ ಬಣ ಬಡಿದಾಟ ತಾರಕಕ್ಕೇರುತ್ತಿದ್ದಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಪಕ್ಷದ ವರಿಷ್ಠರು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ದೆಹಲಿಗೆ ಕರೆಸಿಕೊಂಡು ಚರ್ಚಿಸಿದ್ದಾರೆ.

ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಭಾಗಿಯಾಗಿದ್ದ ವಿಜಯೇಂದ್ರ ವರಿಷ್ಠರ ಕರೆಯ ಮೇರೆಗೆ ಬೆಳಗಾವಿಯಿಂದಲೇ ದೆಹಲಿಗೆ ತೆರಳಿ, ಪ್ರಧಾನಿ ಅವರನ್ನು ಸಂಸತ್ ಭವನದಲ್ಲಿ ಭೇಟಿ ಮಾಡಿದ್ದಾರೆ. ವಿಧಾನಸಭಾ ಅಧಿವೇಶನ ಮುಗಿಯುತ್ತಿದ್ದಂತೆ ಕರ್ನಾಟಕದಲ್ಲಿ ರಾಜಕೀಯ ವಿದ್ಯಮಾನಗಳು ಗರಿಗೆದರಲಿವೆ. ಇದಕ್ಕೆ ಸಂಬಂಧಿಸಿದಂತೆ ವಿಜಯೇಂದ್ರ ಅವರಿಗೆ ಪ್ರಧಾನಿ ಅವರು ಕೆಲವು ಸಲಹೆಗಳನ್ನು ನೀಡಲು ದೆಹಲಿಗೆ ಕರೆಸಿಕೊಂಡರೆಂದು ಉನ್ನತ ಮೂಲಗಳು ತಿಳಿಸಿವೆ. ಪ್ರಧಾನಿ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ■ 2ನೇ ಪುಟಕ್ಕೆ

ವಿಧಾನಮಂಡಲ ಚಳಿಗಾಲದ ಅಧಿವೇಶನ ನಂತರ ಕಾಂಗ್ರೆಸ್‌ನಲ್ಲೂ ತಲ್ಲಣ!?

ನವದೆಹಲಿ, ಡಿ.18–ರಾಜ್ಯ ವಿಧಾನಮಂಡಲದ ಅಧಿವೇಶನ ಮುಗಿಯುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮುಡಾ ಹಗರಣಕ್ಕೆ ಸಂಬಂಧಪಟ್ಟಂತೆ ಕಾನೂನಿನ ಕುಣಿಕೆ ಮತ್ತಷ್ಟು ಬಿಗಿಗೊಳ್ಳಲಿದ್ದು, ಬಿಡಿ ನಿವೇಶನ ಹಂಚಿಕೆ ಹಾಗೂ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ.) ಈಗಾಗಲೇ ಶೇಕಡ 70ರಷ್ಟು ತನಿಖೆ ಪೂರ್ಣಗೊಳಿಸಿದೆ. ಮುಖ್ಯಮಂತ್ರಿ ಅವರ ಕುಟುಂಬ ಹಾಗೂ ನಗರಾಭಿವೃದ್ಧಿ ಸಚಿವರನ್ನು ಹೊರತುಪಡಿಸಿ ಅಧಿಕಾರಿಗಳು ಹಾಗೂ ಅಕ್ರಮದಲ್ಲಿ ಭಾಗಿಯಾದ ಆರೋಪಿಗಳ ವಿಚಾರಣೆಯನ್ನು ಇ.ಡಿ. ಮುಗಿಸಿದೆ. ಅಂತಿಮ ಘಟ್ಟದಲ್ಲಿ ಪ್ರಮುಖರಿಗೆ ಇ.ಡಿ. ನೋಟಿಸ್ ನೀಡುತ್ತಿದ್ದಂತೆ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಆಂತರಿಕ ಸಮಸ್ಯೆಗಳು ಉಲ್ಬಣಗೊಳ್ಳುವ ಸಾಧ್ಯತೆ ಇದೆ. ಈಗಾಗಲೇ ಸಿದ್ದರಾಮಯ್ಯ ಆಪ್ತರಾಗಿದ್ದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ದೂರ ಸರಿದು ತಮ್ಮದೇ ಗುಂಪು ಕಟ್ಟುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರೂ ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷ ತುಂಬಿದ ಹಿನ್ನೆಲೆಯಲ್ಲಿ ಬೆಳಗಾವಿಯಲ್ಲಿ ನಡೆಯುತ್ತಿರುವ ಪಕ್ಷದ ಕಾರ್ಯಕ್ರಮ ಕುರಿತು ಅವರು ಅಷ್ಟಾಗಿ ಆಸಕ್ತಿ ತೋರುತ್ತಿಲ್ಲ. ಎಐಸಿಸಿ ವರಿಷ್ಠರು ಬೆಳಗಾವಿ ಕಾರ್ಯಕ್ರಮ ಕುರಿತು ಪರಿಶೀಲಿಸಲು ಭೇಟಿ ನೀಡಿದ ಸಂದರ್ಭದಲ್ಲೂ ಅವರ ಅನುಪಸ್ಥಿತಿ ಎದ್ದು ಕಾಣುತ್ತಿತ್ತು. ಇಂತಹ ಬೆಳವಣಿಗೆ ಮತ್ತು ಇ.ಡಿ. ಕಾನೂನು ಕುಣಿಕೆ ಬಲಗೊಳ್ಳುತ್ತಿರುವುದು ಕರ್ನಾಟಕ ಕಾಂಗ್ರೆಸ್‌ನಲ್ಲಿ ಸಂಚಲನ ಮೂಡಿಸಿದ್ದು, ಈ ಎಲ್ಲಾ ಬೆಳವಣಿಗೆಗಳನ್ನು ಬಿಜೆಪಿ ವರಿಷ್ಠರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣಕ್ಕೆ ಹೊಸ ತಿರುವು

ಪಾರ್ವತಿಯವರ ಪರ ಸಂಧಾನಕ್ಕೆ ಮುಂದಾದ ಬಿಜೆಪಿ ಮುಖಂಡ, ಯೂ–ಟ್ಯೂಬ್ ಚಾನಲ್ ಮಾಲೀಕ

ಸ್ನೇಹಮಯಿ ಕೃಷ್ಣರಿಗೆ ಕೋಟಿ ಕೋಟಿ ಆಫರ್!

ಸಿಸಿಟಿವಿ ದೃಶ್ಯ ಸಹಿತ ಲೋಕಾಯುಕ್ತ, ಪೊಲೀಸರು, ಇಡಿಗೆ ಸ್ನೇಹಮಯಿ ಕೃಷ್ಣ ದೂರು ಸಲ್ಲಿಕೆ

● ಕಾನೂನು ಹೋರಾಟ ನಿಲ್ಲಿಸುವಂತೆ ಆಮಿಷ ● ಲೋಕಾಯುಕ್ತ ತನಿಖೆ ನಡೆಯಲಿ; ಸಿಬಿಐ ಬೇಡ

ಮೈಸೂರು, ಡಿ.18(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದಲ್ಲಿ ಕಾನೂನು ಹೋರಾಟದಿಂದ ಹಿಂದೆ ಸರಿಯಲು ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಅವರು ನಿರ್ಧರಿಸಿದ್ದಾರೆಯೇ? ಕಾರಣ, ಅವರ ಆಪ್ತ ಸಹಾಯಕನೆಂದು ಹೇಳಿಕೊಂಡು ಬಿಜೆಪಿ ನಗರ ಕಾರ್ಯದರ್ಶಿ ಹಾಗೂ ಯೂ–ಟ್ಯೂಬ್ ಚಾನಲ್ ಮಾಲೀಕ ತಮ್ಮ ಬಳಿ ಸಂಧಾನಕ್ಕೆ ಬಂದು, ಕೋಟ್ಯಾಂತರ ರೂಪಾಯಿ ಹಣದ ಆಮಿಷವೊಡ್ಡಿದ್ದಾರೆ ಎಂದು ಪ್ರಕರಣದ ದೂರುದಾರರೂ ಆದ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ. ಹಾಗಾಗಿ ಸಿಎಂ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ಮತ್ತೊಂದು ತಿರುವು ಪಡೆದುಕೊಂಡಿದೆ.

ಸಂಧಾನ ನಡೆಸಲು ತಮ್ಮ ಮನೆಗೆ ಬಂದ ಈ ಇಬ್ಬರು ವ್ಯಕ್ತಿಗಳ ಸಿಸಿಟಿವಿ ದೃಶ್ಯಾವಳಿಗಳನ್ನು ಸ್ನೇಹಮಯಿ ಕೃಷ್ಣ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದಾರೆ. ಸಂಧಾನಕಾರರು ■ 5ನೇ ಪುಟಕ್ಕೆ





ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿ ಬಳಿ ದೂರಿನ ಪ್ರತಿ ಪ್ರದರ್ಶಿಸುತ್ತಿರುವ ಸ್ನೇಹಮಯಿ ಕೃಷ್ಣ (ಎಡಚಿತ್ರ). ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಮನೆಗೆ ಹರ್ಷ ಭೇಟಿ ನೀಡಿದ್ದಕ್ಕೆ ಪುರಾವೆ ಸಿಸಿಟಿವಿ (ಬಲಚಿತ್ರ) ದೃಶ್ಯಾವಳಿ

ಸಮಗ್ರ ತನಿಖೆ ಆಗಲೇಬೇಕು...!

ಮುಡಾ ನಿವೇಶನ ಪ್ರಕರಣದಿಂದ ಪಾರ್ವತಿ ಅವರು ಮಾನಸಿಕವಾಗಿ ಕುಗ್ಗಿ ಹೋಗಿದ್ದಾರೆ, ಅವರ ಸ್ಥಿತಿ ಚಿಂತಾಜನಕವಾಗಿದೆ. ಸರಿಯಾಗಿ ನಿದ್ದೆ, ಊಟ ಮಾಡುತ್ತಿಲ್ಲ ಎಂದು ಹರ್ಷ ನನಗೆ ತಿಳಿಸಿದ್ದಾನೆ. ಹರ್ಷ ನನ್ನನ್ನು ಭೇಟಿ ಮಾಡಿದ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಈತ ಪಾರ್ವತಿ ಅವರ ಆಪ್ತ ಸಹಾಯಕನೇ, ಇಲ್ಲ ಪಾರ್ವತಿ ಅವರು ಈತನಿಗೆ ಸಂಧಾನ ನಡೆಸುವಂತೆ ಹೇಳಿದ್ದಾರೆಯೇ, ಪಾರ್ವತಿ ಅವರು ನಿಜವಾಗಿಯೂ ಮಾನಸಿಕವಾಗಿ ಕುಗ್ಗಿ ಹೋಗಿದ್ದಾರೆಯೇ, ಗಂಗರಾಜುಗೆ ಹರ್ಷ ಹಣ ಕೊಟ್ಟಿದ್ದಾನೆಯೇ, ಹರ್ಷ ಹಾಗೂ ಶ್ರೀನಿಧಿಯನ್ನು ನನ್ನ ಬಳಿ ಯಾರು ಕಳುಹಿಸಿದರು. ಈ ಇಬ್ಬರಿಗೆ ನಿಜವಾಗಲೂ ಮುಖ್ಯಮಂತ್ರಿ ಸಿದ್ದರಾಮಯ್ಯರ ಕುಟುಂಬದ ಸಂಪರ್ಕ ಇದೆಯೇ ಇಲ್ಲ ಹಣ ಮಾಡುವುದು ಇವರಿಬ್ಬರ ಉದ್ದೇಶವೇ ಎಂಬ ಬಗ್ಗೆ ತನಿಖೆ ನಡೆಸುವಂತೆ ಕೃಷ್ಣ ಮನವಿ ಮಾಡಿದ್ದಾರೆ.

ನೀವು ಕೇಳಿದಷ್ಟು ಹಣ ಕೊಡುತ್ತೇವೆ, ನಮ್ಮ ಆಫರ್ ಒಪ್ಪಿಕೊಳ್ಳಿ!

ಗಂಗರಾಜುಗೆ 3 ಕೋಟಿಗೆ ಮಾತನಾಡಿ, ಒಂದೂವರೆ ಕೋಟಿ ಕೊಟ್ಟಿದ್ದೇವೆ!

ನಾನು ಬೆಂಗಳೂರಿನಲ್ಲಿ ಇದ್ದ ಸಂದರ್ಭದಲ್ಲಿ


ಹರ್ಷ

ಯೂ–ಟ್ಯೂಬ್ ಚಾನಲ್ ಮಾಲೀಕ ಶ್ರೀನಿಧಿ ಮತ್ತು ಬಿಜೆಪಿ ಮುಖಂಡ ಹರ್ಷ ಡಿಸೆಂಬರ್ 15ರಂದು ನನ್ನ ಮನೆಗೆ ಐಷಾರಾಮಿ ಕಾರಿನಲ್ಲಿ ಬಂದಿದ್ದರು. ಈ ವೇಳೆ ನನ್ನ ಮಗ ವಿ.ಕ್ರಿ.ವಿವೇಕ್ ಭೇಟಿ ಮಾಡಿದ ಈ ಇಬ್ಬರು, ಸಿದ್ದರಾಮಯ್ಯ ವಿರುದ್ಧದ ಪ್ರಕರಣದಲ್ಲಿ ಕಾನೂನು ಹೋರಾಟ ನಿಲ್ಲಿಸುವಂತೆ ನಿಮ್ಮಪ್ಪನಿಗೆ ಹೇಳಿ. ಪಾರ್ವತಿ ಅವರ ಪರವಾಗಿ ನಿಮ್ಮ ತಂದೆ–ತಾಯಿ ಕಾಲಿಗೆ ಬಿದ್ದು ನಾನು ಕ್ಷಮೆ ಕೋರುತ್ತೇನೆ ಎಂದು ಹೇಳಿ ದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ. ■ 5ನೇ ಪುಟಕ್ಕೆ

ಮೈಸೂರು ಮಿತ್ರ ಗುರುವಾರ 19 ಡಿಸೆಂಬರ್ 2024

ಒಂದನೇ ಪುಟದಿಂದ

ಇನ್ನು ಬಿಡಿಎಯಂತೆ ಎಂಡಿಎ

ವಿದ್ಯಾರ್ಹತೆ ಯುಳ್ಳ ವ್ಯಕ್ತಿಯನ್ನು 'ಹಣಕಾಸು ಸದಸ್ಯ' ಎಂದು ನೇಮಿಸಲಾಗುವುದು. ಚೀಫ್ ಇಂಜಿ ನಿಯರ್ ದರ್ಜೆಗಿಂತ ಕಡಿಮೆ ಇಲ್ಲದ ಕರ್ನಾಟಕ ಇಂಜಿನಿಯರ್ ಸೇವೆ ಯಲ್ಲಿ ಅಧಿಕಾರಿಯಾಗಿರುವ ಒಬ್ಬ ಇಂಜಿನಿಯರ್ ಅಥವಾ ರಾಜ್ಯ ಸರ್ಕಾರದ ಒಡೆತನದಲ್ಲಿನ ಇಲ್ಲವೇ ನಿಯಂತ್ರಣ ದಲ್ಲಿನ ಯಾವುದೇ ಉದ್ದಿಮೆಯಲ್ಲಿ ಅಧಿಕಾರಿಯಾಗಿರುವ ಒಬ್ಬರನ್ನು ಇಂಜಿನಿಯರಿಂಗ್ ಸದಸ್ಯರನ್ನಾಗಿ ನೇಮಿಸುವುದು. ನಗರ ಮತ್ತು ಗ್ರಾಮಾಂತರ ಯೋಜನಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯ ಇತರ ಅಧಿಕಾರಿ ಗಳ ನೆರವು ಪಡೆದಿರುವ ಈ ಇಲಾಖೆಯ ಅಪರ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಯಾ ಗಿರುವವರನ್ನು 'ನಗರ ಯೋಜಕ' ಸದಸ್ಯರಾಗಿ ಹಾಗೂ ವಾಸ್ತುಶಿಲ್ಪದಲ್ಲಿ ಅನುಭವವಿರುವ ವ್ಯಕ್ತಿಯನ್ನು ಸದಸ್ಯ ರಾಗಿ ನೇಮಿಸುವುದು. ಮೈಸೂರು ಮಹಾನಗರ ಪಾಲಿಕೆಯ ಅಯುಕ್ತರು ಎಂಡಿಎ ಪದ ನಿಮಿತ್ತ ಸದಸ್ಯ ರಾಗಿರುತ್ತಾರೆ. ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ ನಗರಾಭಿವೃದ್ಧಿ ಇಲಾಖೆಯ ಸಚಿವಾಲಯದ ಒಬ್ಬ ಅಧಿಕಾರಿಯು ಪದ ನಿಮಿತ್ತ ಸದಸ್ಯರಾಗಿರುತ್ತಾರೆ. ಕರ್ನಾಟಕ ವಿಧಾನ ಮಂಡಲದ ಸದಸ್ಯರಾಗಿರುವ ಇಬ್ಬರು ವ್ಯಕ್ತಿಗಳು ಎಂಡಿಎ ಸದಸ್ಯರಾಗಲಿದ್ದು, ಮಹಿಳೆಯೂ ಸೇರಿದಂತೆ ನಾಲ್ವರು ಸದಸ್ಯರ ಪೈಕಿ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವರಾಗಿ ರತಕ್ಕದ್ದು. ಈ ಎಲ್ಲಾ ನೇಮಕಗಳನ್ನು ರಾಜ್ಯ ಸರ್ಕಾರವೇ ನೇಮಿಸುತ್ತದೆ.

ಇದರ ಜೊತೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ಒಬ್ಬ ಪ್ರತಿನಿಧಿ, ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿರುವ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳ ಒಬ್ಬ ಪ್ರತಿನಿಧಿ ಮತ್ತು ಕರ್ನಾಟಕ ರಸ್ತೆ ಸಾರಿಗೆ ನಿಗಮದ ಒಬ್ಬ ಪ್ರತಿನಿಧಿಯನ್ನು ಸಂಬಂಧಪಟ್ಟ ಇಲಾಖೆಗಳು ಎಂಡಿಎಗೆ ನಾಮ ನಿರ್ದೇಶನ ಮಾಡುವುದು ಎಂದು ವಿಧೇಯಕದಲ್ಲಿ ತಿಳಿಸಲಾಗಿದೆ. ಎಂಡಿಎಗೆ ರಾಜ್ಯ ಸರ್ಕಾರವು ಹಿರಿಯ ಶ್ರೇಣಿಯ ಕೆಎಎಸ್ ಅಧಿಕಾರಿಗಿಂತ ಕಡಿಮೆ ಇಲ್ಲದ ಅಧಿಕಾರಿಯನ್ನು ನೇಮಕ ಮಾಡುತ್ತದೆ.

ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ಅಭಿವೃದ್ಧಿಗೆ ಉತ್ತೇಜನ ಕೊಡುವುದು ಮತ್ತು ಅದನ್ನು ಖಾತರಿ ಪಡಿಸುವುದು ಪ್ರಾಧಿಕಾರದ ಉದ್ದೇಶವಾಗಿರುತ್ತದೆ. ಪ್ರಾಧಿಕಾರದ ವ್ಯಾಪ್ತಿಯೊಳಗಿನ ಅಥವಾ ಹೊರಗಿನ ಪ್ರದೇಶದಲ್ಲಿರುವ ಚರ ಮತ್ತು ಸ್ಥಿರ ಆಸ್ತಿಗಳನ್ನು ಆರ್ಜಿಸಲು, ಧಾರಣ ಮಾಡಲು, ನಿರ್ವಹಿಸಲು, ವಿಲೇ ಮಾಡಲು ಮತ್ತು ಕಟ್ಟಡದ ಇಂಜಿನಿಯರಿಂಗ್ ಹಾಗೂ ಇತರ ಕೆಲಸಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಅವಶ್ಯಕವಾದ ಅಥವಾ ಯುಕ್ತವಾದ ಎಲ್ಲಾ ಕಾರ್ಯಗಳನ್ನು ಮಾಡಲು ಎಂಡಿಎ ಅಧಿಕಾರ ಹೊಂದಿರುತ್ತದೆ. ಲೇಔಟ್‌ಗಳನ್ನು ನಿರ್ಮಿಸಿದಾಗ ಅಲ್ಲಿನ ಬೀದಿಗಳನ್ನು ರಚಿಸಬೇಕು. ಹಾಗೆ ರಚಿಸಿದ ಬೀದಿಗಳ ನಿರ್ವಹಣೆ, ಬೀದಿ ದೀಪಗಳ ಅಳವಡಿಸುವಿಕೆ, ಸ್ವಚ್ಛತೆ ಮತ್ತು ಒಳ ಚರಂಡಿ ನೈರ್ಮಲ್ಯ ವ್ಯವಸ್ಥೆ, ನೀರು ಸರಬರಾಜು ವ್ಯವಸ್ಥೆಯನ್ನು ಮಾಡಿರಬೇಕು. ಇಂತಹ ವ್ಯವಸ್ಥೆಗಳನ್ನು ಮಾಡದೇ ಹೋದ ಪಕ್ಷದಲ್ಲಿ ಅಲ್ಲಿ ವಸತಿ ಸೌಕರ್ಯಕ್ಕಾಗಿ ಕಟ್ಟಡಗಳನ್ನು ನಿರ್ಮಿಸಲು ಪ್ರಾಧಿಕಾರ ಯಾವುದೇ ನಿವೇಶನವನ್ನು ಮಾರುವಂತಿಲ್ಲ ಅಥವಾ ವಿಲೇ ಮಾಡುವಂತಿಲ್ಲ ಎಂದು ತಿಳಿಸಲಾಗಿದೆ.

ಖಾಸಗಿ ಬಡಾವಣೆಗಳ ನಿರ್ಮಾಣದ ವೇಳೆ ಪ್ರಾಧಿಕಾರದಿಂದ ಅನುಮತಿ ಪಡೆಯಲೇ ಬೇಕು. ಯಾವುದೇ ಬಡಾವಣೆ ಪಾಲಿಕೆಯ ಸ್ಥಳೀಯ ವ್ಯಾಪ್ತಿಗೆ ಒಳಪಟ್ಟಿದ್ದರೆ ಪ್ರಾಧಿಕಾರವು ಪಾಲಿಕೆಯ ಸಹಮತಿ ಇಲ್ಲದೆ ಲೇಔಟ್ ನಿರ್ಮಾಣಕ್ಕೆ ಮಂಜೂರಾತಿ ಕೊಡುವಂತಿಲ್ಲ ಎಂದು ವಿಧೇಯಕದಲ್ಲಿ ಹೇಳಲಾಗಿದೆ.

ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಆಯೋಗ

ಈ ವಿಧೇಯಕದಲ್ಲಿ ಮೈಸೂರು ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಆಯೋಗ ರಚನೆಗೆ ಅವಕಾಶ ಕಲ್ಪಿಸಲಾಗಿದೆ. ಮೈಸೂರು ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಆಯೋಗ ಎಂಬ ಹೆಸರಿನ ಕಲಾ ಆಯೋಗವನ್ನು ಸರ್ಕಾರ ಅಧಿಸೂಚನೆ ಮೂಲಕ ರಚಿಸಬಹುದು. ಅದರಲ್ಲಿ ಸರ್ಕಾರ ನೇಮಿಸಬಹುದಾದಂತಹ ಅಧ್ಯಕ್ಷ ಮತ್ತು ಇತರ ವಿಷಯಗಳ ಜೊತೆಗೆ ದೃಶ್ಯ ಕಲೆ ಅಥವಾ ವಾಸ್ತುಶಿಲ್ಪ ಇಲ್ಲವೇ ಭಾರತೀಯ ಇತಿಹಾಸ, ಪುರಾತತ್ವ ಶಾಸ್ತ್ರ ಮತ್ತು ಪರಿಸರ ವಿಜ್ಞಾನವನ್ನು ಪ್ರತಿನಿಧಿಸುವ ಇತರ ಸದಸ್ಯರು ಇರತಕ್ಕದ್ದು.

ನಗರ ವಿನ್ಯಾಸದ ಮತ್ತು ಅಭಿವೃದ್ಧಿ ಪ್ರದೇಶಗಳ ಪರಿಸರದ ಜೀರ್ಣೋದ್ಧಾರ ಮಾಡುವುದು, ಭವಿಷತ್ತಿನ ನಗರ ವಿನ್ಯಾಸ ಮತ್ತು ಪರಿಸರವನ್ನು ಆಯೋಜಿಸುವುದು ಹಾಗೂ ಅಭಿವೃದ್ಧಿಗೊಳಿಸುವುದು, ಪ್ರಾಚ್ಯವಸ್ತು ವಿಷಯ ಮತ್ತು ಐತಿಹಾಸಿಕ ನಿದರ್ಶನಗಳನ್ನು ಹಾಗೂ ಅತ್ಯುತ್ಕೃಷ್ಟ ನಿಸರ್ಗ ಸೌಂದರ್ಯವುಳ್ಳ ನಿವೇಶನಗಳನ್ನು ಜೀರ್ಣೋದ್ಧಾರ ಹಾಗೂ ರಕ್ಷಣೆ ಮಾಡುವುದು ಆಯೋಗದ ಕೆಲಸವಾಗಿರುತ್ತದೆ. ಮೈಸೂರು ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಆಯೋಗದ ಶಿಫಾರಸುಗಳನ್ನು ಪರ್ಯಾಲೋಚಿಸಿದ ನಂತರ ಮತ್ತು ಯಾವುದೇ ಮನವಿ ಸಲ್ಲಿಸಲು ಪ್ರಾಧಿಕಾರಕ್ಕೆ ಅವಕಾಶ ಕೊಟ್ಟ ನಂತರ ತಾನು ಸೂಕ್ತವೆಂದು ಆಲೋಚಿಸುವಂತಹ ನಿದರ್ಶನಗಳನ್ನು ಸರ್ಕಾರ ನೀಡಬಹುದು. ಸರ್ಕಾರ ನೀಡುವಂತಹ ಪ್ರತಿಯೊಂದು ನಿರ್ದೇಶನವನ್ನು ಪ್ರಾಧಿಕಾರ ಪಾಲಿಸತಕ್ಕದ್ದು ಎಂದು ವಿಧೇಯಕದಲ್ಲಿ ಹೇಳಲಾಗಿದೆ.

ವಿಜಯೇಂದ್ರರಿಗೆ ಬಿಜೆಪಿ ವರಿಷ್ಠರ ಬುಲಾವ್

ವಿಜಯೇಂದ್ರ, ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿ ಕರ್ನಾಟಕದಲ್ಲಿ ಪಕ್ಷ ಬಲವರ್ಧನೆಗೆ ದೊರೆತ ಪ್ರೇರಣೆಯಾಗಿದ್ದು, ರಾಜ್ಯಾಧ್ಯಕ್ಷ ಸ್ಥಾನ ಜವಾಬ್ದಾರಿ ವಹಿಸಿಕೊಂಡು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಪ್ರಧಾನಿ ಭೇಟಿ ಮಾಡಿ ಆಶೀರ್ವಾದ ಪಡೆದಿದ್ದಾಗಿ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ವಿಕಸಿತ ಭಾರತ ನಿರ್ಮಾಣದ ಮಹಾ ಸಂಕಲ್ಪ ತೊಟ್ಟ ಪ್ರಧಾನಿ ಮೋದಿ ಅವರ ಕಾರ್ಯಶೈಲಿ ನಮ್ಮಂಥ ಕಾರ್ಯಕರ್ತರಿಗೆ ನಿತ್ಯ ಚೈತನ್ಯದ ಚಿಲುಮೆಯಾಗಿದೆ.

ಸಂಘಟನೆ ಬಲವೃದ್ಧಿ ಜೊತೆಗೇ ರಾಷ್ಟ್ರ ಬಲಿಷ್ಠಗೊಳಿಸುವ ಮಹಾಕಾರ್ಯದಲ್ಲಿ ಯುವಜನರ ಸಹಭಾಗಿತ್ವ ನಿರೀಕ್ಷೆ ಮೀರಿ ತೊಡಗಿಸಿಕೊಳ್ಳುವಂತೆ ಕಾರ್ಯಕ್ರಮಗಳನ್ನು ರೂಪಿಸಲು ಪ್ರೇರಣೆ ನೀಡಿದೆ.

ಭಾರತದ ಆರ್ಥಿಕ, ಔದ್ಯೋಗಿಕ, ಶೈಕ್ಷಣಿಕ ಕ್ಷೇತ್ರಗಳ ಪ್ರಗತಿ ಜಾಗತಿಕ ಮಟ್ಟದಲ್ಲಿ ಅಗ್ರ ಸಾಧನೆಯಲ್ಲಿ ಮಹತ್ವದ ಪಾತ್ರ ವಹಿಸಲಿದ್ದು, ಕರ್ನಾಟಕದ ಕೊಡುಗೆ ಮುಂಚೂಣಿಯಲ್ಲಿರುವಂತೆ ಕಾಳಜಿ ವಹಿಸಲು ಕೇಂದ್ರ ಸರ್ಕಾರದ ಯೋಜನೆಗಳು ಜನರಿಗೆ ತಲುಪುವಂತಾಗಬೇಕು, ಪಕ್ಷದ ಕಾರ್ಯಕರ್ತರು ಯೋಜಿತವಾಗಿ ತೊಡಗಿಸಿಕೊಳ್ಳಲು ಕಾರ್ಯಕ್ರಮ ರೂಪಿಸಲು ಪ್ರಧಾನಿ ನರೇಂದ್ರ ಮೋದಿಯವರು ಸೂಚಿಸಿದರು ಎಂದರು.

ನಿವೃತ್ತ ನ್ಯಾ.ಪಿ.ಎಸ್.ದೇಸಾಯಿಗೆ ನಿಷೇಧ!

ಪರಿಗಣಿಸಿ ಮುಡಾ ಹಗರಣ ತನಿಖೆಗೆ ರಚಿಸಲಾಗಿರುವ ಏಕ ಸದಸ್ಯ ಆಯೋಗದ ಅಧ್ಯಕ್ಷ ಸ್ಥಾನದಿಂದ ಅವರನ್ನು ತೆರವುಗೊಳಿಸಿ ಮುಡಾಗೆ ಸಂಬಂಧಿಸಿದಂತೆ ಅವರ ಬಳಿ ಇರುವ ಎಲ್ಲಾ ದಾಖಲೆಗಳನ್ನು ಸರ್ಕಾರ ವಶಕ್ಕೆ ಪಡೆದುಕೊಂಡು, ಡಿಬಾರ್ ಆಗಿರುವ ವಿಚಾರ ಗೊತ್ತಿದ್ದರೂ ಕೂಡ ಅದನ್ನು ಮರೆಮಾಚಿ ಆಯೋ ಗದ ಅಧ್ಯಕ್ಷರಾಗಿ ಮುಂದುವರೆದಿರುವ ಬಗ್ಗೆ ಸುಪ್ರೀಂಕೋರ್ಟ್ ಮತ್ತು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುವುದರ ಜೊತೆಗೆ ದೇಸಾಯಿ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸ್ನೇಹಮಯಿ ಕೃಷ್ಣ ರಾಜ್ಯದ ಮುಖ್ಯ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದಾರೆ.

ಸಾವಿನಲ್ಲಿ ಒಂದಾದ ಪ್ರೇಮಿಗಳು!

ಪ್ರೀತಿಸುತ್ತಿದ್ದರು. ಅದೇ ವೇಳೆ ಸೃಷ್ಟಿಯ ಸಹಪಾಠಿಯಾಗಿದ್ದ ಸ್ಪಂದನಾ ಎಂಬ ಯುವತಿಯನ್ನೂ ಪ್ರಸನ್ನ ಪ್ರೇಮದ ಬಲೆಗೆ ಬೀಳಿಸಿಕೊಂಡಿದ್ದ. ಸೃಷ್ಟಿ ಮತ್ತು ಸ್ಪಂದನಾ ಇಬ್ಬರನ್ನೂ ಆತ ಪ್ರೀತಿಸುತ್ತಿದ್ದನಾದರೂ ಈ ಯುವತಿಯರಿಗೆ ಅದರ ಅರಿವಿಲ್ಲದೇ ಇಬ್ಬರೂ ತನ್ನನ್ನೇ ಪ್ರೀತಿಸುತ್ತಿದ್ದಾನೆ ಎಂಬ ಭಾವನೆಯಲ್ಲಿದ್ದರು.

ಈ ಮಧ್ಯೆ ಸೃಷ್ಟಿಗೆ ಕೈಕೊಟ್ಟ ಪ್ರಸನ್ನ ಸ್ಪಂದನಾಳನ್ನು ವಿವಾಹವಾಗಿಯೇ ಬಿಟ್ಟ, ನಂತರ ದಿನೇಶ್ ಎಂಬಾತನನ್ನು ಸೃಷ್ಟಿ ವಿವಾಹವಾದಳು. ಈ ಎರಡೂ ದಂಪತಿಗಳ ಜೀವನ ಪ್ರಾರಂಭದಲ್ಲಿ ಚೆನ್ನಾಗಿಯೇ ಇತ್ತಾದರೂ, ಸೃಷ್ಟಿ ಮತ್ತು ಪ್ರಸನ್ನನ ನಡುವಿನ ಹಳೆಯ ಪ್ರೇಮ ಮತ್ತೆ ಚಿಗುರೊಡೆಯಲಾರಂಭಿಸಿತು. ಇಬ್ಬರೂ ಮೊಬೈಲ್‌ನಲ್ಲಿ ಮಾತನಾಡುವುದು, ಭೇಟಿಯಾಗುವುದು ನಡೆದಿತ್ತು ಎಂದು ಹೇಳಲಾಗಿದ್ದು, ಈ ವಿಚಾರವಾಗಿ ದಿನೇಶ್ ಮತ್ತು ಸೃಷ್ಟಿ ನಡುವೆ ಪದೇ ಪದೆ ಗಲಾಟೆ ಆಗುತ್ತಿತ್ತು. ಡಿ.11ರಂದು ಸೃಷ್ಟಿ ನಾಪತ್ತೆಯಾಗಿದ್ದು, ಈ ಹಿನ್ನೆಲೆಯಲ್ಲಿ ಆಕೆಯ ಪತಿ ದಿನೇಶ್, ತನ್ನ ಪತ್ನಿ ಪ್ರಸನ್ನನ ಜೊತೆ ಹೋಗಿರಬಹುದು ಎಂದು ಸಂಶಯ ವ್ಯಕ್ತಪಡಿಸಿ ಕೆಸ್ತೂರು ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದ. ಡಿ.16ರಂದು ಶಿಂಷಾ ನದಿಯಲ್ಲಿ ಸೃಷ್ಟಿ ಶವ ಪತ್ತೆಯಾಗಿದ್ದು, ಮದ್ದೂರು ಠಾಣೆ ಪೊಲೀಸರು ದಿನೇಶನನ್ನು ಕರೆಸಿ ಶವವನ್ನು ತೋರಿಸಿದ್ದಾರೆ.

ಸೃಷ್ಟಿ ಆತ್ಮಹತ್ಯೆ ಮಾಡಿಕೊಂಡ ವಿಷಯ ತಿಳಿಯುತ್ತಿದ್ದಂತೆಯೇ ಪ್ರಸನ್ನ ತನ್ನ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ.

ಶ್ರೀ ಕೃಷ್ಣ ಗಾನಸಭಾದಿಂದ ಸಂಗೀತ ಕಾರ್ಯಕ್ರಮ

ಮೈಸೂರು,ಡಿ.18–ಮೈಸೂರಿನ ಶ್ರೀ ಕೃಷ್ಣ ಗಾನಸಭಾ ವತಿಯಿಂದ ಡಿ.21ರಂದು ಸಂಜೆ 6 ಗಂಟೆಗೆ ಆಳ್ವಾರ್ ಕಲಾಭವನದಲ್ಲಿ ಶ್ರೀಮತಿ ಎಸ್.ಆರ್.ಕುಮುದ ಅವರ ಸ್ಮರಣಾರ್ಥ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಟ್ರಸ್ಟ್ ಅಧ್ಯಕ್ಷ ನಂದಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಡಾ.ಎಂ.ಜೆ.ವೀಣಾ ಅವರಿಂದ ಗಾಯನವಿದೆ. ಪಕ್ಕವಾದ್ಯದಲ್ಲಿ ಡಾ.ಎಂ.ಬಿ. ನರಹರಿ–ವಯೋಲಿನ್, ವಿದ್ವಾನ್ ಪಿ.ಎಸ್. ಶ್ರೀಧರ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್‌ನಲ್ಲಿ ಸಹಕಾರ ನೀಡಲಿದ್ದಾರೆ. ಡಿ.22ರಂದು ಸಂಜೆ 6.30 ಗಂಟೆಗೆ ಬ್ಯಾಡರಹಳ್ಳಿ ಬಿ.ಸುಬ್ಬರಾಜೇ ಅರಸ್ ಅವರ ಸ್ಮರಣಾರ್ಥ ಆಳ್ವಾರ್ ಕಲಾಭವನದಲ್ಲಿ ಮೈಸೂರಿನ ಕರಾವಳಿ ಯಕ್ಷಗಾನ ಕೇಂದ್ರದಿಂದ ಶ್ರೀಧರರಾಜ ಅರಸ್ ಅವರ ಪುದುವಟ್ಟು ಕಾರ್ಯಕ್ರಮ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಮಂಗಳೂರು ಗಣೇಶ ಬೀಡಿ ವರ್ಕ್ಸ್ ಮಾಲೀಕರಾದ ಡಾ.ಎಂ.ಜಗನ್ನಾಥ ಶೆಣೈ ಭಾಗವಹಿಸುವರು.

ಶ್ರೀರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್: ರಾಮಮಂದಿರದ ಆವರಣದಲ್ಲಿ ಡಿ.20ರಂದು ಸಂಜೆ 6.30ಕ್ಕೆ ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ವಿದುಷಿ ಯದುಶ್ರೀ ವೆಂಕಟೇಶ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ಶ್ರೀ ರತ್ನತೇಜ–ಪಿಟೀಲು, ವಿದ್ವಾನ್ ಧೀಮಂತ್ ಭಟ್–ಮೃದಂಗದಲ್ಲಿ ಸಹಕಾರ ನೀಡಲಿದ್ದಾರೆ.

ಮೈಸೂರಲ್ಲಿ ಈಗಲೂ ಕಲೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕಕ್ಕೆ ಪ್ರೋತ್ಸಾಹ

● ಎಂ.ಬಿ.ಅನಂತಸ್ವಾಮಿ ಸಾಂಸ್ಕೃತಿಕ–ಸೇವಾ ಟ್ರಸ್ಟ್‌ನ ತೃತೀಯ ವಾರ್ಷಿಕೋತ್ಸವ ● ಸಾಧಕರಿಗೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮ



ಡಾ.ರೇಖಾ ಅರುಣ್, ಮಳವಳ್ಳಿ ಮಹದೇವ ಸ್ವಾಮಿ, ಪಿ.ರಾಜ ಗೋಪಾಲ್, ಡಿ.ರಾಮು, ಗಣೇಶ್, ಮೋಹನ್ ದೇವಯ್ಯ, ಕಿರಗಸೂರು ರಾಜಪ್ಪ, ಡಾ.ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ. 18– ಮೈಸೂರಿನಲ್ಲಿ ಕಲೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕಕ್ಕೆ ರಾಜರ ಕಾಲದಂತೆ ಈಗಲೂ ಪ್ರೋತ್ಸಾಹ ಸಿಗುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಹೇಳಿದರು.

ಮೈಸೂರಿನ ಪುರಭವನದಲ್ಲಿ ಎಂ.ಬಿ.ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್‌ನ ತೃತೀಯ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಹೀಗಾಗಿಯೇ ಮೈಸೂರು ರಾಜರ ಕಾಲದಿಂದಲೂ ಸಾಂಸ್ಕೃತಿಕ ರಾಜಧಾನಿ ಎಂದು ಹೆಸರಾಗಿದೆ ಎಂದರು.

ಈ ಹಿಂದೆ ಗುಬ್ಬಿ ವೀರಣ್ಣ, ಸುಬ್ಬಯ್ಯನಾಯ್ಡು ಕಂಪನಿಗಳು ಪುರಭವನದಲ್ಲಿ ನಾಟಕಗಳ ಪ್ರದರ್ಶಿಸುತ್ತಿದ್ದವು. ಈಗಲೂ ಆ ಪರಂಪರೆ ಮುಂದುವರೆದಿದೆ ಎಂದರು.

ಎಂ.ಬಿ.ಅನಂತಸ್ವಾಮಿ ಸಂಗೀತ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದವರು. ಡಿ.ರಾಮು ಅವರೊಂದಿಗೆ ಸೇರಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದವರು. ಅಂಥವರ ಹೆಸರನ್ನು ಅವರ ಪುತ್ರ ಕಾಂತರಾಜು ಉಳಿಸಲು ಯತ್ನಿಸುತ್ತಿರುವುದು ಶ್ಲಾಘನೀಯ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪಾಲಿಕೆ ಮಾಜಿ ಸದಸ್ಯೆ ರಮೇಶ್ ರಮಣಿ, ಜಯದೇವ ಆಸ್ಪತ್ರೆ ಅರವಳಿಕೆ ತಜ್ಞ ಡಾ.ಕೆ.ಆರ್.ಮಂಜುನಾಥ್, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ರೇಖಾ ಅರುಣ್, ಎಚ್.ಡಿ. ಕೋಟೆಯ ಡಾ.ಗಣೇಶ್ ಮುಖ್ಯ ಅತಿಥಿಗಳಾಗಿದ್ದರು. ಟ್ರಸ್ಟಿನ ಅಧ್ಯಕ್ಷ ಎ.ಕಾಂತರಾಜು, ಕಾರ್ಯದರ್ಶಿ ಚಂದ್ರು, ಖಜಾಂಚಿ ಬಿ.ಆರ್.ಜ್ಯೋತಿ, ನಿರ್ದೇಶಕರಾದ ಬಿ.ನಾಗೇಶ್, ಕೆ.ಮಂಜುನಾಥ್, ಸಿ.ಮಹದೇವ, ಸುಗುಣ ಕಾಂತರಾಜು, ಜ್ಯೋತಿ, ಎಂ.ಎಸ್. ಲಕ್ಷ್ಮಿಕಾಂತ್, ಸಲಹೆಗಾರ ಎಚ್.ಎಸ್.ಚಂದ್ರಶೇಖರ್ ಇದ್ದರು. ಗುರುರಾಜ್ ಕಾರ್ಯಕ್ರಮ ನಿರೂಪಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ: ಜಿ. ಗುರುರಾಜ್ ಮತ್ತು ವೃಂದದವರು ಮಂಗಳವಾದ್ಯ ನುಡಿಸಿದರು. ಡಾ.ರೇಖಾ ಅರುಣ್ ನೇತೃತ್ವದ ಅರುಣರಾಗ ಕ್ರಿಯೇಷನ್ಸ್‌ನವರು ರಸಸಂಜೆ, ಕಿರಗಸೂರು ರಾಜಪ್ಪ ಮತ್ತು ತಂಡದವರು ರಂಗಗೀತೆಗಳು, ಎಂ.ಆರ್.ಮಂಜುನಾಥ್ ಮತ್ತು ವೃಂದದಿಂದ ತಾಳವಾದ್ಯ ವಾದನ, ಎಚ್.ಎಸ್.ತಾಂಡವಮೂರ್ತಿ ನಿರ್ದೇಶನದಲ್ಲಿ ಪದ್ಮಶ್ರೀ ಧನುರ್ ವೀಣಾ ಪೀಠ ತಂಡದ ಪಿಟೀಲು ವಾದನ ಸಭಿಕರನ್ನು ರಂಜಿಸಿದವು.


ಸನ್ಮಾನಿತರು: ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮೈಸೂರಿನ ಡಿ.ರಾಮು, ಶ್ರೀರಂಗಪಟ್ಟಣದ ಪಿ.ರಾಜಗೋಪಾಲ್, ಅಂತಾರಾಷ್ಟ್ರೀಯ ಜಾನಪದ ಗಾಯಕ ಮಳವಳ್ಳಿ ಮಹದೇವಸ್ವಾಮಿ, ಕಲಾರತ್ನ ಪ್ರಶಸ್ತಿ ಪುರಸ್ಕೃತ ಮಂಡ್ಯದ ಗಣೇಶ್, ಮೈಸೂರಿನ ಕಲಾವಿದರಾದ ಮೋಹನ್ ದೇವಯ್ಯ, ಹರಿಕಥಾ ವಿದುಷಿ ಜಯಲಕ್ಷ್ಮೀ ನಾಯ್ಡು, ಹಿರಿಯ ಕಲಾವಿದ ಕಿರಗಸೂರು ರಾಜಪ್ಪ, ಆಕಾಶವಾಣಿ ಕಲಾವಿದೆ ಡಾ.ಶ್ರುತಿ ರಂಜನಿ ಅವರನ್ನು ಸನ್ಮಾನಿಸಲಾಯಿತು.

ರಾಜ್ಯದ ಗಡಿ ಜಿಲ್ಲೆಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರವಿಲ್ಲ

ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಆತಂಕ

ಮೈಸೂರು,ಡಿ.18(ಆರ್‌ಕೆ)–ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಂಬಂಧ ರಾಜ್ಯದ ಗಡಿ ಜಿಲ್ಲೆಗಳಲ್ಲಿ ಒಂದೇ ಒಂದು ಪ್ರಚಾರದ ಫ್ಲೆಕ್ಸ್, ಬ್ಯಾನರ್ ಅಳವಡಿಸಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಚಳಿಗಾಲದ ಅಧಿವೇಶನದಲ್ಲಿ ಭಾಗಿಯಾಗಿರುವ ಅವರು, ಬೆಳಗಾವಿಯಿಂದ ದೂರವಾಣಿ ಮೂಲಕ 'ಮೈಸೂರು ಮಿತ್ರ'ನ ಜೊತೆ ಮಾತನಾಡಿದರು. ದೊಡ್ಡ ಪ್ರಮಾಣದಲ್ಲಿ ಇಡೀ ದೇಶವೇ ನೋಡುವ ಹಾಗೆ ಮಂಡ್ಯ ನಗರದಲ್ಲಿ ಸರ್ಕಾರ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಾಡುತ್ತಿವೆ. ಆದರೆ, ಅಧಿವೇಶನ ನಡೆಯುತ್ತಿರುವ ಬೆಳಗಾವಿಯ ಸುವರ್ಣ ಸೌಧದಲ್ಲಿ ಸಮ್ಮೇಳನದ ಪ್ರಚಾರಕ್ಕೆ ಒಂದೇ ಒಂದು ಫ್ಲೆಕ್ಸ್, ಬ್ಯಾನರ್ ಅಳವಡಿಸದಿರುವುದು ವಿಷಾದನೀಯ ಎಂದರು.



ಅಕ್ಷರ ಜಾತ್ರೆಗೆ ಸರ್ಕಾರದಿಂದ 25 ಕೋಟಿ ರೂ. ಹಾಗೂ ಕನ್ನಡ ಸಂಘಟನೆಗಳಿಂದ 5 ಕೋಟಿ ಸೇರಿ ಒಟ್ಟು 30 ಕೋಟಿ ರೂ. ಹಣ ಖರ್ಚು ಮಾಡಲಾಗುತ್ತಿದೆ. ಸಮ್ಮೇಳನಕ್ಕೆ ಇಡೀ ರಾಜ್ಯ ಹಾಗೂ ದೇಶದಾದ್ಯಂತ ಕನ್ನಡಿಗರನ್ನು ಕರೆತರಬೇಕೆಂದು ಉದ್ದೇಶಿಸಲಾಗಿದೆ. ಸಮ್ಮೇಳನ ಆರಂಭವಾಗಲು ಕೇವಲ ಎರಡು ದಿನ ಇರುವಾಗಲೂ, ಬೆಳಗಾವಿ, ಕಾರವಾರ, ಚಿಕ್ಕಬಳ್ಳಾಪುರ, ಕೋಲಾರಗಳಂತಹ ಗಡಿ ಜಿಲ್ಲೆಗಳಲ್ಲಿ ಎಲ್ಲಿಯೂ ಪ್ರಚಾರದ ಫ್ಲೆಕ್ಸ್ ಅಥವಾ ಬ್ಯಾನರ್‌ಗಳ ಅಳವಡಿಸಿಲ್ಲ ಎಂದು ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಬೇಸರಿಸಿದರು.

ಕನ್ನಡ ಸಾಹಿತ್ಯ ಸಮ್ಮೇಳನ ಕೇವಲ ಮಂಡ್ಯ ಜಿಲ್ಲೆಗಷ್ಟೇ ಸೀಮಿತವಾಗಬಾರದು. ರಾಜ್ಯಾದ್ಯಂತ ಕನ್ನಡಿಗರನ್ನು ಅಕ್ಷರ ಜಾತ್ರೆಗೆ ಆಹ್ವಾನಿಸುವಂತಾಗಬೇಕು. ಕನ್ನಡ ಸಾಹಿತ್ಯ ಪರಿಷತ್ತು ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿ ವ್ಯಾಪಕ ಪ್ರಚಾರ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಡಿ.31ರ ಸಾರಿಗೆ ನಿಗಮದ ಸಿಬ್ಬಂದಿ ಮುಷ್ಕರಕ್ಕೆ ಬೆಂಬಲವಿಲ್ಲ


ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದಿಂದ ಸ್ಪಷ್ಟನೆ

ಮೈಸೂರು,ಡಿ.18(ಜಿಎ)–ವಿವಿಧ ಕಾರ್ಮಿಕ ಸಂಘಟನೆಗಳೆಂದು ಹೇಳಿಕೊಂಡಿರುವ ಸಂಘಟನೆಗಳು ಡಿ.31ರಿಂದ ಸಾರಿಗೆ ಇಲಾಖೆ ಸಿಬ್ಬಂದಿ ಅನಿರ್ದಿಷ್ಟಾವಧಿ ಮುಷ್ಕರ ಹೂಡಲಿದ್ದಾರೆ ಎಂಬ ಘೋಷಣೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದಿಂದ ಬೆಂಬಲವಿಲ್ಲ ಎಂದು ಗೌರವ ರಾಜ್ಯಾಧ್ಯಕ್ಷ ಬಿ.ಎಸ್.ಸುರೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನೇಕ ಸಂಘಟನೆಗಳಿಂದಾಗಿ ಕಾರ್ಮಿಕರಲ್ಲಿ ಅಶಾಂತಿ ಭುಗಿಲೆದ್ದ ಹಿನ್ನೆಲೆಯಲ್ಲಿ ಈ ನೌಕರರ ಕೂಟ ಸ್ಥಾಪಿಸಿಕೊಳ್ಳಲಾಗಿದೆ. ಇದು ಸಾರಿಗೆ ಇಲಾಖೆ ಕಾರ್ಮಿಕರಿಗಾಗಿ ಹೋರಾಟ ನಡೆಸುತ್ತಿದೆ ಎಂದರು.

2020ರ ಜನವರಿ 1ರಿಂದ ನಿವೃತ್ತಿಯಾಗಿರುವ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ನೌಕರರಿಗೂ ತಾರತಮ್ಯದ ವೇತನ ವಿಮರ್ಶೆ ಮಾಡಬೇಕು. ಸರ್ಕಾರಿ ನೌಕರರೊಂದಿಗೆ ಸರಿಸಮಾನ ವೇತನ ನೀಡಬೇಕು, ಸಂಘಗಳಿಗೆ ಕೂಡಲೇ ಚುನಾವಣೆ ನಡೆಸಿ ಮಾನ್ಯತೆ ಉಳಿದುಕೊಳ್ಳುವಂತೆ ಮಾಡಬೇಕು. ಎಂಬಿವೇ ಮೊದಲಾದ ಬೇಡಿಕೆ ಈಡೇರಿಕೆಗೆ ಆಗ್ರಹಿಸುತ್ತಿದೆ. ಇತರೆ ಸಂಘಗಳು ಈ ಬೇಡಿಕೆಗೆ ಸಹಮತ ವ್ಯಕ್ತಪಡಿಸಿದಲ್ಲಿ ಅವುಗಳ ಮುಷ್ಕರಕ್ಕೆ ಬೆಂಬಲ ನೀಡಬಹುದಾಗಿತ್ತು. ಆದ್ದರಿಂದ ಡಿ.31ರ ಮುಷ್ಕರಕ್ಕೆ ಸಾರಿಗೆ ನೌಕರರು ಬೆಂಬಲ ನೀಡುವುದಿಲ್ಲ. ಸಾರ್ವಜನಿಕರಿಗೆ ಗೊಂದಲ ಬೇಡ. ಸಾರಿಗೆ ಸಂಸ್ಥೆ ಬಸ್‌ಗಳು ಎಂದಿನಂತೆ ಸಂಚರಿಸಲಿವೆ ಎಂದರು. ಗೋಷ್ಠಿಯಲ್ಲಿ ತಾಳಶಾಸನ ಮೋಹನ್, ನಾಗರಾಜು, ಪರಶುರಾಮ್, ರಾಜೇಶ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.12.2024 ಗುರುವಾರ, ಮಳೆ ನಕ್ಷತ್ರ: ಮೂಲ, 16.12.2024ರಿಂದ 28.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧನುರ್ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಪಾಳ್ಯಂ ಶ್ರೀ ಶಾಸ್ತಾಪೀಠ, ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಬಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಪ್ರಾಂಗಣ, ರಾಘವೇಂದ್ರನಗರ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್:** ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ

■ **ಸುಯೋಗ್ ಆಸ್ಪತ್ರೆ :** ಉಚಿತ ಸೈನಸೈಟಿಸ್ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಅಭಿನವ ಬೆಂಗಳೂರು :** ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಕನ್ನಡ ಸಾಹಿತ್ಯ ಪರಂಪರೆ ಮತ್ತು ವರ್ತಮಾನ ಪುಸ್ತಕ ಲೋಕಾರ್ಪಣೆ ಸಮಾರಂಭ, ಸಮ್ಮುಖ: ಹಿರಿಯ ವಿದ್ವಾಂಸ ಪ್ರೊ. ಟಿ.ವಿ. ವೆಂಕಟಾಚಲಶಾಸ್ತ್ರಿ, ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ತಿಮ್ಮೇಗೌಡ, ಕೃತಿ ಲೋಕಾರ್ಪಣೆ : ಕು. ಆದ್ಯ ಗುರುಪ್ರಸಾದ್, ಕು. ಅವನಿ ಗುರುಪ್ರಸಾದ್, ಉಪಸ್ಥಿತರು : ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಸ್ಥಳ: ಟಿ.ವಿ. ವೆಂಕಟಾಚಲಶಾಸ್ತ್ರಿ ಅವರ ನಿವಾಸ ಜಯಲಕ್ಷ್ಮಿಪುರಂ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು :** ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆ, ಉದ್ಘಾಟನೆ : ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ವಿಭಾಗ ಎಸ್.ಎಚ್. ಮನೋಜ್‌ಕುಮಾರ್, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಕಟಪೂರ್ವ ನಿರ್ದೇಶಕ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷ ಎಸ್.ಅರ್. ನಾರಾಯಣರಾವ್, ಸ್ಥಳ: ಹೋಟೆಲ್ ಪಂಚವಟಿ, ಎಸ್‌ಡಿಎಂ ಕಾಲೇಜು ಎದುರು, ಬೆಳಗ್ಗೆ 10.30ಕ್ಕೆ.

■ **ಒಳಗೊಳ್ಳುವಿಕೆ ಬೆಳವಣಿಗೆ ಮತ್ತು ಅಭಿವೃದ್ಧಿ ಕೇಂದ್ರ :** ಪುಸ್ತಕ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು : ಚಿಂತಕ ಪ್ರೊ. ಮುಜಾಫರ್ ಅಸ್ಸಾದಿ, ಬರಹಗಾರ ಡಾ. ಅಮ್ಮಸಂದ್ರ ಸುರೇಶ್, ಪತ್ರಕರ್ತ ವೀರಭದ್ರಪ್ಪ ಬಿಸ್ಲಳ್ಳಿ, ಮೈಸೂರು ಜಿಲ್ಲಾ ವಿಶ್ವಕರ್ಮ ಸಂಘದ ಅಧ್ಯಕ್ಷ ಮೊಗಣ್ಣಾಚಾರ್, ಪ್ರಗತಿಪರ ಚಿಂತಕರಾದ ಶ್ರೀಮತಿ ಪಿ. ಶುಭಮಂಗಳ, ಡಾ. ಡಿ.ಸಿ. ನಂಜುಂಡ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ಬೆಳಗ್ಗೆ 11ಕ್ಕೆ.

■ **ಶ್ರೀ ಶ್ರೀ ನಾಗಾನಂದ ದತ್ತಾತ್ರೇಯ ಮಠ: ಕ್ರೋಧಿನಾಮ ಸಂವತ್ಸರದ ಭಗವಾನ್** ಶ್ರೀ ದತ್ತಾತ್ರೇಯ ಸ್ವಾಮಿಯವರ 48ನೇ ವರ್ಷದ ಸಪ್ತಾಹ, ಬೆಳಗ್ಗೆ ಕಳಸ ಸ್ಥಾಪನೆ, ಗಣಪತಿ ಪೂಜೆ, ವರುಣ, ಪೂಜೆ, ಕಂಕಣ ಬಂಧನ, ಅಭಿಷೇಕ, ವಿಷ್ಣು ಸಹಸ್ರನಾಮ, ಶ್ರೀ ಗುರುಚರಿತ್ರೆ ಪಾರಾಯಣ, ಬೆಳಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಭಜನೆ, ದತ್ತಾತ್ರೇಯ ಉತ್ಸವ, ಔದಂಬರ ಪೂಜೆ, ಮಧ್ಯಾಹ್ನ 1.30ಕ್ಕೆ ಮಹಾಮಂಗಳಾರತಿ, ಶ್ರೀಯವರಿಂದ ಪ್ರವಚನ, ಸಂಜೆ 6.30ಕ್ಕೆ ಭಜನೆ, ರಾತ್ರಿ 8 ಗಂಟೆಗೆ ಪೂಜೆ, ಪ್ರಸಾದ ವಿನಿಯೋಗ, ಸ್ಥಳ : ದೇವಸ್ಥಾನದ ಆವರಣ, ಬೆಲವತ್ತ ಗ್ರಾಮ (ಮಂಟಿ).

■ **ವೇಣುಗೋಪಾಲಸ್ವಾಮಿ ದೇವಸ್ಥಾನ:** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ವಿದುಷಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನ, ತ್ಯಾಗರಾಜ ರಸ್ತೆ, ಶ್ರೀ ಚಿಕ್ಕಾಂಜನೇಯ ಸ್ವಾಮಿ ದೇವಸ್ಥಾನದ ಸಮೀಪ, ಸಂಜೆ 6.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಕ್ಯೂಜಿಐಎಸ್ ಕುರಿತು ರಾಷ್ಟ್ರ ಮಟ್ಟದ ಕಾರ್ಯಾಗಾರ, ಸ್ಥಳ: ನಳ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಸಂಬಂಧ ಪೂರ್ವಭಾವಿ ಸಭೆ, ಸ್ಥಳ: ಜಿಲ್ಲಾಧಿಕಾರಿ ಕಚೇರಿ ಸಭಾಂಗಣ, ಸಿದ್ಧಾರ್ಥನಗರ, ಬೆಳಗ್ಗೆ 11ಕ್ಕೆ.

■ **ಶಬರಿ ಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ, ಶ್ರೀ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ಗುರುವಾಯೂರ ಪುನ್ ದೇವಾಲಯ:** 64ನೇ ವಾರ್ಷಿಕ ಪೂಜಾ ಮಹೋತ್ಸವ, ಅನ್ನದಾನ, ಸ್ಥಳ: ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ, 12.30 ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ ; ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ:** ತಿರುಪ್ಪಾವೈ ಪ್ರವಚನ, ಮಹಾರಾಣಿ ಕಾಲೇಜು (ಬೆಂಗಳೂರು) ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್.ಶ್ರೀಧರನ್, ಸ್ಥಳ: ಸನಾತನೀ ಸಭಾ, ಜಯನಗರ, ಸಂಜೆ 6.15ರಿಂದ

■ **ಕಲಾಮಂದಿರ :** ಸತ್ಯವನ್ನೇ ಹೇಳುತ್ತೇನೆ ನಾಟಕ ಪ್ರದರ್ಶನ, ಸ್ಥಳ: ಕಲಾಮಂದಿರದ ಕಿರು ರಂಗ ಮಂದಿರ, ಸಂಜೆ 6.30ಕ್ಕೆ.

ಹಲಗಯ್ಯನಹುಂಡಿ, ಮೈಸೂರು ತಾಲೂಕು.

■ **ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ:** ವಾರ್ಷಿಕ ವಿಶೇಷ ಶಿಬಿರ 2024–25, ಸಮುದಾಯ ಸಂಘಟಕ ಪ್ರಸನ್ನಕುಮಾರ್ ಅವರಿಂದ ಸ್ವಚ್ಛತೆ ಮತ್ತು ಆರೋಗ್ಯ–ಅರಿವು ಕುರಿತು ಉಪನ್ಯಾಸ, ಅಧ್ಯಕ್ಷತೆ : ಲಯನ್ ಸಿ.ಆರ್. ದಿನೇಶ್, ಮುಖ್ಯ ಅತಿಥಿಗಳು : ಹೆಚ್.ಎಂ. ಸಿದ್ದರಾಜು, ಮಹೇಶ್, ಲಕ್ಷ್ಮಣ, ವೆಂಕಟೇಶ್, ದಾಸಯ್ಯ, ಸ್ಥಳ: ಹಲಗಯ್ಯನಹುಂಡಿ, ಮೈಸೂರು ತಾಲೂಕು, ಸಂಜೆ 6ಕ್ಕೆ

ಬರಡನಪುರ ಗ್ರಾಮ, ಮೈಸೂರು ತಾಲೂಕು.

■ **ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್, ರಾಷ್ಟ್ರೀಯ ಸೇವಾ ಯೋಜನೆ:** ವಾರ್ಷಿಕ ವಿಶೇಷ ಶಿಬಿರ 2024–25, ಬೆಳಗ್ಗೆ 6.30ಕ್ಕೆ ಬರಡನಪುರ ಮಹಾಂತೇಶ್ವರ ಮಠದ ಶ್ರೀ ಚನ್ನಬಸವ ಸ್ವಾಮಿಗಳಿಂದ ಧ್ವಜಾರೋಹಣ, ಬೆಳಗ್ಗೆ 10 ರಿಂದ ಮಹಿಳಾ ಸಬಲೀಕರಣದ ಬಗ್ಗೆ ಅರಿವು ಜಾಥಾ, ಸಂಜೆ 5.30ಕ್ಕೆ ಕರ್ನಾಟಕ ರಾಜ್ಯಶಾಸ್ತ್ರ ಸಂಘದ ಕಾರ್ಯದರ್ಶಿ ಡಾ. ಸುಮತಿ ಅವರಿಂದ ಮಹಿಳಾ ಹಕ್ಕು ಮತ್ತು ಕಾನೂನು ಅರಿವು ಕುರಿತು ಉಪನ್ಯಾಸ, ಅಧ್ಯಕ್ಷತೆ : ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಮುಖ್ಯಸ್ಥೆ ಶ್ರೀಮತಿ ಎಲ್. ವೇದಾವತಿ, ಮುಖ್ಯ ಅತಿಥಿಗಳು : ಶ್ರೀಮತಿ ಆರ್.ಜಿ. ತೇಜಸ್ವಿನಿ, ಸ್ಥಳ: ಬರಡನಪುರ ಗ್ರಾಮ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ರಸಗಳಿಗೆ. ಮಾತನಾಡುತ್ತಾರೆ–ಡಾ. ಪ್ರದೀಪ್‌ಕುಮಾರ್ ಹೆಬ್ರಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ಗಣೇಶ್ ಮತ್ತು ಆರ್. ಕುಮಾರೇಶ್–ಯುಗಳ ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತೀ : ಆಹಾರ ಮತ್ತು ಆರೋಗ್ಯ ಕುರಿತು ಮಾತನಾಡುತ್ತಾರೆ ಡಾ. ರಾಘವೇಂದ್ರ. ಎಂ.ಪಿ., ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಕುರಿತು ಮಾತನಾಡುತ್ತಾರೆ ಶಶಿಧರ ಡೊಂಗ್ರೆ, 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರೈತ ಉತ್ಪಾದಕ ಸಂಸ್ಥೆಗಳಿಗೆ ಮಾರುಕಟ್ಟೆ ತಾಂತ್ರಿಕತೆಗಳನ್ನು ಕುರಿತು ಸಂವಾದ. ಭಾಗವಹಿಸುತ್ತಾರೆ : ಮಂಡ್ಯದ ಗ್ರೀನ್ ಆಬ್ಜೆಕ್ಟ್ ಸಂಸ್ಥೆಯ ಕೆ.ನಾಗಭೂಷಣ್ ನಾಯ್ಡು ಮತ್ತು ಉತ್ತನ್ ಲ್ಯಾಬ್ಸ್‌ನ ಸಿ.ಆರ್.ರವಿಕುಮಾರ್, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಹಲೋ ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಡುತ್ತಾರೆ ನಿವೇದಿತಾ. ಹೆಚ್., 9.30 ಕನ್ನಡ ಭಾರತಿ, 10.00–ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣ

ಮೈಸೂರು ಮಿತ್ರ

ಮಂಡ್ಯ 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಗೊರುಚ ಆಯ್ಕೆ

ಸಾಹಿತ್ಯ ಪರಿಷತ್ ಗಂಡಾಂತರದಿಂದ ಪಾರಾಯ್ತು!

● ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಅಭಿಮತ ● ಬೇರೆಯವರು ಆಯ್ಕೆಯಾಗಿದ್ದರೆ ಜನ ಅಸಹ್ಯ ಪಡುತ್ತಿದ್ದರು ● ಈಗಂತೂ ಪ್ರತಿಯೊಬ್ಬ ಸಾಹಿತಿ ಒಂದಲ್ಲ ಒಂದು ಅಜೆಂಡಾ ಹೊತ್ತುಕೊಂಡಿದ್ದಾರೆ



ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಶರಣ ಸಾಹಿತ್ಯ ಪರಿಷತ್ ವತಿಯಿಂದ ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ, ನಾಡೋಜ ಡಾ.ಗೊ.ರು. ಚನ್ನಬಸಪ್ಪ ಅವರನ್ನು ಸನ್ಮಾನಿಸಲಾಯಿತು.


ಮೈಸೂರು, ಡಿ.18(ಎಂಟಿವೈ)– ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ನಾಡೋಜ ಡಾ.ಗೊ.ರು.ಚನ್ನಬಸಪ್ಪ ಅವರನ್ನು ಆಯ್ಕೆ ಮಾಡಿ, ಸಮ್ಮೇಳನ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಅನ್ನು ದೊಡ್ಡ ಗಂಡಾಂತರದಿಂದ ಪಾರು ಮಾಡಿದಂತಾಗಿದೆ ಎಂದು ವಾಗ್ಮಿ, ಹಾಸ್ಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಶರಣ ಸಾಹಿತ್ಯ ಪರಿಷತ್ ನಗರ ಹಾಗೂ ಜಿಲ್ಲಾ ಘಟಕ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಕದಳಿ ಮಹಿಳಾ ವೇದಿಕೆ ಮತ್ತು ಕನ್ನಡ ಸಾಹಿತ್ಯ ಕಲಾಕೂಟ ಆಯೋಜಿಸಿದ್ದ 'ಗೊ.ರು.ಚನ್ನಬಸಪ್ಪ ಅವರಿಗೆ ಅಭಿನಂದನೆ' ಸಮಾರಂಭದಲ್ಲಿ ಅಭಿನಂದನಾ ಭಾಷಣ ಮಾಡಿದ ಅವರು, ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಬೇರೆ ಯಾರಾದರೂ ಆಯ್ಕೆಯಾಗಿದ್ದರೆ, ನಾಡಿನಾದ್ಯಂತ ಇನ್ನೊಂದು ಥರದ ಚರ್ಚೆ, ಮತ್ತೊಂದು ಅಸಹ್ಯ ಪಡುವಂತಹ ಚರ್ಚೆ ನಡೆಯುತ್ತಿತ್ತು. ಆದರೆ, ಗೊರುಚ ಅವರ ಘನ ವ್ಯಕ್ತಿತ್ವ ಕನ್ನಡ ಸಾಹಿತ್ಯ ಪರಿಷತ್ ಮತ್ತು ಸಮ್ಮೇಳನವನ್ನು ದೊಡ್ಡ ಗಂಡಾಂತರದಿಂದ ಪಾರು ಮಾಡಿದೆ. ಇವರ ಆಯ್ಕೆಯಿಂದಾಗಿ ಕಸಾಪ ಮುಖ ಉಳಿಸಿಕೊಂಡಿದೆ ಎಂದರು. ಗೊರುಚ ಅವರಂತಹ ವ್ಯಕ್ತಿತ್ವವುಳ್ಳ ಸಾಹಿತಿಗಳ ಸಂಖ್ಯೆ ಕ್ಷೀಣಿಸುತ್ತಿದೆ. ಪ್ರಸ್ತುತ, ಸಾಹಿತಿಗಳು ಯಾವ್ಯಾವುದೋ ಅಜೆಂಡಾ ಹೊತ್ತುಕೊಂಡಿರುವುದರಿಂದ ಸಾಮಾಜಿಕ ಅಸಮಾನತೆಯ ಬಗ್ಗೆ ಮಾತನಾಡಲು ಹಿಂಜರಿಯುತ್ತಿದ್ದಾರೆ. ಸಾಮಾಜಿಕ ಅಸಮಾನತೆಯನ್ನು ಹೇಳುವಲ್ಲಿ ಸೋತಿದ್ದಾರೆ. ಅಲ್ಲದೆ, ಅದನ್ನು ಪ್ರತಿಭಟಿಸುವ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಆದರೆ, ಗೊರುಚ ಸ್ಥಿತಪ್ರಜ್ಞತೆಯಿಂದ ಯಾವುದೇ ಕಾರ್ಯಸೂಚಿಗೆ ಅಥವಾ ಸಿದ್ಧಾಂತಗಳಿಗೆ ಬಲಿಯಾಗದೆ ಅದ್ಭುತ ಜೀವನ ನಡೆಸುತ್ತಿದ್ದಾರೆ. ಬಡತನದಲ್ಲಿ ಬೆಳೆದು ಬಂದು ದೊಡ್ಡ ಸಾಧನೆಯನ್ನು ಮಾಡಿದ್ದಾರೆ. ಶ್ರೀಮಂತಿಕೆಯ ಬದುಕು ಸಾಧ್ಯವಿದ್ದರೂ ಸ್ವಯಂ ಇಚ್ಛೆಯಿಂದ ಬಡತನದ ಜೀವನವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಸಿರಿವಂತಿಕೆಯ ಹಿಂದೆ ಬಿದ್ದಿರುವವರು ಗೊರುಚ ಅವರನ್ನು ಮಾದರಿಯಾಗಿ ಅನುಸರಿಸಬೇಕು. ಗೊರುಚ ಅವರನ್ನು ಗಮನಿಸಿದರೆ ಬಡತನವೇ ಚೆಂದ ಎನ್ನಿಸುತ್ತದೆ. ಬಡತನ ಸಮಾಜಕ್ಕೆ ಅನೇಕ ಸಾಧಕರನ್ನು ಕೊಡುಗೆ ನೀಡಿದೆ ಎಂದು ಹೇಳಿದರು. ಯಾವುದು ಒಡೆದು ಹೋಗಿದೆಯೋ ಅದನ್ನು ಜೋಡಿಸುವ ಕೆಲಸವನ್ನು ಸಾಹಿತ್ಯ ಸಮ್ಮೇಳನಗಳು ಮಾಡಬೇಕು. ಸಾಹಿತ್ಯ ಪರಿಷತ್ ಅನ್ನು ಸ್ವಚ್ಛವಾಗಿಡಬೇಕು ಎಂದು ಗೊರುಚ ಬಯಸಿದ್ದರು. ಅವರು ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಗೆ ಕಾರಣರಾದರು. ಮನಸ್ಸು ಸ್ವಚ್ಛವಾಗಿದ್ದರೆ ಮಾಡುವುದೆಲ್ಲವೂ ಸ್ವಚ್ಛವಾಗಿರುತ್ತದೆ. ಅಂಥ ಕೆಲಸಗಳನ್ನು ಅವರು ಮಾಡಿದ್ದಾರೆ. ಅವರ ಸಾಹಿತ್ಯಕ್ಕಿಂತ ಅವರ ಬದುಕು ಬಹಳ ದೊಡ್ಡದು ಎಂದು ಹೇಳಿದರು. ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ನಕಾರಾತ್ಮಕ ಸಂಗತಿಗಳಿಗಿಂತ ಸಕಾರಾತ್ಮಕ ಸಂಗತಿಗಳಿಂದಾಗಿ ಅದೃಷ್ಟವಂತರಾದವರು ನಿಜಕ್ಕೂ ಅದೃಷ್ಟವಂತರು. ಆ ಸಾಲಿಗೆ ಗೊರುಚ ಸೇರುತ್ತಾರೆ. ಗ್ರಾಮೀಣ ಹಾಗೂ ಜನಪದ ಪ್ರತಿಭೆಗೆ ಸ್ಥಾನಮಾನ ಸಿಕ್ಕಿರುವುದು ಅರ್ಹರಿಗೆ ಸೂಕ್ತವಾದ ಸ್ಥಾನಮಾನ ಅಪರೂಪಕ್ಕೆ ಒಮ್ಮೊಮ್ಮೆ ಸಿಗುತ್ತದೆ ಎಂಬುದು ಸಾಬೀತಾಗಿದೆ. ಅವರು ಅದನ್ನು ಕನಸಿನಲ್ಲೂ ಬಯಸಿರಲಿಲ್ಲ ಎಂದರು.

ಸಮ್ಮೇಳನದ ಸಂದರ್ಭದಲ್ಲಿ ಸಾರ್ವತ್ರಿಕವಾಗಿ ಚರ್ಚೆ ಆಗಬೇಕಾದ ವಿಷಯಗಳ ಬದಲಿಗೆ ತಾತ್ಕಾಲಿಕವಾಗಿ, ಆ ಸಂದರ್ಭಕ್ಕೆ ಬೇಕಾದ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿರುವುದು ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದರು.

ಸಾಮಾನ್ಯ ವ್ಯಕ್ತಿಯಾದ ನಾನು ಉನ್ನತ ಸ್ಥಾನಮಾನ ಪಡೆದದ್ದೇ ಸೋಜಿಗ

ಮಂಡ್ಯ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಡಾ.ಗೊ.ರು.ಚನ್ನಬಸಪ್ಪ ಬೆರಗಿನ ನುಡಿ



ಮೈಸೂರು,ಡಿ.18(ಎಂಟಿವೈ)– ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಷ್ಟಿಷ್ಟೋ ಪರಿಚಾರಿಕೆ ಕೆಲಸ ಮಾಡುತ್ತಿದ್ದ ನನ್ನನ್ನು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸುತ್ತಿರುವುದಕ್ಕೆ ಬೆರಗಾಗಿದ್ದೇನೆ ಎಂದು ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ, ನಾಡೋಜ ಡಾ.ಗೊ.ರು. ಚನ್ನಬಸಪ್ಪ ಸಂತಸ ವ್ಯಕ್ತಪಡಿಸಿದ್ದಾರೆ. ಬುಧವಾರ ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ತು ನನಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವ ನೀಡಿರುವುದಕ್ಕೆ ಅಬಾರಿಯಾಗಿದ್ದೇನೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪರಿಚಾರಿಕೆ ಕೆಲಸ ಮಾಡುತ್ತಿದ್ದ ನನ್ನನ್ನು ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ಸುದ್ದಿ ಪ್ರಕಟವಾದ ನಂತರ ದೊರೆಯುತ್ತಿರುವ ಅಭಿನಂದನೆಗಳ ಅಭಿಮಾನದ ಸುರಿಮಳೆಯಲ್ಲಿ ತೊಯ್ದು ಹೋಗಿದ್ದೇನೆ. ಸಣ್ಣ ಹಳ್ಳಿಯಲ್ಲಿ ಜನಿಸಿ, ಹರಿದ ಚಾಪೆಯ ಮೇಲೆ, ಹರಿದ ಕಂಬಳಿ ಹೊದ್ದು ಮಲಗುವುದು, ಅರೆಹೊಟ್ಟೆಯ ಅರೆಮೈಯಲ್ಲಿ ಇರುತ್ತಿದ್ದೆ. ಉನ್ನತ ಶಿಕ್ಷಣದ ಅವಕಾಶದಿಂದ ವಂಚಿತನಾಗಿ ಸಾಮಾನ್ಯ ವ್ಯಕ್ತಿಯಾದ ನನಗೆ ಇಂತಹ ಉನ್ನತ ಸ್ಥಾನಮಾನಗಳನ್ನು ಪಡೆದಿದ್ದೇ ಒಂದು ಸೋಜಿಗ ಎನಿಸಿದೆ. ಮೊದಲಿನಿಂದಲೂ ನನಗೆ ಸಿಕ್ಕ ಅವಕಾಶಗಳನ್ನು ನಿಷ್ಠೆಯಿಂದ ಬಳಸಿಕೊಳ್ಳುವುದರೊಂದಿಗೆ ತಂದೆ–ತಾಯಿಯ ಮಾತುಗಳನ್ನು ಪಾಲಿಸುತ್ತಾ ಬಂದಿರುವುದೇ ನನ್ನ ಈ ಯಶಸ್ಸಿಗೆ ಕಾರಣ ಎಂದರು.

ನಾನು ಅದೃಷ್ಟವಂತ: ರಾಜ್ಯ ಸರ್ಕಾರ ನನಗೆ ಅತ್ಯಂತ ಉನ್ನತವಾದ ರಾಷ್ಟ್ರೀಯ ಬಸವ ಪುರಸ್ಕಾರ ನೀಡಿ ಗೌರವಿಸಿದೆ. ಜಾನಪದ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ನೀಡಿದೆ. ಕನ್ನಡ ವಿಶ್ವವಿದ್ಯಾನಿಲಯದಿಂದ ನಾಡೋಜ ಗೌರವ ದೊರೆತಿದೆ. ರೆಡ್‌ಕ್ರಾಸ್ ಸಂಸ್ಥೆ ಸಮಾಜ ಸೇವೆಗಾಗಿ ಕೊಡುವ ಸಿಲ್ವರ್ ಎಲಿಫೆಂಟ್ ಉನ್ನತ ಪ್ರಶಸ್ತಿಯನ್ನು ರಾಷ್ಟ್ರಪತಿಗಳು ಕೊಟ್ಟಿದ್ದಾರೆ. ಆದರೆ, ಈಗ ಕಸಾಪ ನೀಡಿರುವ ಗೌರವ ದೊಡ್ಡದು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಿರುವುದಕ್ಕೆ ನಾನು ಅದೃಷ್ಟವಂತ ಎಂದು ಭಾವಿಸಿದ್ದೇನೆ ಎಂದು ಹರ್ಷ ವ್ಯಕ್ತಪಡಿಸಿದರು.

ಬದುಕಿನಲ್ಲಿ ಗೋಚರಿಸದ ಶಕ್ತಿಗಳು ಸಿಕ್ಕಿವೆ: ನನ್ನ ಬದುಕಿನಲ್ಲಿ ಕಾಣದ ಅಥವಾ ಗೋಚರಿಸದ ಅನೇಕ ಶಕ್ತಿಗಳು ಕೆಲಸ ಮಾಡಿವೆ. ಅನೇಕ ಸಂದರ್ಭದಲ್ಲಿ ಅನೇಕರು ಬಚಾವ್ ಆದಾಗ ಅದೃಷ್ಟವಂತರು ಎನ್ನಿಸಿಕೊಳ್ಳುತ್ತಾರೆ. ಅಪಘಾತದಿಂದ ಪಾರಾದಾಗ, ಡೊನೇಷನ್ ಇಲ್ಲದೆ ಕಾಲೇಜಿನಲ್ಲಿ ಸೀಟು ಸಿಕ್ಕಾಗ, ಚುನಾವಣೆಯಲ್ಲಿ ಗೆದ್ದಾಗ, ಕಳೆದ ವಸ್ತು ಸಿಕ್ಕಾಗ, ಲಾಟರಿ ಹೊಡೆದಾಗ, ಅನುಕೂಲಸ್ಥರ ಮನೆಯ ಹೆಣ್ಣು ದೊರೆತಾಗ, ಪರೀಕ್ಷೆಯಲ್ಲಿ ಅನಿರೀಕ್ಷಿತವಾಗಿ ಪಾಸಾದಾಗ, ಕಳವು ಮಾಡಿ ಯಾರ ಕೈಗೂ ಸಿಗದಿದ್ದಾಗ, ಜೂಜಿನಲ್ಲಿ ಗೆದ್ದಾಗ, ಸಮೃದ್ಧ ಬೆಳೆ ಬಂದಾಗ, ವರ್ಗಾವಣೆಯಲ್ಲಿ ಕೇಳಿದ ಸ್ಥಳ ದೊರೆತಾಗ, ಬಹಳ ಕಾಲದ ನಂತರ ಮಕ್ಕಳಾದಾಗ, ನ್ಯಾಯಾಲಯದಲ್ಲಿ ವ್ಯಾಜ್ಯ ಗೆದ್ದಾಗ, ಭ್ರಷ್ಟಾಚಾರದ ಆರೋಪದಿಂದ ಮುಕ್ತವಾದಾಗ, ಸಂಚಾರ ನಿಯಮ ಉಲ್ಲಂಘಿಸಿದರೂ ಪೊಲೀಸರ ಕೈಗೆ ಸಿಕ್ಕದಿದ್ದಾಗ ಅದೃಷ್ಟ ಅಥವಾ ಅದೃಷ್ಟಶಾಲಿ ಎಂದುಕೊಳ್ಳುತ್ತಾರೆ. ಆದರೆ, ಈ ಯಾವ ಸಂದರ್ಭಕ್ಕೂ ಸಲ್ಲದ ನಾನೂ ಅದೃಷ್ಟವಂತನೇ ಸರಿ ಎಂದರು. ಗೊ.ರು.ಚ ಅವರ ಈ ಮಾತಿಗೆ ಸಭಿಕರು ಚಪ್ಪಾಳೆ ತಟ್ಟಿ ಸಹಮತಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಮ.ಗು. ಸದಾನಂದಯ್ಯ ಹಾಗೂ ಪ್ರೊ.ಎಸ್.ಜಿ. ಶಿವಶಂಕರ್ ಸಂಪಾದನೆಯ 'ಶರಣ ದರ್ಶನ' ಕೃತಿಯನ್ನು ಬಿಡುಗಡೆ ಮಾಡಿದರು. ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಅಭಿನಂದನಾ ಭಾಷಣ ಮಾಡಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರಾಧ್ಯಾಪಕಿ ಜ್ಯೋತಿ ಶಂಕರ್ ಕೃತಿ ಪರಿಚಯಿಸಿದರು. ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ಜಿಲ್ಲಾ ಘಟಕದ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಪಾಲ್ಗೊಂಡಿದ್ದರು.

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.18– ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.19 ರಂದು ಬೆಳಗ್ಗೆ 10 ಗಂಟೆಯಿಂದ 5.30 ಗಂಟೆಯವರೆಗೆ ರಾಮಾನುಜ ರಸ್ತೆ 1 ರಿಂದ 9ನೇ ಕ್ರಾಸ್‌ವರೆಗೆ, ಹೊಸಬಂಡಿಕೇರಿ, ಜೆಎಸ್‌ಎಸ್ ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂನ ಹಲವು ಭಾಗಗಳು, ತ್ಯಾಗರಾಜ ರಸ್ತೆ, ಚಾಮುಂಡಿಬೆಟ್ಟ ಮತ್ತು ಪಾದ, ಗುಂಡೂರಾವ್‌ನಗರ, ದತ್ತನಗರ, ಮುನೇಶ್ವರನಗರ, ಗೌರಿಶಂಕರನಗರ, ನಂಜನಗೂಡು ಟೋಲ್‌ಗೇಟ್, ತಾವರೆಕೆರೆ, ಜಾಕಿ ಕ್ವಾರ್ಟರ್ಸ್, ರೇಸ್ ಕೋರ್ಸ್ ಹಿಂಭಾಗ, ಸಬರ್ಬ್ ಬಸ್‌ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯದ ಸುತ್ತ–ಮುತ್ತ, ಸರ್ಕಾರಿ ಅತಿಥಿ ಗೃಹ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು, ತಾಲೂಕು ಕಛೇರಿ, ಡಿ.ದೇವರಾಜ ಅರಸು ರಸ್ತೆ, ಚಾಮುಂಡಿಬೆಟ್ಟ, ಸಿದ್ಧಾರ್ಥ ನಗರ, ಕುರುಬಾರಹಳ್ಳಿ, ಜೆಸಿ ನಗರ, ಕೆಸಿ ನಗರ, ಜೆಎಸ್‌ಎಸ್ ಆಯುರ್ವೇದಿಕ್ ಸುತ್ತ–ಮುತ್ತ, ಅರಮನೆ ಸುತ್ತ–ಮುತ್ತಲಿನ ಪ್ರದೇಶಗಳು, ಶ್ರೀ ಹರ್ಷ ರಸ್ತೆ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಸುತ್ತ–ಮುತ್ತಲಿನ ಪ್ರದೇಶಗಳು, ಧನ್ವಂತರಿ ರಸ್ತೆ ಹಾಗೂ ಶಿವರಾಂಪೇಟೆ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹಾಗೆಯೇ ನಿರ್ವಹಣಾ ಕಾರ್ಯ ನಿಮಿತ್ತ ಡಿ.20 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ದಟ್ಟಗಳ್ಳಿ 3ನೇ ಹಂತ, ತ್ರಿವೇಣಿ ಸೂಪರ್ ಮಾರ್ಕೆಟ್ ಏರಿಯಾ, ಕದಂಬ ಬೇಕರಿ ಏರಿಯಾ, ದಟ್ಟಗಳ್ಳಿ 'ಐ'ಬ್ಲಾಕ್, ಮುಡಾ ಎಂಪ್ಲಾಯಿಸ್ ಲೇಔಟ್, ಆಂದೋಲನ ವೃತ್ತ, ಸಬ್‌ರಿಜಿಸ್ಟ್ರಾರ್ ಆಫೀಸ್, ಕನಕದಾಸ ನಗರ, ಆದಿತ್ಯ ಸರ್ಕಲ್, ಸೋಮನಾಥ ನಗರ, ಮಹಾಲಕ್ಷ್ಮೀ ಬಡಾವಣೆ ಕೇರ್ಗಳ್ಳಿ, ಕಲ್ಕಿ ಬಡಾವಣೆ, ನಂದಿ ಸರ್ಕಲ್ ದಟ್ಟಗಳ್ಳಿ, ಜೋಡಿ ಬೇವಿನಮರ ದಟ್ಟಗಳ್ಳಿ, ರಾಮಕೃಷ್ಣನಗರ, ಆರ್‌ಟಿ ನಗರ, ಲಿಂಗಾಂಬುದಿ ಪಾಳ್ಯ, ಯೂನಿವರ್ಸಿಟಿ ಲೇಔಟ್, ವಾಸುಲೇಔಟ್, ಕೆ.ಬ್ಲಾಕ್ ಆರ್‌ಕೆ ನಗರ, ಮೂಗನಹುಂಡಿ, ನಗರ್ತಹಳ್ಳಿ, ದೇವಗಳ್ಳಿ, ಬಲ್ಲಳ್ಳಿ ಅನಗಳ್ಳಿ, ತಿಬ್ಬಯ್ಯನಹುಂಡಿ, ಬೀರಿಹುಂಡಿ ಐ.ಪಿ ಅಮಿಟ್ಯಾಜ್ ವಿಸನಿನಿ ಮುಖ್ಯ ಇಂಜಿನಿಯರ್ ಕಛೇರಿ, ಹೆಲ್ತ್ ಸಿಟಿ, ಕಾರ್ತಿಕ ಬಡಾವಣೆ ಐ ಬ್ಲಾಕ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚೆಸ್ಕ್ ಪ್ರಕಟಣೆ ತಿಳಿಸಿದೆ.

ರಾಮಾಯಣಕ್ಕೆ ಎಂದಿಗೂ ಸಾವಿಲ್ಲ...

ಖ್ಯಾತ ಪ್ರವಚನಕಾರ ಡಾ.ಪಾವಗಡ ಪ್ರಕಾಶ್‌ರಾವ್ ಸ್ಪಷ್ಟನೆ

ಮೈಸೂರು, ಡಿ.18(ಎಸ್‌ಪಿಎನ್)– 21 ಸಾವಿರ ಶ್ಲೋಕಗಳನ್ನೊಳಗೊಂಡ ರಾಮಾಯಣ ಗ್ರಂಥಕ್ಕೆ ಎಂದಿಗೂ ಸಾವಿಲ್ಲ. ಸೂರ್ಯ–ಚಂದ್ರ ಇರುವವರೆಗೂ 'ರಾಮಾಯಣ ಗ್ರಂಥ' ಇರುತ್ತದೆ ಎಂದು ಖ್ಯಾತ ಪ್ರವಚನಕಾರ ಡಾ.ಪಾವಗಡ ಪ್ರಕಾಶ್ ರಾವ್ ಅಭಿಪ್ರಾಯಪಟ್ಟರು.

ಮೈಸೂರು–ಊಟಿ ರಸ್ತೆಯ ಅವಧೂತ ದತ್ತಪೀಠ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ದತ್ತಸೇನೆ ವತಿಯಿಂದ ಏರ್ಪಡಿಸಿದ್ದ 'ದತ್ತ ಅವಧೂತ ಅವತಾರ' ವಿಷಯ ಪ್ರವಚನ ಮಾಲಿಕೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ರಾಮಾಯಣ ಗ್ರಂಥ ಬಹುತೇಕ ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ರಚಿತವಾಗಿವೆ. ಆಸ್ತಿಕರು–ನಾಸ್ತಿಕರು ಸೇರಿದಂತೆ ಎಲ್ಲಾ ವರ್ಗದ ವಿದ್ವಾಂಸರು ರಾಮಾಯಣ ಗ್ರಂಥವನ್ನು ರಚಿಸಿದ್ದಾರೆ, ಅನುವಾದಿಸಿದ್ದಾರೆ ಹಾಗೂ ವಿಮರ್ಶೆ ಮಾಡಿದ್ದಾರೆ. ಈ ಎಲ್ಲಾ ಪುಸ್ತಕಗಳನ್ನು ಒಂದೆಡೆ ಹಾಕಿದರೆ, ಈ ಸಭಾಂಗಣ (ನಾದಮಂಟಪ)ವೇ ತುಂಬಿ ಹೋಗುತ್ತದೆ ಎಂದರು. 'ಭಗವದ್ಗೀತೆ'ಯಲ್ಲಿ ಬರುವ ಶ್ರೀಕೃಷ್ಣ ಪರಮಾತ್ಮ ಶಾಂತ ಸ್ವರೂಪಿಯಾಗಿ ಕಾಣಿಸಿಕೊಂಡಿದ್ದಾರೆ. ದ್ರೋಣಾಚಾರ್ಯರನ್ನು ವಧಿಸುವ ಸಂದರ್ಭದಲ್ಲಿ ಮಾತ್ರ ಶ್ರೀಚಕ್ರವನ್ನು ಪ್ರಯೋಗಿಸುವುದನ್ನು ಬಿಟ್ಟರೆ, ಮಹಾಭಾರತದಲ್ಲಿ ಹೆಚ್ಚು ಶಸ್ತ್ರವನ್ನು ಉಪಯೋಗಿಸಿಲ್ಲ. ಶಾಂತ ಸ್ವರೂಪವಾಗಿ ಇತರರಿಗೆ ಮಾರ್ಗದರ್ಶನ ಮಾಡಿದ್ದಾರೆ ಎಂದರು.



ಖ್ಯಾತ ಪ್ರವಚನಕಾರ ಡಾ.ಪಾವಗಡ ಪ್ರಕಾಶ್‌ರಾವ್ ಪ್ರವಚನ ನೀಡುತ್ತಿರುವುದು

'ಅವಧೂತ ಪರಂಪರೆ ಎಂದರೆ, ಲೋಕದ ವ್ಯಾಮೋಹದಿಂದ ದೂರವಿದ್ದು, ಭಗವಂತನ ಸ್ಮರಣೆಯಲ್ಲಿ ಬದುಕುವುದು ಎಂದರ್ಥ. ಹಲವು ವರ್ಷಗಳಿಂದ ಲೋಕಕಲ್ಯಾಣದಲ್ಲಿ ತೊಡಗಿರುವ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಬಾಹ್ಯ ದೇಹಕ್ಕೆ ಪ್ರಸ್ತುತ ಮುಪ್ಪು ಆವರಿಸಿದೆ. ಆದರೆ, ಅವರ ಆತ್ಮ ಇನ್ನು ಯೌವನಾವಸ್ಥೆಯಲ್ಲಿದೆ. ಸದಾ ಭಗವಂತನ ಸೇವೆಯಲ್ಲಿ ತೊಡಗಿರುವ ಶ್ರೀ ಗಣಪತಿ ಸಚ್ಚಿದಾನಂದ ಅವಧೂತರು ಅವರು, 'ಅಹಂ ಬ್ರಹ್ಮಾಸ್ಮಿ'ಯಾಗಿ ಹೊರಹೊಮ್ಮಿದ್ದಾರೆ ಎಂದರು.

> **"'ಪ್ರಸ್ಥ' ಎಂದರೆ ಗಂಡು–ಹೆಣ್ಣಿಗೆ ಸಂಬಂಧಿಸಿದ ಒಂದು ದಿನದ ಕ್ರಿಯೆ ಮಾತ್ರವಲ್ಲ. ಈ ಕ್ರಿಯೆಗೂ ಶಾಸ್ತ್ರದಲ್ಲಿ ಸ್ಪಷ್ಟ ಸಂದೇಶವಿದೆ. ನಿಮಗೆ ಒಳ್ಳೆಯ ಸುಪುತ್ರರನ್ನು ಪಡೆಯಬೇಕೆಂದರೆ, ಪ್ರಸ್ಥ ಶಾಸ್ತ್ರದ ಪ್ರಕಾರ ನಡೆದುಕೊಳ್ಳಿ. ಬೇಕಾಬಿಟ್ಟಿಯಲ್ಲಿ ಪ್ರಸ್ಥ ಕ್ರಿಯೆಗಳು ನಡೆದರೆ, ನಿಮ್ಮ ಕುಟುಂಬದಲ್ಲಿ ಹುಟ್ಟುವ ಮಕ್ಕಳು ಭವಿಷ್ಯದಲ್ಲಿ ಲೋಕಕಂಟಕರಾಗುವ ಸಂಭವ ಇರುತ್ತದೆ. ಇದರ ಬಗ್ಗೆ ಕುಟುಂಬದ ಹಿರಿಯರು ಎಚ್ಚರ ವಹಿಸಬೇಕು.**
> **– ಡಾ.ಪಾವಗಡ ಪ್ರಕಾಶ್ ರಾವ್, ಖ್ಯಾತ ಪ್ರವಚನಕಾರರು**

ದತ್ತಾತ್ರಯ ಎಂದರೆ ಬ್ರಹ್ಮ, ವಿಷ್ಣು, ಮಹೇಶ್ವರತ್ರಯರ ದೈವಾಂಶವುಳ್ಳವರು. ಹಲವು ವರ್ಷಗಳಿಂದ ದತ್ತಾತ್ರೇಯನ ಸೇವೆ ಮಾಡುತ್ತಾ, ಆಧ್ಯಾತ್ಮ ಕ್ಷೇತ್ರದ ಮೇರುಪರ್ವತವಾಗಿ ಹೊರಹೊಮ್ಮಿರುವ ಶ್ರೀಗಳು, ಶಾಂತ ಸ್ವರೂಪಿಗಳಾಗಿ ನಿತ್ಯ ಹಲವು ಭಕ್ತರ ನೋವು–ನಲಿವಿಗೆ ಸ್ಪಂದಿಸುತ್ತಿದ್ದಾರೆ. ಹಾಗಾಗಿ ಕಿರಿಯ ಅವಧೂತರಾದ ದತ್ತ ವಿಜಯಾನಂದ ತೀರ್ಥರು, ಹಿರಿಯ ಅವಧೂತರನ್ನು ಸ್ಮರಿಸುವ ಕೆಲಸದಲ್ಲಿ ತೊಡಗಬೇಕು ಎಂದು ಕಿವಿಮಾತು ಹೇಳಿದರಲ್ಲದೆ, 'ದತ್ತಾತ್ರೇಯ'ನ ಪೌರಾಣಿಕ ಇತಿಹಾಸ ಹಾಗೂ ದತ್ತ ಅವಧೂತ ಅವತಾರ ವಿಷಯಗಳ ಕುರಿತು ಸುದೀರ್ಘ ಚಿತ್ರಣ ನೀಡಿದರು.

ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಉದ್ಯಮಿ ರವಿಶಾಸ್ತ್ರಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಕೆ.ರಘುರಾವ್ ವಾಜಪೇಯಿ, ದತ್ತ ಸೇನೆಯ ಕೆ.ಆರ್.ಸತ್ಯನಾರಾಯಣ, ಧಾರ್ಮಿಕ ಮುಖಂಡ ಭಾನುಪ್ರಕಾಶ್ ಸೇರಿದಂತೆ ಇತರರಿದ್ದರು.

'ಗೃಹಲಕ್ಷ್ಮಿ' ಯೋಜನೆ ನಿಲ್ಲಿಸುವ ಮಾತೇ ಇಲ್ಲ

ಫಲಾನುಭವಿಗಳೊಂದಿಗೆ ಸಂವಾದದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

ಬೆಳಗಾವಿ, ವಿಧಾನಮಂಡಲ, ಡಿ.18 (ಕೆಎಂಶಿ)– ಮಹಿಳೆಯರನ್ನು ಆರ್ಥಿಕ ಹಾಗೂ ಸಾಮಾಜಿಕವಾಗಿ ಸಬಲರನ್ನಾಗಿಸುವ ಗೃಹಲಕ್ಷ್ಮಿ ಯೋಜನೆ ನಿಲ್ಲಿಸುವ ಮಾತೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬೆಳಗಾವಿಯ ಸುವರ್ಣ ಸೌಧಕ್ಕೆ ಆಗಮಿಸಿದ್ದ ಗೃಹಲಕ್ಷ್ಮಿಯರ ಜೊತೆ ಸಂವಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೃಹಲಕ್ಷ್ಮಿ ಯೋಜನೆಯಿಂದ ಅತ್ತೆ–ಸೊಸೆಯ ಮಧ್ಯೆ ಜಗಳ ತಂದಿದೆ ಎಂಬುದಾಗಿ ಬಿಜೆಪಿಯವರು ಆರೋಪಿಸಿದ್ದರು, ಆದರೆ, ಇಂದಿನ ಕಾರ್ಯಕ್ರಮಕ್ಕೆ ಅತ್ತೆ–ಸೊಸೆಯರೇ ಜೊತೆ ಜೊತೆಯಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಯೋಜನೆಯಿಂದ ತಮಗಾಗಿರುವ ಲಾಭದ ಬಗ್ಗೆ ಮಾತನಾಡಿದ್ದಾರೆ ಎಂದರು.

ಈ ಯೋಜನೆಯಿಂದ ಮಹಿಳೆಯರು ಆರ್ಥಿಕ, ಸಾಮಾಜಿಕವಾಗಿ ಸಬಲರಾಗುತ್ತಿರುವುದು ಸಂತೋಷದ ವಿಚಾರ, ಆದ್ದರಿಂದ ಮಹಿಳೆಯರನ್ನು ಸಶಕ್ತಗೊಳಿಸುವ ಯೋಜನೆ ಮುಂದುವರಿಸಲಿದ್ದೇವೆ.



ಮಹಾತ್ಮಾಗಾಂಧಿ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸದೇ ಇದ್ದಿದ್ದರೆ, ಎಲ್ಲರೂ ಸ್ವತಂತ್ರವಾಗಿರಲು ಸಾಧ್ಯವಾಗುತ್ತಿತ್ತೇ, ಸಂವಿಧಾನ ರಚನೆಯಾದ ನಂತರವೇ ಇಂತಹ ಹಕ್ಕುಗಳನ್ನು ಚಲಾಯಿಸಲು ಸಾಧ್ಯವಾಗಿರುವುದು.

ಬಿಜೆಪಿಯವರು ಸಂವಿಧಾನ ವಿರೋಧಿಗಳು, ಭಾರತೀಯತೆಯಲ್ಲಿ ನಂಬಿಕೆ ಇಲ್ಲದ ಇವರು ಮನುಸ್ಮೃತಿಗೆ ಒತ್ತು ನೀಡುತ್ತಾರೆ. ಮಹಾತ್ಮಗಾಂಧಿ ಅಲಂಕರಿಸಿದ ಎಐಸಿಸಿ ಅಧಿವೇಶನಕ್ಕೆ ಅಡ್ಡಿಪಡಿಸಿದರೆ ಕಾನೂನು ಕ್ರಮಕೈಗೊಳ್ಳಲಾಗುವುದು. ಬೆಳಗಾವಿ ಅಧಿವೇಶನದಲ್ಲಿ ವಿರೋಧಪಕ್ಷ ಬಿಜೆಪಿ ರಾಜ್ಯದ ಅಭಿವೃದ್ಧಿ, ಸರ್ಕಾರದ ತಪ್ಪು–ಒಪ್ಪುಗಳ ಬಗ್ಗೆ ಮಾತನಾಡಬೇಕು, ಅದನ್ನು ಹೊರತುಪಡಿಸಿ, ರಾಜಕೀಯ ಕಾರಣಗಳಿಗಾಗಿ ಅಧಿವೇಶನ ಬಳಸಿಕೊಳ್ಳುತ್ತಿದ್ದಾರೆ ಎಂದರು.

ಅಭಿಯಾನ ಮಾದರಿ ಮುಜರಾಯಿ ಆಸ್ತಿ ಸಂರಕ್ಷಣೆ

ರಾಜ್ಯದಲ್ಲಿ ಈ ವರ್ಷ 5022 ಮುಜರಾಯಿ ಆಸ್ತಿಗಳ ಖಾತೆ

*** ಕಂದಾಯ ಸಚಿವ ಕೃಷ್ಣಭೈರೇಗೌಡ ಮಾಹಿತಿ**
*** ಮಾಜಿ ಸೈನಿಕರಿಗೆ ಭೂಮಿ ಬದಲು ನಿವೇಶನ**



ಬೆಳಗಾವಿ, ವಿಧಾನಮಂಡಲ, ಡಿ.18 (ಕೆಎಂಶಿ)–ರಾಜ್ಯದಲ್ಲಿ ಮುಜರಾಯಿ ಆಸ್ತಿಗಳ ಸಂರಕ್ಷಣೆಯನ್ನು ಅಭಿಯಾನ ಮಾದರಿಯಲ್ಲಿ ಕೈಗೊಳ್ಳಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ವಿಧಾನಪರಿಷತ್ತಿನಲ್ಲಿ ಇಂದು ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ರವಿಕುಮಾರ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಈ ವರ್ಷ ರಾಜ್ಯದಲ್ಲಿ 5022 ಮುಜರಾಯಿ ಆಸ್ತಿಗಳನ್ನು ಮುಜರಾಯಿ ಇಲಾಖೆಗೆ ಖಾತೆ ಮಾಡಿಕೊಡುವ ಮೂಲಕ ಸಂರಕ್ಷಣೆ ಮಾಡಿದ್ದು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯದ ಮುಜರಾಯಿ ಆಸ್ತಿಗಳ ಸಂರಕ್ಷಣೆಗೆ ಆದ್ಯತೆ ನೀಡಲಾಗಿದೆ ಎಂದರು.

ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಾಲಯಕ್ಕೆ ದಾನವಾಗಿ ನೀಡಿರುವ 1198.34 ಎಕರೆ ಜಾಗದಲ್ಲಿ ಒತ್ತುವರಿಯಾಗಿರುವ ಜಾಗದ ವಿಷಯದ ಕುರಿತಂತೆ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಒತ್ತುವರಿ ಜಾಗವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಮಾಜಿ ಯೋಧರಿಗೆ ನಿವೇಶನ: ಸಿ.ಎನ್. ಮಂಜೇಗೌಡ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿರುವ ಮಾಜಿ ಸೈನಿಕರಿಗೆ ವ್ಯವಸಾಯದ ಉದ್ದೇಶಕ್ಕಾಗಿ ಭೂ ಮಂಜೂರಾತಿ ಮಾಡಲು ರಾಜ್ಯದಲ್ಲಿ ಸರ್ಕಾರಿ ಭೂಮಿಯ ತೀವ್ರ ಕೊರತೆ ಇರುವುದರಿಂದ, ಅವರಿಗೆ ನಿವೇಶನ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ದೇಶಕ್ಕಾಗಿ ಸೇವೆ ಸಲ್ಲಿಸಿರುವ ಮಾಜಿ ಸೈನಿಕರ ಕುರಿತಂತೆ ಗೌರವ ಮತ್ತು ಅಭಿಮಾನ ಇದೆ. ಜವಾನ್ ಸಮ್ಮಾನ್ ಹೆಸರಿನಲ್ಲಿ ಮಾಜಿ ಸೈನಿಕರಿಗೆ ಸರ್ಕಾರಿ ವೆಚ್ಚದಲ್ಲಿಯೇ ಲೇಔಟ್ ಮಾಡಿ, ನಿವೇಶನ ನೀಡುವ ಕುರಿತಂತೆ ಪ್ರಸ್ತುತ ಅಧಿವೇಶನ ಮುಗಿದ ಕೂಡಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದರು.

ರಾಜ್ಯದಲ್ಲಿ ಪ್ರಸ್ತುತ 16,065 ಮಾಜಿ ಸೈನಿಕರು ಭೂ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ್ದು, ಅದರಲ್ಲಿ 6,783 ಅರ್ಜಿ ವಿಲೇವಾರಿ ಮಾಡಿದ್ದು, 9282 ಅರ್ಜಿಗಳು ಬಾಕಿ ಇವೆ ಎಂದರು.

'ಚಿತ್ತಾರ ಜೋಳಿಗೆ' ಕವನ ಸಂಕಲನದಲ್ಲಿ ದಲಿತ ಸಮುದಾಯದ ಸಮೃದ್ಧ ಸಂಸ್ಕೃತಿ ಅನಾವರಣ

ಸದರಿ ಕವನ ಸಂಕಲನ ಬಿಡುಗಡೆಗೊಳಿಸಿ ವಿಮರ್ಶಕಿ ಪ್ರೊ.ಎಂ.ಎಸ್.ಆಶಾದೇವಿ ಅಭಿಮತ

ಮೈಸೂರು,ಡಿ.18(ಪಿಎಂ)– ದಲಿತ ಸಮುದಾಯದ ಸಮೃದ್ಧ ಸಂಸ್ಕೃತಿಯನ್ನು ಪ್ರೊ.ಎಂ.ಎಸ್.ಶೇಖರ್ ಅವರ 'ಚಿತ್ತಾರ ಜೋಳಿಗೆ' ಕವನ ಸಂಕಲನ ಅನಾವರಣಗೊಳಿಸಿದೆ ಎಂದು ವಿಮರ್ಶಕಿ ಪ್ರೊ. ಎಂ.ಎಸ್.ಆಶಾದೇವಿ ಹೇಳಿದರು.

ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಅಭಿರುಚಿ ಪ್ರಕಾಶನದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 'ಚಿತ್ತಾರ ಜೋಳಿಗೆ' ಕವನ ಸಂಕಲನ ಬಿಡುಗಡೆಗೊಳಿಸಿ, ಕೃತಿ ಕುರಿತು ಮಾತನಾಡಿದರು. ಈ ಸಂಕಲನ ಹಿಮ್ಮುಖ ಪ್ರಯಾಣವಾಗಿದ್ದು, ಇದು ಕವಿಯ ಮೂಲಕ ತಳಸಮುದಾಯದ ಹಿನ್ನೋಟ ಕೊಡುವ ಪ್ರಯತ್ನದಲ್ಲಿ ಸಾಗುತ್ತದೆ. ತಾನು ಸಾಗಿ ಬಂದ ಬದುಕಿನ ಪಯಣವನ್ನು ನೋಡುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಮೂರು ದಶಕಗಳ ಹಿಂದೆ ಸಾಹಿತಿ ಡಿ.ಆರ್.ನಾಗರಾಜು ಅವರು ಯಾವುದನ್ನು ವಿಸ್ಮೃತಿ ಎಂದು ಕರೆದರೋ ಅದರ ಅನಾವರಣದಂತೆ ಇಡೀ ಕವನ ಸಂಕಲನ ಕಾಣುತ್ತದೆ. ಮೂರು ದಶಕಗಳಿಂದ ದಲಿತರು ಹಾಗೂ ಮಹಿಳೆಯರು ತಮ್ಮ ಪರಂಪರೆಯನ್ನು ಕಟ್ಟುವ ಪ್ರಯತ್ನದಲ್ಲಿದ್ದು, ಅಂತೆಯೇ ಇದು ದಲಿತ ಸಮುದಾಯದ ಚರಿತ್ರೆಯನ್ನು ಕಟ್ಟುವ ಪ್ರಯತ್ನದಲ್ಲಿ ಸಾಗುತ್ತದೆ ಎಂದು ವಿವರಿಸಿದರು. ತಮ್ಮ ಚರಿತ್ರೆಯನ್ನು ಕಟ್ಟುವ ಪ್ರಯತ್ನದಲ್ಲಿ ದಲಿತರು ಮತ್ತು ಮಹಿಳೆಯರು ಇಬ್ಬರು ತೊಡಗಿಕೊಂಡಿರುವ ಕಾಲಘಟ್ಟ ಇದಾಗಿದ್ದು, ಇದನ್ನು ಮೂಲಮುಖಿ ಪ್ರಯಾಣ ಎಂದು ಕರೆಯಬಹುದು. ನಾವು ಇತಿಹಾಸ ಬದಲಿಸಲಾಗಲ್ಲ ನಿಜ. ಆದರೆ ಇತಿಹಾಸವನ್ನು ನೋಡುವ ನಮ್ಮ ನೋಟವನ್ನು ಬದಲಿಸುವುದರಿಂದ ನಾವು ಇತಿಹಾಸ ಕಟ್ಟಿಕೊಳ್ಳಲು ಸಾಧ್ಯವಿದೆ. ಚಿತ್ತಾರ ಜೋಳಿಗೆ ಕವನ ಸಂಕಲನದ ಮೂಲಧಾತುವೇ ಇದು. ಅಂದರೆ ಇದು ಮರು ಇತಿಹಾಸದ ಕಡೆಗೆ ಹೊರಳಿದೆ ಎಂದು ತಿಳಿಸಿದರು.



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಬುಧವಾರ 'ಚಿತ್ತಾರ ಜೋಳಿಗೆ' ಕವನ ಸಂಕಲನ ಬಿಡುಗಡೆ ಮಾಡಲಾಯಿತು.

ಸಾಮಾನ್ಯವಾಗಿ ಸ್ತ್ರೀವಾದಿಗಳು ತಮ್ಮದೇ ಆದ ಸಾಂಸ್ಕೃತಿಕ ಇತಿಹಾಸ ಕಟ್ಟಿಕೊಳ್ಳಬೇಕು ಎಂದು ಬಯಸುತ್ತಾರೆ. ಏಕೆಂದರೆ ಅದೊಂದು ತಾತ್ವಿಕತೆಯಾಗುತ್ತದೆ. ದಲಿತರ ಮಟ್ಟಿಗೆ ಚರಿತ್ರೆ ದಾಖಲಾಗಿಲ್ಲವೆಂಬ ದೃಷ್ಟಿಕೋನವನ್ನೇ ಈ ಕವನ ಸಂಕಲನ ಪಕ್ಕಕ್ಕೆ ಸರಿಸುತ್ತದೆ. ದಲಿತ ಸಮುದಾಯದ ಚರಿತ್ರೆಯು ಕೀಳರಿಮೆ, ಮುಜುಗರದಿಂದ ಕೂಡಿದೆ ಎಂಬ ಸಂಗತಿ ನಡುವೆಯೂ ನಮ್ಮ ಜನಾಂಗದ ಪರಂಪರೆ ಸಮೃದ್ಧಿಯಾಗಿದೆ ಎಂದು ಇಡೀ ಕವನ ಸಂಕಲದ ಧ್ವನಿಸುತ್ತದೆ ಎಂದು ಹೇಳಿದರು. ನೆಲದ ಮೂಲ ಸಂಸ್ಕೃತಿಯ ಶಕ್ತಿ ಮತ್ತು ಸೌಂದರ್ಯ ಅರ್ಥ ಮಾಡಿಕೊಳ್ಳುವ ಒಂದು ಪ್ರಯತ್ನ ಇಲ್ಲಿ ವ್ಯಕ್ತವಾಗಿದೆ. ತನ್ನದೇ ಪರಂಪರೆಯ ಜೀವ ಸಂವಾದದಲ್ಲಿ ಇಲ್ಲಿನ ಕವಿತೆಗಳು ಜನ್ಮತಾಳಿವೆ. ಇಲ್ಲಿನ ಕವಿತೆಯೊಂದರಲ್ಲಿ ಬುಡುಬುಡುಕೆಯತನು ದಲಿತ ಪರಂಪರೆಯ ಒಬ್ಬ ವಕ್ತಾರನಾಗಿ ಕಾಣಿಸಿಕೊಳ್ಳುತ್ತಾನೆ. ನಮಗೆ ನಮ್ಮದೇ ಆದ ಪರಂಪರೆ ಇದ್ದು, ಅದಕ್ಕೆ ದಟ್ಟವಾದ ಮಣ್ಣಿನ ವಾಸನೆ ಇದೆ ಎಂಬುದನ್ನು ಕೃತಿಕಾರರು ಇಲ್ಲಿ ವ್ಯಕ್ತಪಡಿಸಿರುವುದನ್ನು ಕಾಣ ಬಹುದು. ಅದಕ್ಕೆ ಅದರದ್ದೇ ಆದ ಚಹರೆಗಳು ಇವೆ ಎಂಬುದನ್ನು ಇಲ್ಲಿ ಉಲ್ಲೇಖಿತವಾ ಗಿದ್ದು, ಸಾಂಸ್ಕೃತಿಕ ಚರಿತ್ರೆ ರಚನೆಯ ಮಹತ್ವವನ್ನು ಇಲ್ಲಿ ಕಾಣಬಹುದು ಎಂದರು. ಅನಾರೋಗ್ಯ ಕಾರಣದಿಂದ ಕೃತಿ ಬಿಡುಗಡೆ ಮಾಡಬೇಕಿದ್ದ ಹಿರಿಯ ಕವಿ, ನಾಟಕಕಾರ ಪ್ರೊ.ಹೆಚ್.ಎಸ್.ಶಿವಪ್ರಕಾಶ್ ಗೈರಾಗಿದ್ದರು. ಅದಾಗ್ಯೂ ವಿಡಿಯೋ ಮೂಲಕ ಕೃತಿ ಮತ್ತು ಕೃತಿಕಾರರ ಬಗ್ಗೆ ವಿವರವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ದೃಶ್ಯ, ಶ್ರವ್ಯ, ಸ್ಪರ್ಶ ಅನುಭವ: ಎಂ.ಎಸ್.ಶೇಖರ್ ಅವರು ತಮ್ಮದೇ ಆದ ಒಂದು ಕಾವ್ಯದ ಹಾದಿಯನ್ನು ಕಂಡುಕೊಂಡಿದ್ದಾರೆ. ಈಗಿರುವ ಸಮಕಾಲೀನ ದಲಿತ ಸಾಹಿತ್ಯ, ಕಾವ್ಯದ ಮಾದರಿಗಳಿಗೆ ಭಿನ್ನವಾಗಿ ಒಂದು ಜಗತ್ತನ್ನು ಅವರು ಕಟ್ಟಿಕೊಟ್ಟಿದ್ದಾರೆ. ಶೋಷಿತ ವರ್ಗದ ಕಥಾನಕವು ಕುಲ ಪುರಾಣ ಮತ್ತು ಸ್ಥಳ ಪುರಾಣಗಳಿಂದ ನಿರ್ಮಿತವಾದದ್ದು. ಶೇಖರ್ ಅವರು ಕುಲ ಪುರಾಣ ಮತ್ತು ಸ್ಥಳ ಪುರಾಣದ ವಿವರಗಳಿಂದ ಇಲ್ಲಿ ಕವಿತೆಗಳನ್ನು ಕಟ್ಟಿಕೊಟ್ಟಿದ್ದಾರೆ. ಈ ಕವಿತೆಗಳಲ್ಲಿ ಶೋಷಣೆಯ ವಿರುದ್ಧ ಹೋರಾಟದ ದನಿ ಕಾಣುತ್ತದೆ. ಇಲ್ಲಿನ ಕವಿತೆಗಳಲ್ಲಿ ದೃಶ್ಯ, ಶ್ರವ್ಯ ಮತ್ತು ಸ್ಪರ್ಶ ಅನುಭವ ದೊರೆಯುತ್ತದೆ ಎಂದು ಅವರು ತಿಳಿಸಿದರು. ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಅಧ್ಯಕ್ಷತೆ ವಹಿಸಿದ್ದರು. ಕವಯಿತ್ರಿ ಪ್ರೊ.ಚ.ಸರ್ವಮಂಗಳಾ, ರಂಗಕರ್ಮಿ ಜನಾರ್ಧನ್ (ಜನ್ನಿ), ಕೃತಿಕಾರ ಪ್ರೊ.ಎಂ.ಎಸ್.ಶೇಖರ್, ಪ್ರಕಾಶಕ ಅಭಿರುಚಿ ಗಣೇಶ್ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಸೊಳ್ಳೆಗಳ ಕಾಟ ತಾಳಲಾರದೆ ರಕ್ತದ ಪ್ಯಾಕೆಟ್ ಕೊಡುತ್ತಾ ಈ ರಕ್ತದ ಪ್ಯಾಕೆಟ್ ತಗೊಳ್ಳಿ. ನೀವು ನಿಮ್ಮ ಫ್ಯಾಮಿಲಿ ಜೊತೆ ಎಂಜಾಯ್ ಮಾಡಿ. ನಮ್ಮನ್ನು ಹಾಯಾಗಿ ನಿದ್ದೆ ಮಾಡೋಕೆ ಬಿಡಿ...

ಸೊಳ್ಳೆ : ನೋ... ನಾವು ಲಂಚ ತಗೊಳಲ್ಲ. ನಮಗೆ ಬೇಕಾದ ಆಹಾರವನ್ನು ಕಷ್ಟಪಟ್ಟು ನಾವೇ ಸಂಪಾದನೆ ಮಾಡ್ಕೋತ್ತೀವಿ...!

ಮೈಸೂರು ಮಿತ್ರ

ಗುರುವಾರ, 19 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಬಡವರು ಹಸಿದಿರುವುದು ಅಕ್ಕರೆಗಾಗಿ. ರೊಟ್ಟಿಗಾಗಿ ಅಲ್ಲ.

–ಮದರ್ ತೆರೇಸಾ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ರಾವಣನ ಮಾತಿಗೆ ಮನಸೋತವ,
ರಾಮನ ಮಾತಿಗೆ ಜಾಣನಾಗುವನೇ?

ನಿಮ್ಮ ಪತ್ರಗಳು

ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಲಿ

ಮಾನ್ಯರೆ,

ಡಿ.20 ರಿಂದ ಸಕ್ಕರೆಯ ನಾಡು ಎಂಬ ಕೀರ್ತಿಗೆ ಪಾತ್ರವಾಗಿರುವ ಮಂಡ್ಯ ನಗರದಲ್ಲಿ 87ನೇ ಅಖಿಲ ಭಾರತ ಕನ್ನಡಿಗರ ಸಾಹಿತ್ಯ ಸಮ್ಮೇಳನ ಪ್ರಾರಂಭವಾಗಲಿದ್ದು, ಅಂತಿಮ ಹಂತದ ಸಿದ್ಧತೆಗಳು ಸಮರೋಪಾದಿಯಲ್ಲಿ ನಡೆಯುತ್ತಿವೆ. ಸಮ್ಮೇಳನದ ಪ್ರಮುಖ ಆಕರ್ಷಣೆಯಾಗಿರುವ ಸಮ್ಮೇಳನದ ಅಧ್ಯಕ್ಷರ ಮೆರವಣಿಗೆಗೆ ವಿಶೇಷ ಒತ್ತು ನೀಡಲಾಗುತ್ತಿದೆ. ಇದೇ ಪ್ರಥಮ ಬಾರಿಗೆ ಸಮ್ಮೇಳನದಲ್ಲಿ ಬಾಡೂಟ ನೀಡಬೇಕೆಂಬ ಕೂಗು ಸಹ ಎದ್ದಿದೆ.

ಕನ್ನಡ ಸಾಹಿತ್ಯ ಸಮ್ಮೇಳನವೆಂದರೆ ಕನ್ನಡಿಗರ ಹಬ್ಬ. ಈ ಸಮ್ಮೇಳನದಲ್ಲಿ ಭಾಗವಹಿಸಲು ಕನ್ನಡಿಗರು ಸಂತೋಷ, ಸಡಗರ, ಸಂಭ್ರಮದಿಂದ ದೂರ ದೂರದ ಊರುಗಳಿಂದ ಬರುತ್ತಾರೆ. ಕವಿಗಳು, ಸಾಹಿತಿಗಳು, ಕಲಾವಿದರು, ಕಲಾವಿದೆಯರು ಹಾಗೂ ರಾಜ್ಯದ ಪ್ರತಿಯೊಬ್ಬ ಕನ್ನಡ ಪ್ರೇಮಿಯೂ ಈ ಸಮ್ಮೇಳನಕ್ಕೆ ಬರಬಹುದು. ಸಾಹಿತ್ಯ ಸಮ್ಮೇಳನದ ಹೆಸರಿನಲ್ಲಿ ವಿಚಾರಗೋಷ್ಠಿ, ವಿಚಾರ ಸಂಕಿರಣ, ಕವಿಗೋಷ್ಠಿ ಮುಂತಾದ ಕೆಲವು ಸಾಂಪ್ರದಾಯಿಕ ಕಾರ್ಯಕ್ರಮಗಳು ನಡೆಯುತ್ತಾ ಬಂದಿವೆ. ಇವುಗಳ ಮಧ್ಯೆ ಈ ಬಾರಿ ಪ್ರಪ್ರಥಮವಾಗಿ ಅಂಧರ ಕವಿಗೋಷ್ಠಿ ಆಯೋಜನೆಗೊಂಡಿರುವುದು ಗಮನಾರ್ಹವಾಗಿದೆ.

ಕನ್ನಡಿಗರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಈ ಸಮ್ಮೇಳನದಲ್ಲಿ ಚರ್ಚೆ ನಡೆಯಬೇಕು. ಹೊರ ರಾಜ್ಯಗಳಲ್ಲಿ ಕನ್ನಡಿಗರ ಮೇಲಾಗುತ್ತಿರುವ ದೌರ್ಜನ್ಯ ಮತ್ತು ದಬ್ಬಾಳಿಕೆಯ ಪ್ರಕರಣಗಳು, ಗಡಿ ಭಾಗದಲ್ಲಿ ಕನ್ನಡಿಗರ ದುಸ್ಥಿತಿ, ಕನ್ನಡಿಗರಿಗೆ ದೊರಕಬೇಕಾದ ಉದ್ಯೋಗ ಅವಕಾಶ, ಭಾಷೆಯ ಬಳಕೆ, ಬೆಳವಣಿಗೆ ಅದರಲ್ಲೂ ವಿಶೇಷವಾಗಿ ಕನ್ನಡ ಶಾಲೆಗಳ ಮುಚ್ಚುವಿಕೆ, ಮುಂತಾದವುಗಳ ಬಗ್ಗೆ ವಿಸ್ತೃತವಾದ ಚರ್ಚೆ ನಡೆಯುವುದರ ಜೊತೆಗೆ ಸಮ್ಮೇಳನದ ಅಂತ್ಯದಲ್ಲಿ ಇವುಗಳ ಬಗ್ಗೆ ಸರ್ವಾನುಮತದ ನಿರ್ಣಯ ಕೈಗೊಳ್ಳಬೇಕು. ಅತ್ಯಂತ ಪ್ರಾಚೀನವಾದ ಭಾಷೆಗಳಲ್ಲಿ ಒಂದಾಗಿರುವ ಕನ್ನಡ ಭಾಷೆಗೆ 2000 ವರ್ಷಗಳ ಸುದೀರ್ಘವಾದ ಇತಿಹಾಸವಿದೆ. ಈ ಮಣ್ಣಿನ ಪುಣ್ಯದ ಫಲ ವಿಶ್ವಾದ್ಯಂತ ಹಬ್ಬಿದೆ. ಕನ್ನಡವೆಂದರೆ ಹಾಲಿನ ಹೊಳೆ, ಕನ್ನಡವೆಂದರೆ ಜೇನಿನ ಮಳೆ. ಕನ್ನಡಮ್ಮನ ಕೀರ್ತಿ ಪತಾಕೆಯನ್ನು ಮುಗಿಲೆತ್ತರಕ್ಕೇರಿಸುವಲ್ಲಿ, ರಾಷ್ಟ್ರಕವಿ ಕುವೆಂಪು ಸೇರಿದಂತೆ ಅಸಂಖ್ಯಾತ ಮಹನೀಯರು ಅಹರ್ನಿಶಿ ದುಡಿದಿದ್ದಾರೆ. ಇಂತಹ ಪುಣ್ಯ ಪುರುಷರು ಬೆಳೆಸಿದ ಈ ಭಾಷೆಯ ಸಮ್ಮೇಳನ ಎಂದರೆ ಅದಕ್ಕೆ ಅತ್ಯಂತ ಹೆಚ್ಚಿನ ಮಹತ್ವವಿದೆ. ಒಟ್ಟಿನಲ್ಲಿ ಈ ಸಮ್ಮೇಳನ ಯಶಸ್ವಿಯಾಗಿ ನಡೆದು ಕನ್ನಡಿಗರ ಆಶಯಗಳು ಸಾಕಾರಗೊಳ್ಳಲೆಂದು ಆಶಿಸುತ್ತೇನೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಲ್ಯಾನ್ಸ್‌ಡೌನ್, ದೇವರಾಜ ಮಾರುಕಟ್ಟೆ ಪುನರ್‌ನಿರ್ಮಾಣ ನಿರ್ಧಾರ ಸ್ವಾಗತಾರ್ಹ

ಮಾನ್ಯರೆ,

ಶಿಥಿಲಾವಸ್ಥೆಯಲ್ಲಿರುವ ಮೈಸೂರಿನ ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಅನ್ನು ಸಂಪೂರ್ಣ ನೆಲಸಮಗೊಳಿಸಿ ಪುನರ್ ನಿರ್ಮಾಣ ಮಾಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹೇಳಿಕೆ ನೀಡಿದ್ದಾರೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಅನುಮೋದನೆ ಪಡೆದುಕೊಳ್ಳುವುದಾಗಿ ಹೇಳಿದ್ದಾರೆ. ಇದೊಂದು ಸ್ವಾಗತಾರ್ಹ ಬೆಳವಣಿಗೆ ಎನ್ನಬಹುದು. ಇದು ನಾಲ್ಕೈದು ವರ್ಷಗಳ ಹಿಂದೆಯೇ ನಡೆಯಬೇಕಾಗಿದ್ದ ಕೆಲಸ.

ಕಳೆದ ಎಂಟು ವರ್ಷಗಳ ಹಿಂದೆಯೇ ಲ್ಯಾನ್ಸ್‌ಡೌನ್ ಕಟ್ಟಡದ ಮಧ್ಯಭಾಗ ಮತ್ತು ದೇವರಾಜ ಮಾರುಕಟ್ಟೆಯ ಒಂದು ಭಾಗ ಕುಸಿದು ಅದಕ್ಕೆ ತೇಪೆ ಹಚ್ಚುವ ಕೆಲಸವನ್ನು ಅಂದಿನಿಂದಲೂ ಮಾಡುತ್ತಲೇ ಇದ್ದಾರೆ. ಈ ಎರಡೂ ಪಾರಂಪರಿಕ ಕಟ್ಟಡಗಳನ್ನು ನೆಲಸಮಗೊಳಿಸಿ ನೆಲಮಾಳಿಗೆಯಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿ, ಜನಸಾಮಾನ್ಯರಿಗೆ ಮೂಲ ಸೌಕರ್ಯಗಳನ್ನು ಒದಗಿಸಿ, ಹಿಂದಿನ ಪಾರಂಪರಿಕ ವಿನ್ಯಾಸವನ್ನು ಉಳಿಸಿಕೊಂಡು, ನಾಲ್ಕು ಅಂತಸ್ತಿನ ಕಟ್ಟಡಗಳು ನಿರ್ಮಾಣವಾಗುವಂತೆ ತಜ್ಞರ ಅಭಿಪ್ರಾಯ ಪಡೆದು ನೂತನ ಕಟ್ಟಡಗಳು ನಿರ್ಮಾಣವಾದರೆ ಇಲ್ಲಿ ಸಾವಿರಾರು ಮಂದಿ ತಮ್ಮ ಕುಟುಂಬಗಳು ಬದುಕನ್ನು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿದಂತಾಗುತ್ತದೆ, ಮೈಸೂರು ನಗರದ ಹೃದಯ ಭಾಗದಲ್ಲಿ ಸ್ವಲ್ಪ ಮಟ್ಟಿಗಾದರೂ, ವಾಹನಗಳ ಪಾರ್ಕಿಂಗ್ ಸಮಸ್ಯೆ ಬಗೆಹರಿಯುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಪಂಚಾಯ್ತಿ ಚುನಾವಣೆ : ಪಕ್ಷ, ಚಿಹ್ನೆ ಗಂಡಾಂತರಕ್ಕೆ ದಾರಿ

ಮಾನ್ಯರೆ,

1987ಕ್ಕೂ ಮೊದಲು ಇದ್ದಂತೆ ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಪಕ್ಷ, ಚಿಹ್ನೆಗಳ ಆಧಾರದ ಮೇಲೆ ನಡೆಸಲು ಸರ್ಕಾರ ಚಿಂತನೆ ನಡೆಸಿದೆ ಎಂಬ ದಿನಪತ್ರಿಕೆಗಳ ವರದಿ (16.12.24.) ಓದಿ ಒಂದು ಕ್ಷಣ ದಿಗ್ಭ್ರಮೆಯಾಯಿತು. ಈ ಹಿಂದೆ ಇದ್ದ ಪಕ್ಷ ರಾಜಕಾರಣದಿಂದ ಊರಿನ ಮುಖಂಡರ ನಡುವೆ ವೈಷಮ್ಯದಿಂದ ಪಂಚಾಯಿತಿ ಅಧ್ಯಕ್ಷ, ಸದಸ್ಯರ ಕೊಲೆಗಳು ನಡೆದು ಊರಿನಲ್ಲಿ ಗುಂಪುಗಾರಿಕೆ, ದ್ವೇಷ ಮನೆ ಮಾಡಿ ಊರಿಗೆ ಊರೇ ಹೊತ್ತಿ ಉರಿಯುತ್ತಿದ್ದುದನ್ನು ಗ್ರಾಮಗಳ ಹಿರಿಯರು ಇನ್ನೂ ಮರೆತಿಲ್ಲ. ಪಕ್ಷ, ಚಿಹ್ನೆರಹಿತ ಸ್ಪರ್ಧೆಯಿಂದಾಗಿ ಸ್ವಲ್ಪವಾದರೂ ಸಾಮರಸ್ಯ ಉಳಿದಿದೆ. ಅಷ್ಟಕ್ಕೂ ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಗೆಲುವಿಗೆ ಆಯಾ ವ್ಯಕ್ತಿಯ ಹಿನ್ನೆಲೆ ಮುಖ್ಯವಾಗಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲೂ ಹಣದ ಹೊಳೆ ಹರಿಯುವುದು ಮಾಮೂಲಿ ಎನ್ನುವಂತಾಗಿದೆ. ಅದೇನೇ ಇರಲಿ ರಾಜಕೀಯ ಪಕ್ಷಗಳು ತಮ್ಮ ತಮ್ಮ ಪಕ್ಷಗಳನ್ನು ಗ್ರಾಮ ಮಟ್ಟದಲ್ಲಿ ಬೇರೂರಿಸಲು ಇಂತಹ ಪ್ರಯತ್ನ ಮಾಡುವುದನ್ನು ಕೈಬಿಟ್ಟರೆ ಅಷ್ಟರ ಮಟ್ಟಿಗೆ ಗ್ರಾಮಗಳಿಗೆ ಹಿತ. ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ದೇವನೂರರಿಗೆ ವೈಕಂ ಪ್ರಶಸ್ತಿ ಶ್ಲಾಘನೀಯ

ಮಾನ್ಯರೆ,

ವೈಕಂ ಚಳವಳಿಯು ಅಸ್ಪೃಶ್ಯತೆ ಆಚರಣೆ ವಿರೋಧಿಸಿ ಸಾಮಾಜಿಕ ನ್ಯಾಯಕ್ಕಾಗಿ ನಡೆದ ಹೋರಾಟ. ಇದರ ನೆನಪಿನಲ್ಲಿ ತಮಿಳುನಾಡು ಸರ್ಕಾರ ವೈಕಂ ಪ್ರಶಸ್ತಿ ಸ್ಥಾಪಿಸಿದೆ. ಪ್ರಥಮ ವರ್ಷದ ಪ್ರಶಸ್ತಿಗೆ ಸಾಹಿತಿ ದೇವನೂರು ಮಹಾದೇವ ಅವರು ಭಾಜನರಾಗಿರುವುದು ಶ್ಲಾಘನೀಯ. ವೈಕಂ ಹೋರಾಟ ನಡೆದು ನೂರು ವರ್ಷಗಳು ಸಂದಿರುವ ಈ ಸಂದರ್ಭದಲ್ಲಿ ಪ್ರಶಸ್ತಿ ಸ್ಥಾಪನೆ ಮಾಡಿರುವುದು, ಅದನ್ನು ತಳ ಸಮುದಾಯಗಳ ಏಳಿಗೆಗಾಗಿ ದುಡಿಯುತ್ತಿರುವ ದೇವನೂರು ಮಹಾದೇವ ಅವರಿಗೆ ಪ್ರದಾನ ಮಾಡಿರುವುದು ತಮಿಳುನಾಡು ಸರ್ಕಾರದ ಮಾದರಿ ನಡೆಯಾಗಿದೆ. ಇದು ಅರ್ಹ ಸಾಹಿತಿಗೆ ಸಂದ ಅಭಿನಂದನಾ ಪ್ರಶಸ್ತಿಯಾಗಿದೆ.

–ಕೆ.ಎಸ್.ಸುರೇಶ್, ಮುಖ್ಯ ಶಿಕ್ಷಕ, ಸರಗೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ನಾವೂ ಸಾಧಿಸಿ ತೋರಿಸಬಹುದು !!

> ಪದ್ಮಶ್ರೀ ಪುರಸ್ಕೃತೆ 'ವೃಕ್ಷಮಾತೆ' ತುಳಸೀಗೌಡರ ಸಾಧನೆ ಬಹಳ ದೊಡ್ಡದು. ಅವರು ವನವಾಸಿ ಜನಾಂಗಕ್ಕೆ ಸೇರಿದ ಹಾಲಕ್ಕಿ ಸಮುದಾಯದವರು. ಪ್ರಕೃತಿಯೊಂದಿಗೆ ಆತ್ಮೀಯ ಒಡನಾಟವನ್ನು ಇಟ್ಟುಕೊಂಡವರು. ಅದನ್ನು ಜೀವನಪರ್ಯಂತ ಪಾಲಿಸಿದವರು. ಅವರ ಚಿತ್ರಗಳನ್ನು ನೋಡಿದರೆ ಕರಿಮಣಿ, ಬೆಲ್ಲದ ಮಣಿಗಳ ಹಾರವನ್ನು ಕೊರಳ ತುಂಬಾ ಹಾಕಿಕೊಂಡು ಹಾಲಕ್ಕಿ ಸಂಪ್ರದಾಯದಂತೆ ಸೀರೆ ಉಟ್ಟು, ಸುಕ್ಕುಗಟ್ಟಿದ ಚರ್ಮದ, ತೆರೆದ ಬೆನ್ನು, ಬರಿಗಾಲಿನಲ್ಲಿ ಕಾಣುವ ಅವರಿಗೆ ಪದ್ಮಶ್ರೀ ಘೋಷಣೆಯಾದಾಗ, ಅವರಿಗೆ ಹಾಗೆಂದರೇನು ಎಂಬುದೇ ಗೊತ್ತಿರಲಿಲ್ಲ. ಪದ್ಮಶ್ರೀ ಸ್ವೀಕರಿಸಲು ರಾಷ್ಟ್ರಪತಿ ಭವನಕ್ಕೆ ಅವರು ಹೋಗಿದ್ದು ಬರಿಗಾಲಿನಲ್ಲಿ. ಪ್ರಶಸ್ತಿ ಸ್ವೀಕರಿಸುವಾಗಿನ ಅವರ ಮುಗ್ಧ ನಗು, ಸರಳತೆಗೆ ಅಲ್ಲಿದ್ದವರೆಲ್ಲಾ ಮೂಕರಾದಂತಾಗಿತ್ತು. ರಾಷ್ಟ್ರಪತಿ, ಪ್ರಧಾನಿಯವರು ಅವರನ್ನು ಅಭಿನಂದಿಸಿದಾಗ, ನಾನು ಮಾಡಿದ್ದು ರಾಶಿ ಗಿಡಗಳನ್ನು ನೆಟ್ಟಿದ್ದು ಮಾತ್ರ ಎಂದರಂತೆ.


ನಮ್ಮ ಸಮಾಜ ಯಾವಾಗಲೂ ಸಾಧಕರನ್ನು ಆದರಿಸುತ್ತದೆ, ಗೌರವಿಸುತ್ತದೆ. ಅವರು ಇಂತಹುದೇ ಕ್ಷೇತ್ರದಲ್ಲಿ ಸಾಧನೆ ಮಾಡಿರಬೇಕು ಎಂದೇನಿಲ್ಲ. ಅವರು ಸಾಧನೆ ಮಾಡಿದ್ದಾರೆ ಎಂದು ಗೊತ್ತಾದಾಗ ಅವರನ್ನು ಸಾರ್ವಜನಿಕ ಸಂಘಸಂಸ್ಥೆಗಳು, ಖಾಸಗಿಯವರು ಗೌರವಿಸುತ್ತಾರೆ. ಹಾಗೆ ಗೌರವಿಸುವುದು ಅವರಿಗೆ ತೋರಿಸುವ ಗೌರವ ಎಂಬುದು ಒಂದು ಭಾಗವಾದರೆ, ಇತರರೂ ಅಂತಹುದೇ ಸಾಧನೆ ಮಾಡುವತ್ತ ಗಮನ ಹರಿಸಲಿ ಎಂಬುದೂ ಅದರ ಉದ್ದೇಶವಾಗಿರುತ್ತದೆ.

ಇತ್ತೀಚೆಗೆ ನಮ್ಮ ಪತ್ರಿಕೆಗಳಲ್ಲಿ ಆಟೋ ಚಾಲಕರು, ಪ್ರಯಾಣಿಕರು ಮರೆತುಹೋಗಿದ್ದ ಅವರ ಬೆಲೆ ಬಾಳುವ ವಸ್ತುಗಳನ್ನು ಪ್ರಾಮಾಣಿಕವಾಗಿ ಹಿಂದಿರುಗಿಸಿದ್ದರ ಬಗ್ಗೆ ಓದಿದ್ದೇವೆ. ಹಾಗೆ ಓದಿದಾಗ ನಮ್ಮಲ್ಲಿ ಇನ್ನೂ ಪ್ರಾಮಾಣಿಕರು ಇದ್ದಾರೆ ಎಂದು ಹೆಮ್ಮೆಯಾಗುತ್ತದೆ. ಹಾಗೆಯೇ ರಸ್ತೆಯಲ್ಲಿ ಅಪಘಾತಕ್ಕೀಡಾದವರು, ಅವರು ಯಾರೆಂದು ನೋಡದೆ ಅವರನ್ನು ಉಪಚರಿಸುವ ಸಂಸ್ಕೃತಿ ಇಂದಿಗೂ ನಮ್ಮಲ್ಲಿದೆ. ಇದು ದೊಡ್ಡ ಸಾಧನೆ ಎಂದಲ್ಲಾ. ಆದರೆ ತನ್ನ ವಸ್ತುವನ್ನು ಕಳೆದುಕೊಂಡವರು ಅದರ ಆಘಾತದಲ್ಲಿ ಒತ್ತಡದಿಂದ ಖಾಯಿಲೆಗಳಿಗೆ ತುತ್ತಾಗಬಹುದು, ಹೃದಯಾಘಾತವೂ ಆಗಬಹುದು. ಹಾಗೆಯೇ ಅಪಘಾತವಾದಾಗ ಒಂದಷ್ಟು ನೀರು ಕುಡಿಸಿ ಸಾಂತ್ವನ ಹೇಳುವುದು ಬಹಳ ಪ್ರಯೋಜನಕಾರಿಯಾಗುತ್ತದೆ. ತನ್ನ ಬಗ್ಗೆ ಕಾಳಜಿ ತೋರಿಸುವ ಇಂತಹವರ ಬಗ್ಗೆ ಅವರು ಜೀವಮಾನ ಪೂರ್ತಿ ನೆನಪಿಸಿಕೊಳ್ಳುತ್ತಾರೆ. ಅಂತಹ ಸಮಯ ಮುಂದೆ ನನಗೂ ಬಂದರೆ ಹೇಗೆ? ಎಂಬ ಮನೋಭಾವವೇ ಇಂತಹ ಸಹಾಯ ಹಸ್ತ ಚಾಚಲು ಕಾರಣವಾಗುತ್ತದೆ. ಅಂತಹ ಮಾನವೀಯತೆ ನಮ್ಮ ಸಮಾಜದಲ್ಲಿ ಇಂದಿಗೂ ಇದೆ.

ನಮ್ಮಲ್ಲಿ ಮೊದಲಿನಿಂದಲೂ 'ಪರೋಪಕಾರಾರ್ಥಂ ಇದಂ ಶರೀರಂ' ಎಂದೇ ಹೇಳಿಕೊಂಡು ಬರಲಾಗುತ್ತದೆ. ಅಂದರೆ ಈ ಶರೀರ ಇರುವುದೇ ಪರೋಪಕಾರಕ್ಕೆ ಎಂದು ಭಾವಿಸಬೇಕು ಎಂದು ಅರ್ಥ. ಅಂತಹ ಮನೋಗುಣ ನಮ್ಮದಾದಷ್ಟೂ ಸಮಾಜದ ನೆಮ್ಮದಿ ಜಾಸ್ತಿಯಾಗುತ್ತದೆ.

ಇಂತಹ ಅನೇಕರು ಅಂತಹ ಮನೋಭಾವವನ್ನು ತಮ್ಮ ದೊಡ್ಡ ಗುಣ ಎಂದು ಎಂದಿಗೂ ಭಾವಿಸುವುದಿಲ್ಲ. ನಾನೇನು ಅಂತಹ ದೊಡ್ಡ ಕೆಲಸ ಮಾಡಲಿಲ್ಲ. ಅದು ಮಾನವೀಯತೆ ಎಂದಷ್ಟೇ ಹೇಳುತ್ತಾರೆ. ಅನೇಕ ಸಲ ಹಣ, ವಸ್ತು ಕಳೆದುಕೊಂಡವರಿಗೆ ಅದನ್ನು ಹಿಂದಿರುಗಿಸಿದಾಗ ಅವರು ಕೃತಜ್ಞತೆಯಿಂದ ಒಂದಷ್ಟು ಹಣವನ್ನು ನೀಡಲು ಹೋದರೆ, ಅದನ್ನು ತೆಗೆದುಕೊಳ್ಳದವರೂ ನಮ್ಮಲ್ಲಿ ಇದ್ದಾರೆ. ಇಂತಹವರ ಬಗ್ಗೆ ಸಮಾಜ ಗೌರವಿಸುತ್ತದೆ.

ನಾವು ಮಾಡುವ ಕೆಲಸವೇ ನಮಗೆ ದೊಡ್ಡದಾಗಿ ಕಾಣಬೇಕು. ಅದು ಬಹಳ ಕನಿಷ್ಠವಾದ ಕೆಲಸವಾಗಿರಬಹುದು. (ಆದರೆ ಯಾವ ಕೆಲಸವೂ ಕನಿಷ್ಠವಲ್ಲ!) ಅದನ್ನು ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಮಾಡುವುದರಿಂದ ಖಂಡಿತಾ ನಮ್ಮ ಕ್ಷೇತ್ರದಲ್ಲಿ ನಾವು ಸಾಧನೆ ಮಾಡಿದಂತೆಯೇ. ನಮ್ಮ ಮನೆಯ ಮುಂದಿನ ಒಳಚರಂಡಿ ಕಟ್ಟಿಕೊಂಡಾಗ ನಾವು ಅದೆಂತಹ ಯಾತನೆ ಅನುಭವಿಸುತ್ತೇವೆ. ಅದನ್ನು ದುರಸ್ತಿಪಡಿಸುವುದಿರಲಿ, ಅದನ್ನು ನೋಡುವುದಕ್ಕೂ ಅಸಹ್ಯಪಟ್ಟುಕೊಳ್ಳುತ್ತೇವೆ. ಆದರೆ ಸಂಬಂಧಿಸಿದ ಪೌರಕಾರ್ಮಿಕರು ಬಂದು ಅದನ್ನು ದುರಸ್ತಿಪಡಿಸಿದಾಗ ನಮ್ಮಲ್ಲಿ ಕೃತಜ್ಞತಾ ಭಾವ ಖಂಡಿತಾ ಮೂಡುತ್ತದೆ. ಇಂತಹ ದುರಸ್ತಿ ಮಾಡುವುದು ಯಾಂತ್ರೀಕೃತ ಶೈಲಿಯಾಗಿರುವುದಿಲ್ಲ. ಅದನ್ನು ದುರಸ್ತಿಪಡಿಸುವವರು ಖಂಡಿತಾ ತಮ್ಮ ಅನುಭವದಿಂದ ಅದನ್ನು ಸರಳವಾಗಿ



ಪದ್ಮಶ್ರೀ ಪುರಸ್ಕೃತೆ 'ವೃಕ್ಷಮಾತೆ' ತುಳಸೀಗೌಡ

ಮಾಡಿ ಮುಗಿಸುತ್ತಾರೆ. ಒಂದು ರೀತಿಯಲ್ಲಿ ಕೆಲಸ ಆಗದಿದ್ದಾಗ ಅವರು ಮತ್ತೊಂದು ರೀತಿಯಲ್ಲಿ, ಅದೂ ಆಗದಿದ್ದಾಗ ಇನ್ನೊಂದು ರೀತಿಯಲ್ಲಿ ಪ್ರಯತ್ನಿಸಿ ಆ ಸಮಸ್ಯೆ ಪರಿಹರಿಸುತ್ತಾರೆ. ಅದು ಯಾವ ಇಂಜಿನಿಯರಿಂಗ್‌ಗೂ ಕಡಿಮೆ ಎನಿಸುವುದಿಲ್ಲ. ಹಾಗೆ ಮಾಡಿದವರ ಬಗ್ಗೆ ನಾವು ಒಂದಷ್ಟು ಒಳ್ಳೆಯ ಮಾತು ಹಾಗೂ ಕೃತಜ್ಞತೆ ತೋರಿಸಿದರೆ ಅವರು ಅಷ್ಟಕ್ಕೇ ತೃಪ್ತಿಪಟ್ಟುಕೊಳ್ಳುತ್ತಾರೆ. ಅಂತಹುದನ್ನು ಗುರುತಿಸಿ ಗೌರವಿಸುವ ಕೆಲಸ ನಮ್ಮದಾಗಬೇಕು. ನಾವು ಎಂತಹುದೇ ದೊಡ್ಡ ಹುದ್ದೆಯಲ್ಲಿರಬಹುದು. ಆದರೆ ಎಲ್ಲ ಕೆಲಸವನ್ನೂ ನಾವೇ ಮಾಡಲಾಗುವುದಿಲ್ಲ. ಆದ್ದರಿಂದ ನಾನೇ ದೊಡ್ಡವನು ಎಂದುಕೊಳ್ಳಬಾರದು.

ಸಾಧನೆ ಮಾಡುವವರು ಯಾವ ಕೆಲಸ ಮಾಡುತ್ತಾರೆ ಎಂಬುದು ದೊಡ್ಡ ವಿಷಯವಾಗುವುದಿಲ್ಲ. ಅವರು ದೊಡ್ಡ ಇಂಜಿನಿಯರುಗಳು, ಡಾಕ್ಟರು, ವಿಜ್ಞಾನಿಯೇ ಆಗಬೇಕೆಂದಿಲ್ಲ. ಮೇಲೆ ಹೇಳಿದಂತೆ ಅವರದ್ದೇ ಕ್ಷೇತ್ರದಲ್ಲಿ ನಿಷ್ಠೆಯಿಂದ ಕೆಲಸ ಮಾಡುವವರೂ ಸಾಧಕರಾಗಬಹುದು. ಮೈಸೂರಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು ಬಹಳ ಬುದ್ಧಿವಂತರಾಗಿದ್ದರು. ಅವರದ್ದು ಅಗಾಧವಾದ ನೆನಪಿನ ಶಕ್ತಿ. ಒಮ್ಮೆ ಅವರು ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಕಾರಿನಲ್ಲಿ ಹೋಗುತ್ತಿದ್ದಾಗ, ರಸ್ತೆಯಲ್ಲಿ ನೀರಿನ ಪೈಪುಗಳನ್ನು ಅಳವಡಿಸಲಾಗುತ್ತಿತ್ತು. ಕೆಲಸ ಹೇಗೆ ನಡೆಯುತ್ತಿದೆ ಎಂದು ಗಮನಿಸಲು (ಅವರು ದಿವಾನರಾಗಿದ್ದರಿಂದ) ಕಾರಿನಿಂದ ಕೆಳಗಿಳಿದು ಹೊರಟರು. ಅವರು ಅಲ್ಲಿದ್ದದ್ದು ಕೆಲವು ಸಮಯ ಮಾತ್ರ.

ಇದಾದ ಕೆಲವು ವರ್ಷಗಳ ಬಳಿಕ ಅವರು ಅದೇ ರಸ್ತೆಯಲ್ಲಿ ಹೋಗುತ್ತಿದ್ದರು. ರಸ್ತೆಯಲ್ಲಿ ನೀರು ಹರಿದುಹೋಗುತ್ತಿತ್ತು. ಅದನ್ನು ನಿಲ್ಲಿಸಲು ನೀರಿನ ಪೈಪು ಎಲ್ಲಿ ಹಾದು ಹೋಗಿದೆ ಎಂಬುದನ್ನು ಪತ್ತೆ ಹಚ್ಚಲು ಕೆಲವು ಇಂಜಿನಿಯರುಗಳು ಪರದಾಡುತ್ತಿದ್ದಾಗ, ಅಲ್ಲಿಗೆ ಹೋದ ಇಸ್ಮಾಯಿಲ್ ಪೈಪು ಇಂತಹ ಕಡೆ ಹಾದು ಹೋಗಿದೆ ಎಂದು ನಿಖರವಾಗಿ ಹೇಳಿದರಂತೆ. ಯಾವಾಗಲೋ ಕಂಡಿದ್ದನ್ನು ಅವರು ಮರೆತಿರಲಿಲ್ಲ. ಇದರಿಂದ ಇಂಜಿನಿಯರುಗಳಿಗೆ ಸಹಾಯವಾಯಿತು. ಅವರ ಈ ಒಂದು ಕಾರ್ಯವೂ ಸಾಧನೆಯೇ ಅಲ್ಲವೇ?

ಆದ್ದರಿಂದ ಸಾಧನೆ ಮಾಡಲು ಇಂತಹುದೇ ಹುದ್ದೆ, ಪದವಿ ಬೇಕೆಂದಿಲ್ಲ. ನಾವು ಮಾಡುವ ಕೆಲಸ ಯಾವುದೇ ಆಗಿರಲಿ, ಅದನ್ನು ಶ್ರದ್ಧೆಯಿಂದ ಹಾಗೂ ನಿಷ್ಠೆಯಿಂದ ಮಾಡಬೇಕು. ಹಾಗೆಯೇ ನಾವು ಮಾಡುವ ಕೆಲಸದಲ್ಲಿ ನಮ್ಮನ್ನು ತೊಡಗಿಸಿಕೊಂಡರೆ, ನಮಗೆ ಅದರ ಆಳಗಲ ಅರಿವಾಗುತ್ತದೆ. ಮೊದಲು ಪಡುತ್ತಿದ್ದಷ್ಟು ಕಷ್ಟವನ್ನು ನಂತರ ಪಡಬೇಕಾಗುವುದಿಲ್ಲ. ಹಾಗಾದಾಗ ನಾನು ನನ್ನ ಕೆಲಸವನ್ನು ಮತ್ತಷ್ಟು ವಿಭಿನ್ನವಾಗಿ, ಸುಲಭವಾಗಿ ಹೇಗೆ ಮಾಡಬಹುದು ಎಂಬುದನ್ನು ಯೋಚಿಸಬೇಕು. ಹಾಗೆ ಮಾಡಿದಾಗ ನಾನು ವೇತನ ಪಡೆಯುವ ನನ್ನ ಕೆಲಸಕ್ಕೆ ನ್ಯಾಯ ಒದಗಿಸಿದಂತೆ ಆಗುವುದಲ್ಲದೇ, ಮುಂದೆ ಎಲ್ಲರಿಗೂ ಅದರಿಂದ ಒಳಿತಾಗುತ್ತದೆ.

ಇತ್ತೀಚೆಗೆ ನಿಧನರಾದ ಪದ್ಮಶ್ರೀ ಪುರಸ್ಕೃತೆ 'ವೃಕ್ಷಮಾತೆ' ತುಳಸೀಗೌಡರ ಸಾಧನೆ ಬಹಳ ದೊಡ್ಡದು. ಅವರು ವನವಾಸಿ ಜನಾಂಗಕ್ಕೆ ಸೇರಿದ ಹಾಲಕ್ಕಿ ಸಮುದಾಯದವರು. ಪ್ರಕೃತಿಯೊಂದಿಗೆ ಆತ್ಮೀಯ ಒಡನಾಟವನ್ನು ಇಟ್ಟುಕೊಂಡವರು. ಅದನ್ನು ಜೀವನ ಪರ್ಯಂತ ಪಾಲಿಸಿದವರು. ಅವರ ಚಿತ್ರಗಳನ್ನು ನೋಡಿದರೆ ಕರಿಮಣಿ, ಬೆಲ್ಲದ ಮಣಿಗಳ ಹಾರವನ್ನು ಕೊರಳ ತುಂಬಾ ಹಾಕಿಕೊಂಡು ಹಾಲಕ್ಕಿ ಸಂಪ್ರದಾಯದಂತೆ ಸೀರೆ ಉಟ್ಟು, ಸುಕ್ಕುಗಟ್ಟಿದ ಚರ್ಮದ, ತೆರೆದ ಬೆನ್ನು, ಬರಿಗಾಲಿನಲ್ಲಿ ಕಾಣುವ ಅವರಿಗೆ ಪದ್ಮಶ್ರೀ ಘೋಷಣೆಯಾದಾಗ, ಅವರಿಗೆ ಹಾಗೆಂದರೇನು ಎಂಬುದೇ ಗೊತ್ತಿರಲಿಲ್ಲ. ಪದ್ಮಶ್ರೀ ಸ್ವೀಕರಿಸಲು ರಾಷ್ಟ್ರಪತಿ ಭವನಕ್ಕೆ ಅವರು ಹೋಗಿದ್ದು ಬರಿಗಾಲಿನಲ್ಲಿ. ಪ್ರಶಸ್ತಿ ಸ್ವೀಕರಿಸುವಾಗಿನ ಅವರ ಮುಗ್ಧ ನಗು, ಸರಳತೆಗೆ ಅಲ್ಲಿದ್ದವರೆಲ್ಲಾ ಮೂಕರಾದಂತಾಗಿತ್ತು. ರಾಷ್ಟ್ರಪತಿ, ಪ್ರಧಾನಿಯವರು ಅವರನ್ನು ಅಭಿನಂದಿಸಿದಾಗ, ನಾನು ಮಾಡಿದ್ದು ರಾಶಿ ಗಿಡಗಳನ್ನು ನೆಟ್ಟಿದ್ದು ಮಾತ್ರ ಎಂದರಂತೆ.

ಅವರಿಗೆ ಅದೇನೂ ವಿಶೇಷ ಸಾಧನೆ ಎನಿಸಲಿಲ್ಲ. ಆದರೆ ಅವರ ಕೆಲಸ ಅವರನ್ನು ವೃಕ್ಷಮಾತೆ ಎಂದು ಕರೆಯುವಂತೆ ಆಯಿತು. (ನಮ್ಮ ಸಾಲುಮರದ ತಿಮ್ಮಕ್ಕ ಸಹಾ ಇದೇ ಮನೋಭಾವದವರು). ಆದರೂ ವನವಾಸಿಯಾದ ತುಳಸೀಗೌಡ, ಬಹಳ ಬಡತನದಲ್ಲಿ ಜೀವನ ನಡೆಸಿದವರು. ಇಡೀ ಜೀವನವನ್ನು ಬಡತನದಲ್ಲೇ ಕಳೆದವರು. ಚಿಕ್ಕ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡವರು. ಬಾಲ್ಯ ವಿವಾಹವಾದರೂ ಗಂಡನೊಡನೆ ಕಾಲ ಕಳೆದಿದ್ದು ಹದಿನೈದು ವರ್ಷ ಮಾತ್ರ. ಜೀವನಕ್ಕಾಗಿ ಕಾಡಿನಿಂದ ಸೌದೆ ಹೊರೆ ತಂದು ಮಾರುವ ಕೆಲಸ ಆರಂಭಿಸಿದ್ದರು. ಹಾಗೆ ಕಾಡಿನಿಂದ ಬರುವಾಗ ಅಲ್ಲಲ್ಲಿ ಬಿದ್ದಿರುತ್ತಿದ್ದ ಹಲವು ಸಸ್ಯಗಳ ಬೀಜಗಳನ್ನು ತನ್ನ ಸೆರಗಿನಲ್ಲಿ ಕಟ್ಟಿಕೊಂಡು ಬರುತ್ತಿದ್ದರು. ಅವುಗಳನ್ನು ಬಿತ್ತಿ, ಬೆಳೆಸಿ ಅರಣ್ಯ ಇಲಾಖೆಗೆ ಕೊಟ್ಟರು, ತಾವೂ ಗಿಡಗಳನ್ನು ಬೆಳೆಸಲು ಆರಂಭಿಸಿದರು. ಅವರು ಗಿಡ ಮಾತ್ರ ನೆಡಲಿಲ್ಲ, ಅವುಗಳನ್ನು ಅಕ್ಕರೆಯಿಂದ ಪೋಷಿಸಿದರು. ಕ್ರಮೇಣ ಸಸ್ಯತಜ್ಞೆಯೂ ಆದರು. ತಾವು ಬೆಳೆಸಿದ ಗಿಡಗಳನ್ನು ತಮ್ಮ ಮಕ್ಕಳಂತೆ ಕಾಳಜಿ ವಹಿಸಿ ಬೆಳೆಸಿದರು. ಅವರಿಂದ ಅರಣ್ಯಗಳೇ ನಿರ್ಮಾಣವಾದವು, ಅದರ ಫಲ ಪದ್ಮಶ್ರೀ ಅವರನ್ನು ಅರಸಿ ಬಂದಿತು. ಇದು ಸಾಧನೆಯಲ್ಲವೇ? ತಾನು ಏನು ಮಾಡುತ್ತಿರುವೆ ಎಂಬುದನ್ನೇ ಅರಿಯದೆ ಮಾಡಿದ ಸಮಾಜ ಸೇವೆ ಅದು. ಇಂತಹ ಸಾಧಕರು ನಮ್ಮ ಜೊತೆಗಿದ್ದಾರೆ ಎಂಬುದು ನಮಗೆ ಹೆಮ್ಮೆಯ ಸಂಗತಿ. ದುರದೃಷ್ಟ ಎಂದರೆ ಇಂತಹವರ ಸಾಧನೆ ಅವರು ಮೃತರಾದ ನಂತರ ಸಮಾಜಕ್ಕೆ ಗೊತ್ತಾಗುತ್ತದೆ. ಆದರೂ ಪ್ರತಿಫಲ ಬಯಸದೇ ದುಡಿಯುವ ಇಂಥ ಜೀವಗಳು ನಮ್ಮ ನಡುವೆ ಬದುಕಿದ್ದವು, ಬದುಕಿದ್ದಾರೆ ಎಂಬುದು ನಿಜಕ್ಕೂ ಪ್ರೇರಣೆ ನೀಡುವಂತಹುದು.

ನಾನು ಮಾಡುವ ಪ್ರತಿ ಕೆಲಸಕ್ಕೂ ಪ್ರತಿಫಲ ಬೇಕು ಎಂದು ಬಯಸದೇ, ಆದರೆ ತಾನು ಮಾಡುವ ಕೆಲಸವನ್ನು ಅಕ್ಕರೆಯಿಂದ ಮಾಡುವುದು ನಿಜಕ್ಕೂ ಸಾಧನೆಯಾಗುತ್ತದೆ.

ಈ ಹಿಂದೆ ಓದಿದ ಒಂದು ಘಟನೆ; ಕೈಗಾರಿಕಾ ಪ್ರದೇಶದಲ್ಲಿ ಇದ್ದ ಒಂದು ಶೀತಲೀಕರಣ ಘಟಕ. ಅಲ್ಲಿ ಆಹಾರ ಪದಾರ್ಥಗಳನ್ನು ಕೆಡದಿರಲೆಂದು ಸಂಗ್ರಹಿಸಿಡಲಾಗುತ್ತಿತ್ತು. ಒಳಗಡೆ ಅತ್ಯಂತ ಶೀತದ ವಾತಾವರಣ. ಸಂಜೆಯಾದ ನಂತರ ಎಲ್ಲಾ ಕೆಲಸಗಾರರೂ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದರು. ಸಾಮಾನ್ಯವಾಗಿ ಕೊನೆಯವರಾಗಿ ಹೊರಹೋಗಬೇಕಾದ ಒಬ್ಬರು ಇಂಜಿನಿಯರ್ ಎಲ್ಲಾ ಯಂತ್ರಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿವೆಯೇ ಎಂದು ಮನದಟ್ಟು ಮಾಡಿಕೊಂಡು ಹೋಗುವ ಕೆಲಸ ಅವರದ್ದು. ಒಂದು ದಿನ ಸಂಜೆ ಅವರು ಹಾಗೆ ಶೀತಲೀಕರಣ ಘಟಕದೊಳಗೆ ಹೋದಾಗ ಒಂದು ಯಂತ್ರ ಸರಿಯಾಗಿ ಕೆಲಸ ನಿರ್ವಹಿಸದಿರುವುದು ಅವರ ಗಮನಕ್ಕೆ ಬಂದಿತು. ಅವರು ಅದನ್ನು ಸರಿಪಡಿಸುತ್ತಾ ಕುಳಿತರು. ಹೊರಗಿದ್ದ ಸೆಕ್ಯೂರಿಟಿ ಗಾರ್ಡ್ ಒಬ್ಬ ವ್ಯಕ್ತಿ ಒಳಗೆ ಇನ್ಯಾರೂ ಇಲ್ಲವೆಂದು ಭಾವಿಸಿ ಘಟಕದ ಬಾಗಿಲು ಬಂದ್ ಮಾಡಿ, ಹೊರಟು ಹೋದ. ಕೆಲ ಸಮಯದ ನಂತರ ಆ ವ್ಯಕ್ತಿಗೆ ಗೊತ್ತಾಯಿತು. ಅವರು ಎಷ್ಟೇ ಕೂಗಿದರೂ ಹೊರಗಿನವರಿಗೆ ಕೇಳುತ್ತಿರಲಿಲ್ಲ. ಅವರು ಆ ರಾತ್ರಿ ಪೂರ್ತಿ ಆ ಶೀತಲೀಕರಣ ಕೋಣೆಯಲ್ಲಿದ್ದರೆ ಅವರ ಸಾವು ನಿಶ್ಚಿತವಾಗಿತ್ತು. ಅವರಿಗೆ ಅದು ತನ್ನ ಕಡೆಯ ದಿನ ಎನಿಸತೊಡಗಿತು. ಮತ್ತೆ ಯಾರೂ ಬಂದು ಬಾಗಿಲು ತೆಗೆಯುವ ಸಂದರ್ಭವೇ ಇರಲಿಲ್ಲ. ಆದರೆ ಕೆಲ ಸಮಯದ ನಂತರ ಅನಿರೀಕ್ಷಿತ ಎಂಬಂತೆ ಬಾಗಿಲು ತೆರೆಯಿತು. ಸೆಕ್ಯೂರಿಟಿ ಗಾರ್ಡ್ ಟಾರ್ಚ್ ಹಿಡಿದು ಇವರನ್ನು ಹುಡುಕುತ್ತಾ ಒಳಗೆ ಬಂದ. ಇವರನ್ನು ಕಂಡು ಹೊರಗೆ ಕರೆತಂದ. ಅಷ್ಟರಲ್ಲಿ ಚಳಿಯಿಂದ ಅವರು ಬಳಲಿದ್ದರು. ಆತ ತನಗಾಗಿ ತಂದಿದ್ದ ಬಿಸಿ ಟೀ ನೀಡಿದ. ನಾನು ಒಳಗೆ ಇರುವುದು ನಿನಗೆ ಹೇಗೆ ಗೊತ್ತಾಯಿತು ಎಂದು ಅವರು ಸೆಕ್ಯೂರಿಟಿಯನ್ನು ಕೇಳಿದರು. ಆದಕ್ಕೆ ಆ ಗಾರ್ಡ್ ಕೊಟ್ಟ ಉತ್ತರ ಆಶ್ಚರ್ಯ ಹುಟ್ಟಿಸುವಂತಹುದು. 'ನಾನು ಇಲ್ಲಿ ಸೆಕ್ಯುರಿಟಿ ಗಾರ್ಡ್. ನನ್ನನ್ನು ಎಲ್ಲರೂ ಗೌರವದಿಂದ ನೋಡುತ್ತಾರೆ ಎಂದೇನಿಲ್ಲ. ಆದರೆ ನೀವು ಕಾರ್ಖಾನೆಯ ಒಳಗೆ ಬರುವಾಗ, ಹೊರಗೆ ಹೋಗುವಾಗ ಒಂದು ಹಾಯ್ ಎಂದು ಹೇಳುತ್ತೀರಿ. ನೀವು ಇಂದು ಬೆಳಿಗ್ಗೆ ಹಾಗೆ ಹಾಯ್ ಹೇಳಿ ಹೋಗಿದ್ದಿರಿ, ಆದರೆ ಸಂಜೆ ನೀವು ನನ್ನ ಕಣ್ಣಿಗೆ ಬೀಳಲಿಲ್ಲ. ಹಾಗಾಗಿ ನೀವು ಇಲ್ಲಿರಬಹುದು ಎಂದು ಹುಡುಕುತ್ತಾ ಬಂದೆ' ಎನ್ನುತ್ತಾನೆ. ಇದು ಎಂತಹ ಉತ್ತಮ ಸಂದೇಶ ನೀಡುತ್ತದೆ. ನಾವು ಕೆಳಗಿನವರನ್ನೂ ಗೌರವದಿಂದ ನಡೆಸಿಕೊಳ್ಳಬೇಕು. ಇಂತಹ ವರ್ತನೆ ಅವರ ಜೀವ ಉಳಿಸಿತು.

ನಾವು ಮಾಡುವ ಕೆಲಸ ದೊಡ್ಡದಲ್ಲ, ಅದನ್ನು ಹೇಗೆ ಮಾಡುತ್ತೇವೆ ಎಂಬುದು ದೊಡ್ಡದು. ಅದೇ ನಮ್ಮ ಸಾಧನೆ. ಅಂತಹ ಸಾಧಕರ ಸಂಖ್ಯೆ ಹೆಚ್ಚಾಗಲಿ ಎಂಬುದು ಹಂಬಲ.

ರೈಲು ತಡೆಗೆ ಮುಂದಾದ ರೈತರ ಬಂಧನ; ಬಿಡುಗಡೆ

ಬೇಡಿಕೆ ನಿರ್ಲಕ್ಷ್ಯ ಆರೋಪ; ಕೇಂದ್ರದ ವಿರುದ್ಧ ಆಕ್ರೋಶ

ಮೈಸೂರು,ಡಿ.18(ಎಂಟಿವೈ)– ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಹಾಗೂ ದೆಹಲಿಯಲ್ಲಿ ರೈತ ಮುಖಂಡ ಜಗಜಿತ್ ಸಿಂಗ್ ಧಲೇವಾಲ ನೇತೃತ್ವದಲ್ಲಿ ನಡೆಯುತ್ತಿರುವ ಹೋರಾಟ ಬೆಂಬಲಿಸಿ ಮೈಸೂರಲ್ಲಿ ರೈಲು ತಡೆ ನಡೆಸಲು ಮುಂದಾದ ರೈತ ಮುಖಂಡರನ್ನು ಪೊಲೀಸರು ಬಂಧಿಸಿ, ನಂತರ ಬಿಡುಗಡೆ ಮಾಡಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು, ದೆಹಲಿಯಲ್ಲಿ ರೈತ ಮುಖಂಡರು ನಡೆಸುತ್ತಿರುವ ಆಮರಣಾಂತ ಉಪವಾಸ ಸತ್ಯಾಗ್ರಹ ಬೆಂಬಲಿಸಿ, ಬುಧವಾರ ಮೈಸೂರಿನ ಕೇಂದ್ರ ರೈಲ್ವೆ ನಿಲ್ದಾಣದಲ್ಲಿ ರೈಲು ತಡೆದು ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದರು.

ಈ ಹಿನ್ನೆಲೆಯಲ್ಲಿ ಬುಧವಾರ ಬೆಳಗ್ಗೆ ರೈಲು ತಡೆಗಾಗಿ ಆಗಮಿಸುತ್ತಿದ್ದ ರೈತರು ಹಾಗೂ ರೈತ ಮುಖಂಡರನ್ನು ರೈಲ್ವೆ ಹಾಗೂ ಸಿವಿಲ್ ಪೊಲೀಸರು ರೈಲ್ವೆ ನಿಲ್ದಾಣದ ಮುಂಭಾಗದ ಬಾಬು ಜಗಜೀವನರಾಮ್ ಪ್ರತಿಮೆ ಬಳಿಯೇ ತಡೆದರು. ಈ ವೇಳೆ ರೈತ ಮುಖಂಡರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು.

ಈ ವೇಳೆ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಪೊಲೀಸರ ತಡೆಗೋಡೆಯನ್ನು ಭೇದಿಸಿ ರೈಲು ನಿಲ್ದಾಣಕ್ಕೆ ನುಗ್ಗಲು ಯತ್ನಿಸಿದರು. ಈ ವೇಳೆ ಪೊಲೀಸರು ನೂರಕ್ಕೂ ಹೆಚ್ಚು ರೈತರನ್ನು ಬಂಧಿಸಿದರು. ಬಂಧನಕ್ಕೆ ಒಳಗಾಗುತ್ತಿದ್ದಂತೆ ಪೊಲೀಸ್ ದಬ್ಬಾಳಿಕೆಗೆ ಧಿಕ್ಕಾರ, ರೈತ ವಿರೋಧಿ ಕೇಂದ್ರ ಸರ್ಕಾರಕ್ಕೆ ಧಿಕ್ಕಾರ. ರೈತರ ಕಷ್ಟ ನೀಗಿಸಿ ಅನ್ನದ ಋಣ ತೀರಿಸಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರೈಲು ತಡೆ ಚಳವಳಿ ನಡೆಸಲು ಮುಂದಾದ ರೈತರನ್ನು ಪೊಲೀಸರು ಬಂಧಿಸಿದರು.

ಹಳಿ ಮೇಲೆ ಪ್ರತಿಭಟನೆ: ಒಂದು ತಂಡ ರೈಲ್ವೆ ನಿಲ್ದಾಣಕ್ಕೆ ನುಗ್ಗಲು ಯತ್ನಿಸಿ ಬಂಧನಕ್ಕೆ ಒಳಗಾಗುತ್ತಿದ್ದಂತೆ ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್ ನೇತೃತ್ವದ ರೈತರ ಮತ್ತೊಂದು ತಂಡ ಬಂಬೂಬಜಾರ್ ಕಡೆಯಿಂದ ರೈಲ್ವೆ ಹಳಿಗಳ ಮೇಲೆ ಹಾದು ರೈಲು ತಡೆ ನಡೆಸಲು ಯತ್ನಿಸಿದಾಗ ಪೊಲೀಸರು ಬಂಧಿಸಿದರು.

ಈ ವೇಳೆ ಪತ್ರಕರ್ತರೊಂದಿಗೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಕೇಂದ್ರ ಸರ್ಕಾರಕ್ಕೆ ರೈತರು ಸತ್ತರೆ ಚಿಂತೆ ಇಲ್ಲ ಅಂಬಾನಿ ಅದಾನಿ ಬದುಕಿದರೆ ಸಾಕು ಎನ್ನುವಂತಿದೆ. ರೈತರ ಸಾವು ನಿರೀಕ್ಷೆ ಮಾಡುತ್ತಿದೆ. ಅದಕ್ಕಾಗಿಯೇ ಸಮಸ್ಯೆ ಬಗ್ಗೆ ನಿರ್ಲಕ್ಷಿಸುತ್ತಿದೆ. ಜನರಿಂದ ಆಯ್ಕೆಯಾದ ಸಂಸದರು ರೈತರ ವಿಷಯದಲ್ಲಿ ಎಮ್ಮೆಗಳಂತೆ ವರ್ತಿಸುತ್ತಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ. ಹಳ್ಳಿಗಳಿಗೆ ಬಂದರೆ ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದರು.

ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ ಖಾತ್ರಿ ಕಾನೂನು ಜಾರಿಯಾಗಬೇಕು. ಸ್ವಾಮಿನಾಥನ್ ವರದಿಯಂತೆ ಬೆಂಬಲ ಬೆಲೆ ನಿಗದಿಯಾಗಬೇಕು. ರೈತರ ಸಾಲ ಸಂಪೂರ್ಣ ಮನ್ನಾ ಆಗಬೇಕು 60 ವರ್ಷ ತುಂಬಿದ ರೈತರಿಗೆ ಪಿಂಚಣಿ ಯೋಜನೆ ಜಾರಿಗೆ ಬರಬೇಕು ಎಂದು ಒತ್ತಾಯಿಸಿ 23 ದಿನಗಳಿಂದ ದೆಹಲಿ ಗಡಿಯಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಜಗಜಿತ್ ಸಿಂಗ್ ಧಲೇವಾಲ ಆರೋಗ್ಯಸ್ಥಿತಿ ದಯನೀಯವಾಗಿದೆ. ಕೇಂದ್ರ ಸರ್ಕಾರ ಕೇವಲ ಮೊಸಳೆ ಕಣ್ಣೀರು ಸುರಿಸಿ ನಾಟಕವಾಡುತ್ತಿದೆ. ಇಂತಹ ವರ್ತನೆ ಖಂಡನೀಯ. ಕೂಡಲೇ ಚಳುವಳಿ ನಿರತ ರೈತ ಮುಖಂಡರ ಜೊತೆ ಮಾತುಕತೆ ನಡೆಸಿ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದರು. ಬಂಧಿತ ರೈತರನ್ನು ಮಧ್ಯಾಹ್ನ 3 ಗಂಟೆಗೆ ಬಿಡುಗಡೆ ಮಾಡಲಾಯಿತು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಅತ್ತಹಳ್ಳಿ ದೇವರಾಜ್, ಪಿ.ಸೋಮಶೇಖರ್, ಕಿರಗಸೂರ್ ಶಂಕರ್, ಬರಡನಪುರ ನಾಗರಾಜ್, ನೀಲಕಂಠಪ್ಪ, ವೆಂಕಟೇಶ್, ಸಿದ್ದೇಶ್, ವಿಜೇಯೆಂದ್ರ ರಾಜೇಶ್, ಮಂಜುನಾಥ್, ಪ್ರಸಾದ್ ನಾಯ್ಕ್, ಪ್ರದೀಪ್, ಮಹದೇವಸ್ವಾಮಿ, ಪ್ರಭುಸ್ವಾಮಿ, ಕೆಂಡಗಣ್ಣಪ್ಪ, ಪರಶಿವಮೂರ್ತಿ, ಸೂರಿ, ಉಮೇಶ್, ಬಸವರಾಜು, ನಾಗೇಶ್, ರಂಗರಾಜು, ಮಹದೇವ್, ರಂಗಸ್ವಾಮಿ, ಕೆಂಡಗಣ್ಣಸ್ವಾಮಿ, ನಂಜುಂಡಸ್ವಾಮಿ ಇನ್ನಿತರರು ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಒಂದನೇ ಪುಟದಿಂದ

ಸ್ನೇಹಮಯಿ ಕೃಷ್ಣರಿಗೆ ಕೋಟಿ ಕೋಟಿ ಆಫರ್!

ತಮ್ಮ ಬಳಿ ಬಂದಿರುವುದಕ್ಕಿಂತ ಇನ್ನೇನು ಸಾಕ್ಷ್ಯಾಧಾರ ಬೇಕು ಎಂದು ಪ್ರಶ್ನಿಸಿದ್ದಾರೆ.

ಈ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಹಾಗೂ ಬೆಂಗಳೂರಿನ ಜಾರಿ ನಿರ್ದೇಶನಾಲಯಕ್ಕೆ ಸ್ನೇಹಮಯಿ ಕೃಷ್ಣ ಲಿಖಿತ ದೂರು ನೀಡಿದ್ದಾರೆ. ಸಿಎಂ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಅವರ ಆಪ್ತ ಸಹಾಯಕನೆಂದು ಹೇಳಿಕೊಂಡು ನನಗೆ ಗೊತ್ತಿರುವ ಯೂ-ಟ್ಯೂಬ್ ಚಾನಲ್ ಮಾಲೀಕ ಶ್ರೀನಿಧಿ ಎಂಬುವವರೊಂದಿಗೆ ಹರ್ಷ (ಬಿಜೆಪಿ ಮುಖಂಡ) ಎಂಬಾತ ಡಿಸೆಂಬರ್ 13ರಂದು ಮುಡಾ ಬಳಿ ನನ್ನ ಭೇಟಿಯಾದರು. ಹರ್ಷ, ಬಂದವರೇ ನನ್ನ ಕಾಲಿಗೆ ನಮಸ್ಕರಿಸಲು ಮುಂದಾದರು. ಈ ವೇಳೆ ನಾನು ಹಿಂದೆ ಸರಿದು ಇದೆಲ್ಲಾ ಬೇಡವೆಂದು ಹರ್ಷನಿಗೆ ಹೇಳಿದೆ.

ಮುಡಾ ಪ್ರಕರಣದಲ್ಲಿ ಪಾರ್ವತಿ ಆಘಾತಕ್ಕೊಳಗಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಮುಡಾ ಪ್ರಕರಣದಲ್ಲಿ ಕಾನೂನು ಹೋರಾಟದಿಂದ ಹಿಂದೆ ಸರಿಯುವಂತೆ ಕೋರಿದರು. ಲೋಕಾಯುಕ್ತ ತನಿಖೆ ಬೇಕಿದ್ದರೆ ನಡೆಯಲಿ. ಆದರೆ, ಈ ಪ್ರಕರಣವನ್ನು ಸಿಬಿಐಗೆ ಕೊಡಿಸಬೇಡಿ. ದಯವಿಟ್ಟು ಸಹಾಯ ಮಾಡಿ ಎಂದು ಕೈ ಮುಗಿದು ಮನವಿ ಮಾಡಿದರು.

ಆದರೆ ಹರ್ಷನ ಮನವಿ ನಿರಾಕರಿಸಿದ ನಾನು, ಯಾವುದೇ ಕಾರಣಕ್ಕೂ ಮುಂದಿಟ್ಟ ಹೆಜ್ಜೆ ಹಿಂದೆ ಇಡುವುದಿಲ್ಲ. ನಾನು ಕಾನೂನು ಹೋರಾಟ ನಡೆಸುತ್ತೇನೆ. ಏನೇ ಇದ್ದರೂ ಕಾನೂನು ಪ್ರಕಾರವೇ ಹೋರಾಟ ಮಾಡಲು ಪಾರ್ವತಿ ಅವರಿಗೆ ತಿಳಿಸಿ ಎಂದು ಸಲಹೆ ನೀಡಿದ್ದೆ ಎಂದಿದ್ದಾರೆ. ಈ ಪ್ರಕರಣದಲ್ಲಿ ಅಮ್ಮನವರ ಪಾತ್ರ ಏನೂ ಇಲ್ಲ, ದೇವರಾಜು ಹಾಗೂ ಮಲ್ಲಿಕಾರ್ಜುನಸ್ವಾಮಿ ನಂಬಿದ್ದರಿಂದ ಈ ರೀತಿ ಆಗಿದೆ. ಸಿ.ಟಿ.ಕುಮಾರನ ಮಾತು ಕೇಳಿ ಪತ್ರ ಬರೆದಿದ್ದಾರೆ. ಕೆಲವು ಪತ್ರಗಳಿಗೆ ಅಮ್ಮನವರ ಪರವಾಗಿ ಸಿ.ಟಿ.ಕುಮಾರನೇ ಸಹಿ ಮಾಡಿದ್ದಾನೆ. ಆದ ಕಾರಣ ಕಾನೂನು ಹೋರಾಟ ಮಾಡಬೇಡಿ ಎಂದು ಹರ್ಷ ಮನವಿ ಮಾಡಿದನು ಎಂದು ಆಪಾದಿಸಿದ್ದಾರೆ. ನನಗೇನು ಗೊತ್ತಿಲ್ಲ, ಇವರೆಲ್ಲಾ ಮೋಸ ಮಾಡಿದ್ದಾರೆ ಎಂದು ಪೊಲೀಸರಿಗೆ ದೂರು ನೀಡಲು ಪಾರ್ವತಿ ಅವರಿಗೆ ತಿಳಿಸಿ ಎಂದು ಮತ್ತೊಮ್ಮೆ ನಾನು ಹರ್ಷನಿಗೆ ಸಲಹೆ ನೀಡಿದೆ ಎಂದು ಹೇಳಿದ್ದಾರೆ.

ಹರ್ಷ ಎಷ್ಟೆ ಒತ್ತಾಯ ಮಾಡಿದರೂ ನಾನು ಅವರ ಮಾತಿಗೆ ಕಿವಿಗೊಡದೆ ಅಲ್ಲಿಂದ ನಿರ್ಗಮಿಸಿದೆ. ಈ ವೇಳೆ ಶ್ರೀನಿಧಿಯನ್ನು ಕರೆದು, ಮತ್ತೊಮ್ಮೆ ಹೀಗೆ ಯಾರನ್ನು ನನ್ನ ಬಳಿ ಕರೆದುಕೊಂಡು ಬರಬೇಡಿ ಎಂದು ತಾಕೀತು ಮಾಡಿ ಕಳುಹಿಸಿದೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದ್ದಾರೆ. ನಂತರ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪಾ, ನನ್ನ ವಿರುದ್ಧ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ನನ್ನ ಬಂಧಿಸಲು ಪೊಲೀಸರು ಹುಡುಕುತ್ತಿದ್ದರು. ಆ ಕಾರಣಕ್ಕೆ ನನ್ನ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿ ವಕೀಲರನ್ನು ಭೇಟಿ ಮಾಡಲು ಬೆಂಗಳೂರಿಗೆ ಹೊರಟೆ ಎಂದು ತಿಳಿಸಿದ್ದಾರೆ.

ಹಣ ಕೊಡುತ್ತೇವೆ, ನಮ್ಮ ಆಫರ್ ಒಪ್ಪಿಕೊಳ್ಳಿ!

ನಿಮ್ಮ ತಂದೆ ಕೇಳಿದಷ್ಟು ಹಣ ಕೊಡಿಸುತ್ತೇನೆ ಎಂದು ಹೇಳಿದ್ದಾರೆ. ಇದಕ್ಕೆ ಒಪ್ಪದಿದ್ದಾಗ ನನ್ನ ಮಗನನ್ನು ಕಾರಿನಲ್ಲಿ ಕೂರಿಸಿಕೊಂಡು ಮನವೊಲಿಸುವ ಪ್ರಯತ್ನ ಮಾಡಿದ್ದಾರೆ. ಈಗಾಗಲೇ ಆರ್‌ಟಿಐ ಕಾರ್ಯಕರ್ತ ಗಂಗರಾಜು ಜೊತೆ ಸಂಧಾನ ಮಾಡಿ, ಅವರನ್ನು ಮೂರು ಕೋಟಿ ರೂಪಾಯಿಗೆ ಒಪ್ಪಿಸಿದ್ದೇವೆ. ಡಿಸೆಂಬರ್ 7ರಂದು ಗಂಗರಾಜುಗೆ ಒಂದೂವರೆ ಕೋಟಿ ರೂಪಾಯಿ ನೀಡಿದ್ದೇವೆ ಎಂದು ಹಣ ತುಂಬಿದ್ದ ವಿಡಿಯೋವನ್ನು ತೋರಿಸಿದ್ದಾರೆ. ಇದೇ ರೀತಿ ನಿಮ್ಮ ತಂದೆಗೂ ಹಣ ಕೊಡುತ್ತೇವೆ ಎಂದು ಆಮಿಷವೊಡ್ಡಿದ್ದಾರೆ ಎಂದಿದ್ದಾರೆ.

ನಮ್ಮ ತಂದೆ ಇದಕ್ಕೆಲ್ಲಾ ಒಪ್ಪುವುದಿಲ್ಲ, ನಮಗೆ ಇದೆಲ್ಲಾ ಇಷ್ಟವಾಗುವುದಿಲ್ಲ ಎಂದು ನನ್ನ ಮಗ ವಿವೇಕ್ ಹೇಳಿದ್ದಾನೆ. ನಿಮ್ಮ ತಾಯಿ ಜೊತೆ ಐದು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಿ. ಅವರ ಕಾಲಿಗೆ ಬಿದ್ದು ಕ್ಷಮೆ ಕೇಳುತ್ತೇವೆ ಎಂದು ಹರ್ಷ ನನ್ನ ಮಗನನ್ನು ಗೋಗರೆದಿದ್ದಾನೆ. ಆದರೆ ನಮ್ಮ ತಾಯಿ ಇದಕ್ಕೆಲ್ಲಾ ಒಪ್ಪುವುದಿಲ್ಲವೆಂದು ವಿವೇಕ್ ತಿಳಿಸಿದ್ದಾನೆ.

ನಿಮ್ಮ ತಂದೆ ವಿರುದ್ಧ ದಾಖಲಾಗಿರುವ ಕೇಸ್‌ನಲ್ಲಿ ಅರೆಸ್ಟ್ ಮಾಡದೇ, ಬಿ ರಿಪೋರ್ಟ್ ಹಾಕಲು ದೊಡ್ಡವರಿಂದ ಪೊಲೀಸರಿಗೆ ಹೇಳಿಸುತ್ತೇವೆ ಎಂದು ಮಗನ ಬಳಿ ಹೇಳಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದ್ದಾರೆ. ಆದರೆ ಹರ್ಷನ ಯಾವುದೇ ಆಮಿಷಗಳಿಗೆ ಒಳಗಾಗದ ನನ್ನ ಮಗ ವಿವೇಕ್, ಈ ವಿಚಾರದಲ್ಲಿ ನೀವುಂಟು, ಅವರುಂಟು ಎಂದು ಹೇಳಿದ್ದಾನೆ. ಈ ವೇಳೆ ನನ್ನ ಮಗನ ಮೊಬೈಲ್ ನಂಬರ್ ಪಡೆದ ಹರ್ಷ, ನಿಮ್ಮ ತಂದೆ ಬಂದಾಗ ಮಾತನಾಡುತ್ತೇವೆ ಎಂದು ಹೇಳಿ ಅಲ್ಲಿಂದ ನಿರ್ಗಮಿಸಿದ್ದಾರೆ. ತರುವಾಯ ಹರ್ಷ ಹಾಗೂ ಶ್ರೀನಿಧಿ ನನ್ನ ಮಗನ ಮೊಬೈಲ್‌ಗೆ ಹಲವು ಬಾರಿ ಕರೆ ಮಾಡಿ ನನ್ನ ಬಗ್ಗೆ ವಿಚಾರಿಸಿದ್ದಾರೆ ಎಂದು ದೂರಿದ್ದಾರೆ.

ಈ ಸಂಬಂಧ ಲೋಕಾಯುಕ್ತರು, ಪೊಲೀಸರು ಹಾಗೂ ಇಡಿ ಅಧಿಕಾರಿಗಳಿಗೆ ದೂರು ನೀಡಿರುವ ಸ್ನೇಹಮಯಿ ಕೃಷ್ಣ, ಹರ್ಷನ ಮೊಬೈಲ್ ವಶಕ್ಕೆ ಪಡೆದು ಅದರಲ್ಲಿರುವ ವಿಡಿಯೋಗಳನ್ನು ಪರಿಶೀಲನೆ ನಡೆಸಬೇಕು. ಜೊತೆಗೆ ಹರ್ಷ, ಶ್ರೀನಿಧಿ ಹಾಗೂ ಪಾರ್ವತಿ ಅವರನ್ನು ವಿಚಾರಣೆಗೊಳಪಡಿಸಬೇಕು ಎಂದು ಕೋರಿದ್ದಾರೆ. ಇನ್ನು ಮುಂದೆ ನನ್ನ ಹಾಗೂ ನನ್ನ ಕುಟುಂಬದ ತಂಟೆಗೆ ಬರದಂತೆ ಸೂಕ್ತ ಎಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಮನೆಯ ಸಿಸಿಟಿವಿಯಲ್ಲಿ ಸೆರೆಯಾಗಿರುವ ದೃಶ್ಯಾವಳಿಗಳ ಸಿಡಿ ಸಮೇತ ಸ್ನೇಹಮಯಿ ಕೃಷ್ಣ ದೂರು ನೀಡಿದ್ದಾರೆ.

ಭ್ರಷ್ಟಾಚಾರದಲ್ಲಿ ಕಾಂಗ್ರೆಸ್, ಬಿಜೆಪಿ ಮುಖಂಡರ ಪಾಲಿದೆಯೇ?

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ಸೇರಿದಂತೆ ಕಾಂಗ್ರೆಸ್ ನಾಯಕರ ವಿರುದ್ಧದ ವಕ್ಫ್ ಹಗರಣ ಮುಚ್ಚಿ ಹಾಕಲು ಸಂಧಾನ ನಡೆಸುತ್ತಿರುವವರು ಬಿಜೆಪಿ ನಾಯಕರು ಎಂಬ ಆರೋಪ ತೀವ್ರ ಕುತೂಹಲ ಮೂಡಿಸಿದೆ. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ವಕ್ಫ್ ಹಗರಣಗಳ ಬಗ್ಗೆ ತನಿಖೆ ನಡೆಸಿ, ವರದಿ ಸಲ್ಲಿಸಿದ್ದ ರಾಜ್ಯ ಅಲ್ಪ ಸಂಖ್ಯಾತ ಆಯೋಗದ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ಮಾಹಿತಿ ಬಹಿರಂಗಪಡಿಸದಂತೆ ವಿಜಯೇಂದ್ರ 150 ಕೋಟಿ ಆಮಿಷವೊಡ್ಡಿದ್ದರು ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದರು. ಕಾಂಗ್ರೆಸ್ ನಾಯಕರು ವಕ್ಫ್ ಆಸ್ತಿ ಕಬಳಿಸಿರುವುದನ್ನು ಮುಚ್ಚಿ ಹಾಕಲು ಬಿಜೆಪಿ ನಾಯಕರೆ ಸಹಾಯ ಮಾಡುತ್ತಿದ್ದಾರೆ ಎಂಬ ಆರೋಪ ರಾಜ್ಯ ರಾಜಕೀಯದಲ್ಲಿ ಭಾರೀ ಚರ್ಚೆ ಹುಟ್ಟು ಹಾಕಿರುವ ಸಂದರ್ಭದಲ್ಲಿ ಮೈಸೂರು ನಗರ ಬಿಜೆಪಿ ಕಾರ್ಯದರ್ಶಿ ಹರ್ಷ ಎಂಬಾತ ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯರ ಕುಟುಂಬ ಪರ ಸಂಧಾನಕ್ಕೆ ಮುಂದಾಗಿರುವುದು ಮತ್ತಷ್ಟು ಕುತೂಹಲಕ್ಕೆಡೆ ಮಾಡಿದೆ. ಸ್ನೇಹಮಯಿ ಕೃಷ್ಣಗೆ ಆಮಿಷವೊಡ್ಡಿದ್ದಾನೆಂಬ ಆರೋಪ ಹೊತ್ತಿರುವ ಹರ್ಷ ನಗರ ಬಿಜೆಪಿ ಕಾರ್ಯದರ್ಶಿ. ಈತ ಯೂಟ್ಯೂಬ್ ಚಾನಲ್ ವರದಿಗಾರ ಶ್ರೀನಿಧಿಯೊಂದಿಗೆ ಸಿದ್ದರಾಮಯ್ಯ ಪತ್ನಿ ಪಾರ್ವತಿ ಪರವಾಗಿ ಸಂಧಾನಕ್ಕಿಳಿದಿದ್ದೇಕೆ ಎಂಬ ಸಂಶಯದ ಪ್ರಶ್ನೆ ಉದ್ಭವಿಸಿದೆ.

ಮೈಸೂರು ಪಾಲಿಕೆ ಚುನಾವಣೆ ಸಂಬಂಧ ಸ್ನೇಹಮಯಿ ಕೃಷ್ಣರ ಭೇಟಿ ಮಾಡಿದ್ದು ನಿಜ: ಹರ್ಷ ಸ್ಪಷ್ಟನೆ

ನಗರ ಪಾಲಿಕೆ ಚುನಾವಣೆ ವಿಚಾರವಾಗಿ ನಾನು ಸ್ನೇಹಮಯಿ ಕೃಷ್ಣ ಭೇಟಿ ಮಾಡಿದ್ದೆ ಎಂದು ಹರ್ಷ ಸ್ಪಷ್ಟಪಡಿಸಿದ್ದಾರೆ. 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಹರ್ಷ, ಹೌದು, ನಾನು ಸ್ನೇಹಮಯಿ ಕೃಷ್ಣನನ್ನು ಭೇಟಿ ಮಾಡಿದ್ದೆ. ಆದರೆ ನಗರಪಾಲಿಕೆ ಚುನಾವಣೆ ವಿಚಾರವಾಗಿ ಮಾತ್ರ ಮಾತನಾಡಿದ್ದೇನೆಯೇ ಹೊರತು ಮುಡಾ ಪ್ರಕರಣ ಸಂಬಂಧ ಸಿದ್ದರಾಮಯ್ಯನವರ ಕುಟುಂಬದ ಪರ ಸಂಧಾನಕ್ಕೆ ಹೋಗಿರಲಿಲ್ಲ ಎಂದು ತಿಳಿಸಿದ್ದಾರೆ.

ನಾನು ಆಮಿಷಕ್ಕೆ ಒಳಗಾಗಿಲ್ಲ; ಗಂಗರಾಜು ಸ್ಪಷ್ಟನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದಲ್ಲಿ ನಾನು ಯಾವುದೇ ಆಮಿಷಕ್ಕೆ ಒಳಗಾಗಿಲ್ಲ ಎಂದು ಆರ್‌ಟಿಐ ಕಾರ್ಯಕರ್ತ ಗಂಗರಾಜು ಸ್ಪಷ್ಟಪಡಿಸಿದ್ದಾರೆ. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಹರ್ಷ ಯಾರು ಎಂಬುದು ನನಗೆ ಗೊತ್ತಿಲ್ಲ. ಹೀಗಿರುವಾಗ ಆತ ನನ್ನ ಭೇಟಿ ಮಾಡಿದ್ದಾನೆ, ಹಣ ಕೊಟ್ಟಿದ್ದಾನೆ ಎಂಬ ಆರೋಪ ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದ್ದಾರೆ. ಲೋಕಾಯುಕ್ತರು, ಪೊಲೀಸರು ಹಾಗೂ ಇಡಿಗೆ ಈಗ ಸ್ನೇಹಮಯಿ ಕೃಷ್ಣ ದೂರು ನೀಡಿದ್ದಾರೆ. ಈ ವಿಚಾರವಾಗಿ ಯಾವುದೇ ತನಿಖಾ ಸಂಸ್ಥೆ ನನ್ನ ಕರೆದರೆ ವಿಚಾರಣೆಯಲ್ಲಿ ಭಾಗಿಯಾಗಿ ನನ್ನ ಹೇಳಿಕೆ ನೀಡುತ್ತೇನೆ ಎಂದು ಗಂಗರಾಜು ತಿಳಿಸಿದ್ದಾರೆ.

ಆಸ್ಪತ್ರೆಯಿಂದ ಮನೆಗೆ ಮರಳಿದ ದರ್ಶನ್

ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ದರ್ಶನ್ ಅವರನ್ನು ಕರೆದೊಯ್ಯಲು ಪತ್ನಿ ವಿಜಯಲಕ್ಷ್ಮಿ, ಪುತ್ರ ವಿನೀಶ್ ಹಾಗೂ ಆಪ್ತರು ಆಗಮಿಸಿದ್ದರು. ಆಸ್ಪತ್ರೆಯಿಂದ ಹೊರಬರುತ್ತಲೇ ದರ್ಶನ್ ಕಾರ್ ಹತ್ತಿ ನೇರವಾಗಿ ಹೊಸಕೆರೆಹಳ್ಳಿಯಲ್ಲಿ ಪತ್ನಿ ವಿಜಯಲಕ್ಷ್ಮಿ ವಾಸವಿರುವ ಅಪಾರ್ಟ್‌ಮೆಂಟ್‌ಗೆ ತೆರಳಿದರು. ತೀವ್ರ ಬೆನ್ನುನೋವು ಎಂಬ ಅನಾರೋಗ್ಯ ಕಾರಣ ನೀಡಿ ಆಸ್ಪತ್ರೆಗೆ ದಾಖಲಾಗಿದ್ದ ದರ್ಶನ್ ಅವರಿಗೆ ಇದೇ 11 ರಂದು ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ ಎಂದಿದ್ದರು.

ನಿಧನ



ಕೃಷ್ಣೇಗೌಡ

ಮೈಸೂರು, ಡಿ. 18– ಮೈಸೂರಿನ ವಿಜಯಶ್ರೀಪುರ ನಿವಾಸಿ ಕೃಷ್ಣೇಗೌಡ (50) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಮೀನಾಕ್ಷಿ, ಪುತ್ರ ಗಂಗಾಧರ್, ಸಹೋದರ ಬಸವರಾಜು ಸೇರಿದಂತೆ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಡಾ ಸಭೆಯಲ್ಲಿ ಕೈಗೊಂಡ ಹಲವು ಸುಧಾರಣಾ ಕ್ರಮಗಳಿಗೆ ಅಧಿಕಾರಿಗಳು, ಜನಪ್ರತಿನಿಧಿಗಳಿಂದಲೇ ಎಳ್ಳು-ನೀರು

ಎಸ್ಟೇಟ್ ಆಫೀಸರ್ ನೇಮಕ ಮರೀಚಿಕೆಯಾಯ್ತು!

ಮೈಸೂರು,ಡಿ.18(ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಆಸ್ತಿ ಸಂರಕ್ಷಿಸಲು ಈ ಹಿಂದೆ ಪ್ರಸ್ತಾಪವಾಗಿದ್ದ ಪ್ರತ್ಯೇಕ ಎಸ್ಟೇಟ್ ಆಫೀಸರ್ ನೇಮಿಸುವ ವಿಚಾರ ನೇಪಥ್ಯಕ್ಕೆ ಸರಿದಿದೆ.

ನಕಲಿ ದಾಖಲೆ ಸೃಷ್ಟಿಸಿ ನಿವೇಶನಗಳನ್ನು ಪರಭಾರೆ ಮಾಡುವುದು, ಒತ್ತುವರಿ, ನಕಲಿ ಸೀಲು, ಸಹಿ ಮೂಲಕ ಆಸ್ತಿ ಲಪಟಾಯಿಸುವಂತಹ ಹಲವು ಪ್ರಕರಣಗಳು ಬೆಳಕಿಗೆ ಬಂದು ಲಕ್ಷ್ಮೀಪುರಂ ಠಾಣೆ, ಸಿಐಡಿಯಲ್ಲೂ ನೂರಾರು ಪ್ರಕರಣಗಳು ದಾಖಲಾಗಿದ್ದು, ಇನ್ನೂ ತನಿಖೆ ಪೂರ್ಣಗೊಂಡಿಲ್ಲ.

ಇದರಿಂದಾಗಿ ನಿಯಮಾನುಸಾರ ನಿವೇಶನ ಪಡೆದಂತಹ ಫಲಾನುಭವಿಗಳು, ಹರಾಜಿನಲ್ಲಿ ಅತೀ ಹೆಚ್ಚು ಬೆಲೆ ಕೊಟ್ಟು ನಿವೇಶನ ಖರೀದಿಸಿದವರು ಹಾಗೂ ಬೇರೆಯವರಿಂದ ಮುಡಾ ನಿವೇಶನ ಖರೀದಿಸಿದ ಅಮಾಯಕರು ಸಂಕಷ್ಟಕ್ಕೆ ಗುರಿಯಾಗಿರುವ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿದ್ದರಿಂದ ಕಳೆದ 6 ವರ್ಷಗಳ ಹಿಂದೆಯೇ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಎಸ್ಟೇಟ್ ಆಫೀಸರ್ ನೇಮಿಸಲು ನಿರ್ಧಾರ ಕೈಗೊಳ್ಳಲಾಗಿತ್ತು.

ಮುಡಾ ಕಚೇರಿಯಲ್ಲೇ ಪ್ರತ್ಯೇಕ ಘಟಕ ಸ್ಥಾಪಿಸಿ, ಎಸ್ಟೇಟ್ ಆಫೀಸರ್‌ಗೆ ಸಪೋರ್ಟಿಂಗ್ ಸಿಬ್ಬಂದಿ, ವಾಹನ ನೀಡಿ ಕೆಲಸ ನಿರ್ವಹಿಸಲು ವ್ಯವಸ್ಥೆ ಕಲ್ಪಿಸಬೇಕೆಂದು ತೀರ್ಮಾನಿಸಿ ಸಭಾ ನಡಾವಳಿಗೆ ಸರ್ಕಾರದ ಅನುಮೋದನೆಯೂ ದೊರೆತಿತ್ತು.

ಎಸ್ಟೇಟ್ ಆಫೀಸರ್ ನೇಮಿಸುವ ಸಂಬಂಧ ಪ್ರಾಧಿಕಾರದ ಬಜೆಟ್ ಸಭೆಯಲ್ಲೂ ಅನುದಾನ ಮೀಸಲಿರಿಸಲಾಗಿತ್ತು. ಆದರೆ ಅದು ಮೀಟಿಂಗ್

ನಿವೇಶನಗಳ ದಾಖಲಾತಿ ದೃಢೀಕರಣ ವ್ಯವಸ್ಥೆಯೂ ಜಾರಿಯಾಗಲಿಲ್ಲ



ಪ್ರೊಸೀಡಿಂಗ್‌ನಲ್ಲಿ ದಾಖಲಾಯಿತೇ ಹೊರತು, ಈವರೆಗೆ ಅನುಷ್ಠಾನಗೊಳ್ಳಲಿಲ್ಲ. ಪರಿಣಾಮ ಪ್ರಾಧಿಕಾರದ ನಿವೇಶನಗಳನ್ನು ಕಂಡಕಂಡವರಿಗೆ ಹಂಚಿಕೆ ಮಾಡಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಸಲಾಯಿತು.

ಒತ್ತುವರಿ ಪತ್ತೆ ಮಾಡಿ ಪೊಲೀಸ್ ರಕ್ಷಣೆ ಪಡೆದು ತೆರವುಗೊಳಿಸಿ ತಂತಿ ಬೇಲಿ ಹಾಕಿ ಅಲ್ಲಿ 'ಮುಡಾ ಆಸ್ತಿ' ಎಂದು ಫಲಕ ಅಳವಡಿಸುವುದು ಎಸ್ಟೇಟ್ ಆಫೀಸರ್ ಮತ್ತು ತಂಡದ ಕೆಲಸವಾಗಿತ್ತು. ಅದೇ ರೀತಿ ಸಾರ್ವಜನಿಕರು ಮುಡಾ ನಿವೇಶನಗಳನ್ನು ಬೇರೆಯವರಿಂದ ಖರೀದಿಸುವಾಗ ದಾಖಲೆ ಪತ್ರಗಳ ನೈಜತೆ ಪರಿಶೀಲಿಸಿ ದೃಢೀಕರಿಸಲು ಪ್ರತ್ಯೇಕ ಅಧಿಕಾರಿ ನಿಯೋಜಿಸಬೇಕೆಂಬ ನಿರ್ಣಯ ಸಹ ಜಾರಿಯಾಗದ ಕಾರಣ ವಿವಾದಿತ ಅಥವಾ ಇನ್ನಿತರ ಅಡೆತಡೆ ಇರುವ ನಿವೇಶನ ಖರೀದಿಸಿದ ಮುಗ್ಧ ಜನರು ವಂಚನೆಗೊಳಗಾಗಿ ತೊಂದರೆ ಅನುಭವಿಸುವಂತಾಗಿದೆ. ಮುಡಾ ಬಡಾವಣೆಗಳ ನಿವೇಶನ ಖರೀದಿಸುವವರು ದಾಖಲೆ ಪತ್ರಗಳನ್ನು ಪರಿಶೀಲಿಸಿಕೊಳ್ಳಿ ಎಂದು ಅಧಿಕಾರಿಗಳು ಹೇಳುತ್ತಾರೆ. ಆ ಪ್ರಕ್ರಿಯೆಗೆಂದು ಸಾರ್ವಜನಿಕರು ಬಂದರೆ ಅಲೆದಾಡಿಸಿ ಕಡೆಗೆ ಲಂಚ ಪಡೆದು ಕೆಲಸವನ್ನು ಮಾಡಿಕೊಡದೇ ತೊಂದರೆ ಕೊಡುತ್ತಿದ್ದಾರೆ ಎಂದು ನಾಗರಿಕರು ಅಳಲು ತೋಡಿಕೊಳ್ಳುತ್ತಿದ್ದಾರೆ.

ನಿವೇಶನಗಳ ಹಂಚಿಕೆ, ಸ್ವಾಧೀನ, ಖಾತಾ ನೋಂದಣಿ, ನಿರಾಕ್ಷೇಪಣಾ ಪತ್ರ, ಕಂದಾಯ ನಿಗದಿಯಂತಹ ದಾಖಲೆಗಳು ಮುಡಾ ಕಚೇರಿ ಕಡತಗಳಲ್ಲಿನ ಮೂಲ ದಾಖಲೆ ಪತ್ರಗಳನ್ನು ತಾಳೆ ಮಾಡಿ ಅವು ನಿಜವಾದ ಆಸ್ತಿಯೇ ಅಥವಾ ನಕಲಿಯೇ? ಒಂದೇ ನಿವೇಶನವನ್ನು ಇಬ್ಬರು, ಮೂವರಿಗೆ ಹಂಚಿಕೆ ಮಾಡಲಾಗಿದೆಯೇ ಎಂಬುದರ ಬಗ್ಗೆ ಖರೀದಿದಾರರಿಗೆ ಲಿಖಿತ ಮೂಲಕ ದೃಢೀಕರಿಸುವ ವ್ಯವಸ್ಥೆ ಇದ್ದಿದ್ದರೆ ಅಮಾಯಕರಿಗೆ ಮೋಸ, ವಂಚನೆಯಾಗುವುದು ತಪ್ಪುತ್ತಿತ್ತು ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಮುಡಾದ ಎಲ್ಲಾ ದಾಖಲೆ ಪತ್ರಗಳ ಪುಟಗಳನ್ನು ಸ್ಕ್ಯಾನ್ ಮಾಡಿ ಸಾಫ್ಟ್‌ವೇರ್‌ನಲ್ಲಿ ಶೇಖರಿಸಿ ಸಂರಕ್ಷಿಸಲು ಲಕ್ಷಾಂತರ ರೂ. ವೆಚ್ಚದ ಯೋಜನೆಯನ್ನೂ ಈ ಹಿಂದೆ ಆರಂಭಿಸಲಾಗಿತ್ತಾದರೂ, ಹಣ ವ್ಯಯವಾಯಿತೇ ಹೊರತು, ದಾಖಲೆಗಳ ಡಿಜಿಟಲೀಕರಣವಾಗಲಿಲ್ಲ. ಪರಿಣಾಮ ಮುಡಾ ಕಡತಗಳು, ದಾಖಲೆ ಪತ್ರಗಳು ಕಣ್ಮರೆಯಾಗುತ್ತಿರುವುದು, ಕೆಲ ಹಾಳೆಗಳು, ನೋಟ್‌ಶೀಟ್‌ಗಳನ್ನು ಕಿತ್ತು ಅವ್ಯವಹಾರ ಮಾಡಲು ಸುಲಭವಾಗಿದೆ.

> “ ಈ ಹಿಂದೆ ತಿಂಗಳಿಗೊಮ್ಮೆ 'ಜನಸ್ಪಂದನ' ಸಭೆ ನಡೆಸಿ ಅಧಿಕಾರಿಗಳ ಸಮ್ಮುಖದಲ್ಲಿ ಸಾರ್ವಜನಿಕರ ಕುಂದು-ಕೊರತೆ ಆಲಿಸಿ ಸ್ಥಳದಲ್ಲೇ ಸಮಸ್ಯೆ ಇತ್ಯರ್ಥಗೊಳಿಸುವ ವ್ಯವಸ್ಥೆ ಇತ್ತು. ಅದರಿಂದ ಸಾರ್ವಜನಿಕರ ಅರ್ಜಿಗಳು ಯಾರ ಹಂತದಲ್ಲಿ ಬಾಕಿ ಇವೆ ಎಂಬುದು ತಿಳಿಯುತ್ತಿತ್ತು. ಸೇವೆ ವಿಳಂಬ ಮಾಡಿದರೆ, ಲಂಚಕ್ಕೆ ಬೇಡಿಕೆ ಇಟ್ಟು ಕಡತ ಬಾಕಿ ಇರಿಸಿದ್ದ ಪ್ರಕರಣಗಳೂ ಬೆಳಕಿಗೆ ಬರುತ್ತಿದ್ದವು. ಆದರೆ ಈಗ ಕುಂದು-ಕೊರತೆ ಆಲಿಸುವುದಿರಲಿ, ಅರ್ಜಿದಾರರಿಗೆ ಸೇವೆ ಒದಗಿಸುವ ಬಗ್ಗೆ ಹಿಂಬರಹ ನೀಡುವುದೂ ದುಸ್ತರವಾಗಿದೆ.
> –ಮೈಸೂರು ನಾಗರಿಕರ ಆರೋಪ

ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದ ಗೋಪುರ ನಿರ್ಮಾಣಕ್ಕೆ ಅನುಮತಿ ನೀಡುವಲ್ಲಿ ವಿಳಂಬ ಧೋರಣೆ

ಡಿ.23ರಿಂದ ದೇವಸ್ಥಾನದ ಅಧ್ಯಕ್ಷ ಶ್ರೀಧರ್ ರಾಜೇ ಅರಸ್ ಉಪವಾಸ ಸತ್ಯಾಗ್ರಹ



ಕೆಲ ತಿಂಗಳ ಹಿಂದೆ ಸಹ ದೇವಸ್ಥಾನದ ರಾಜಗೋಪುರ ನಿರ್ಮಾಣಕ್ಕೆ ಅನುಕೂಲವಾಗುವಂತೆ ಅಂಗಡಿಯೊಂದರ ತೆರವಿಗೆ ಆಗ್ರಹಿಸಿ ಶ್ರೀಧರ ರಾಜೇ ಅರಸ್ ಉಪವಾಸ ಸತ್ಯಾಗ್ರಹ ನಡೆಸಿದ್ದರು.

ಮೈಸೂರು, ಡಿ.18(ಪಿಎಂ)– ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದ ಗೋಪುರ ನಿರ್ಮಾಣಕ್ಕೆ ಅನುಮತಿ ನೀಡುವಂತೆ ಒತ್ತಾಯಿಸಿ ದೇವಸ್ಥಾನ ಸಮಿತಿ ಅಧ್ಯಕ್ಷ ಬಿ.ಎಸ್.ಶ್ರೀಧರ ರಾಜೇ ಅರಸ್ ಡಿ.23ರ ಬೆಳಗ್ಗೆ 9.30ರಿಂದ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಎದುರು ಉಪವಾಸ ಸತ್ಯಾಗ್ರಹ ನಡೆಸಲಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಬಿ.ಎಸ್.ಶ್ರೀಧರ ರಾಜೇ ಅರಸ್ ಅವರು, ಈ ದೇವಸ್ಥಾನವು 130 ವರ್ಷಗಳ ಪರಂಪರೆಯನ್ನು ಹೊಂದಿದೆ. ಸುಮಾರು ವರ್ಷಗಳ ಹಿಂದೆ ದೇವಾಲಯದ ಛಾವಣಿಯು ಶಿಥಿಲ ಸ್ಥಿತಿಯಲ್ಲಿತ್ತು. ಪ್ರಸಿದ್ಧ ಗಂಜೀಫಾ ಕಲಾವಿದ ರಘುಪತಿ ಭಟ್ ಅವರು ತಾವು ವಿಶೇಷವಾಗಿ ಸಿದ್ಧಪಡಿಸಿದ್ದ ನೈಸರ್ಗಿಕ ಬಣ್ಣಗಳನ್ನು ಬಳಸಿ ಅದನ್ನು ಮರು ಸ್ಥಾಪಿಸಿದರು.

ನಂತರ ದೇವಾಲಯ ಸಮಿತಿಯು ಗೋಪುರದೊಂದಿಗೆ ಮುಖ್ಯದ್ವಾರ ನಿರ್ಮಿಸಲು ಬಯಸಿತು. ಅರ್ಜಿಯೊಂದಿಗೆ ವಿವರವಾದ ವಾಸ್ತುಶಿಲ್ಪದ ಯೋಜನೆ ಒಳಗೊಂಡಂತೆ 15-3-2024ರಂದು ಪುರಾತತ್ವ, ಪರಂಪರೆ ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆಗೆ ಸಲ್ಲಿಸಲಾಯಿತು. ಬಳಿಕ ಇಲಾಖೆಯು ಗೋಪುರ ನಿರ್ಮಿಸಲು ಅನುಮತಿ ಪತ್ರ ಸಹ ನೀಡಿತು.

ಕಾಮಗಾರಿ ನಡೆಯುತ್ತಿರುವಾಗಲೇ ಮೈಸೂರು ಮಹಾನಗರ ಪಾಲಿಕೆ ಸಹಾಯಕ ಯೋಜನಾ ನಿರ್ದೇಶಕರು 30-5-2024ರಂದು ಪಾಲಿಕೆ ಅನುಮತಿ ಪಡೆಯದ ಕಾರಣ ಕಾಮಗಾರಿ ಸ್ಥಗಿತಗೊಳಿಸಬೇಕೆಂದು ನೋಟಿಸ್ ಜಾರಿ ಮಾಡಿದರು. ಹೀಗಾಗಿ ಸಮಿತಿಯು 10-7-2024ರಂದು ಪಾಲಿಕೆಗೆ ಎಲ್ಲಾ ವಿವರಗಳೊಂದಿಗೆ ಅರ್ಜಿ ಸಲ್ಲಿಸಿತು ಎಂದು ಅವರು ತಿಳಿಸಿದರು.

ಹೋರಾಟಕ್ಕೆ ನಿರ್ಧಾರ: ದೇವಾಲಯ ಸಮಿತಿ ಅಧ್ಯಕ್ಷ ಶ್ರೀಧರ ರಾಜೇ ಅರಸ್, ಸ್ಪಷ್ಟೀಕರಣಕ್ಕಾಗಿ ಪುರಾತತ್ವ, ಪರಂಪರೆ ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆಯನ್ನು ಸಂಪರ್ಕಿಸಿದರು. ಪಾರಂಪರಿಕ ಕಟ್ಟಡ ಕಾಮಗಾರಿಗಳಿಗೆ ಪಾಲಿಕೆಯಿಂದ ಅನುಮತಿ ಪಡೆಯುವ ಅಗತ್ಯವಿಲ್ಲವೆಂದು ಪುರಾತತ್ವ ಇಲಾಖೆಯು ದೇವಸ್ಥಾನ ಸಮಿತಿ ಅಧ್ಯಕ್ಷರಿಗೆ ತಿಳಿಸಿದೆ. ಅದಾಗ್ಯೂ ಪುರಾತತ್ವ ಪರಂಪರೆ ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆಯ ಮುಖ್ಯಸ್ಥರಾದ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆಯಲು ನಿರ್ಧರಿಸಿದರು.

ದೇವಸ್ಥಾನ ಸಮಿತಿ ಅಧ್ಯಕ್ಷರು ಸಕಾಲದಲ್ಲಿ ಪಾಲಿಕೆ ಸಹಾಯಕ ಯೋಜನಾ ನಿರ್ದೇಶಕರು ಕೇಳಿದ ಎಲ್ಲಾ ದಾಖಲೆಗಳೊಂದಿಗೆ ಅನುಮತಿಗಾಗಿ ಅರ್ಜಿ ಸಲ್ಲಿಸಿದ್ದರು. ಪಾಲಿಕೆ ಯೋಜನಾ ವಿಭಾಗವು ತಂತ್ರಜ್ಞಾನ ಅಳವಡಿಸಿಕೊಂಡಿದೆ. ಹೀಗಾಗಿ ದೇವಸ್ಥಾನ ಅಧ್ಯಕ್ಷರು ತಮ್ಮ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೇಳಿಕೊಂಡರು. ಆದರೆ ಸರ್ವರ್ ಡೌನ್ ಕಾರಣ ಅರ್ಜಿ ಸ್ವೀಕೃತಿ ಆಗುತ್ತಿಲ್ಲವೆಂಬ ಪ್ರತಿಕ್ರಿಯೆ ಸಿಕ್ಕಿತು.

ಈ ನಡುವೆ ಈ ಗೊಂದಲಗಳಿಂದ ಬೇಸತ್ತಿದ ದೇವಸ್ಥಾನ ಸಮಿತಿ ಅಧ್ಯಕ್ಷರು, ಮೈಸೂರು ಜಿಲ್ಲಾಧಿಕಾರಿಗಳ ಮೊರೆ ಹೋದರು. ಜಿಲ್ಲಾಧಿಕಾರಿಗಳು ಕೂಡಲೇ ಪಾಲಿಕೆ ವಲಯ ಆಯುಕ್ತರಿಗೆ ದೂರವಾಣಿ ಕರೆ ಮಾಡಿ ವಿಷಯ ಕುರಿತು ಚರ್ಚೆ ನಡೆಸಿದರು. ಬಳಿಕ ಶೀಘ್ರವೇ ಅನುಮತಿ ನೀಡಲಾಗುವುದು ಎಂದು ಜಿಲ್ಲಾಧಿಕಾರಿಗಳು ಭರವಸೆ ನೀಡಿದ ಹಿನ್ನೆಲೆಯಲ್ಲಿ ದೇವಸ್ಥಾನದ ಅಧ್ಯಕ್ಷರು ಹಿಂತಿರುಗಿದ್ದರು.

ಭರವಸೆಯಂತೆ ಅನುಮತಿ ದೊರೆಯದೇ ಇದ್ದಾಗ ದೇವಸ್ಥಾನದ ಅಧ್ಯಕ್ಷರು ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಪರಿಶೀಲಿಸಿದರು. ಈ ವೇಳೆ ಜಿಲ್ಲಾಧಿಕಾರಿಗಳಿಗೆ ಅವರು ನೀಡಿದ ಅರ್ಜಿ ಮುಡಾ ಆಯುಕ್ತರಿಗೆ ರವಾನೆಯಾಗಿರುವುದು ತಿಳಿಯಿತು. ಯಾವ ಕಾರಣಕ್ಕೆ ಮುಡಾಗೆ ಅರ್ಜಿ ತಲುಪಿದೆಯೋ ದೇವರೇ ಬಲ್ಲ. ಈ ರೀತಿಯ ಬೇಜವಾಬ್ದಾರಿ, ಅಸಡ್ಡೆ ಮತ್ತು ಅಧಿಕಾರಶಾಹಿ ಧೋರಣೆಯಿಂದ ಬೇಸತ್ತಿರುವ ದೇವಸ್ಥಾನದ ಸಮಿತಿ ಅಧ್ಯಕ್ಷ ಶ್ರೀಧರ್‌ರಾಜೇ ಅರಸ್, ಜಿಲ್ಲಾಧಿಕಾರಿಗಳ ಕಚೇರಿ ಎದುರು ಉಪವಾಸ ಸತ್ಯಾಗ್ರಹ ನಡೆಸಲು ನಿರ್ಧರಿಸಿದ್ದಾರೆ.

ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಹೊದಿಕೆ ವಿತರಣೆ



ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಹೊದಿಕೆ ವಿತರಿಸಲಾಯಿತು.

ಮೈಸೂರು,ಡಿ.18–ಮೈಸೂರಲ್ಲಿ ಹೆಚ್ಚುತ್ತಿರುವ ಚಳಿ ಹಾಗೂ ಮಂಜಿನ ವಾತಾವರಣದಲ್ಲಿ ತೊಂದರೆ ಅನುಭವಿಸುತ್ತಿದ್ದ ಭಿಕ್ಷುಕರಿಗೆ, ನಿರ್ಗತಿಕರಿಗೆ ಹಾಗೂ ಕೆ.ಆರ್.ಆಸ್ಪತ್ರೆಯ ರೋಗಿಗಳ ಆರೈಕೆ ಮಾಡಲು ಬಂದಿರುವ ನಾಗರಿಕರಿಗೆ ಯೂನಿಕ್ ಯೂತ್ ಫೌಂಡೇಶನ್ ಹಾಗೂ ಕೆಎಂಪಿಕೆ ಟ್ರಸ್ಟ್ ವತಿಯಿಂದ ಹೊದಿಕೆ ಹಂಚುವ ಮೂಲಕ ಮಾನವೀಯತೆ ಮೆರೆದರು.

ಈಗಾಗಲೇ 15 ದಿನಗಳ ಕಾಲ ನಿರಂತರವಾಗಿ ರಾತ್ರಿ 12ರಿಂದ 1ರವರೆಗೂ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಮಾರ್ಕೆಟ್, ಹಾಡಿ ಜನಾಂಗದವರಿಗೆ, ಗುಡಿಸಲಿನಲ್ಲಿ ವಾಸ ಮಾಡುವ ಬಡ ಜನರಿಗೆ ಸೇರಿದಂತೆ ಇನ್ನಿತರ ಸ್ಥಳಗಳಿಗೆ ತೆರಳಿ ಹೊದಿಕೆ ವಿತರಿಸುತ್ತಿದ್ದು, ಅವರಿಗೆ ಹಲವಾರು ಸಂಘ ಸಂಸ್ಥೆಗಳು ಕೈಜೋಡಿಸುತ್ತಿದ್ದಾರೆ. ಈಗಾಗಲೇ 300ಕ್ಕೂ ಹೆಚ್ಚು ಹೊದಿಕೆ ವಿತರಿಸಿದ್ದಾರೆ. ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಮಾತನಾಡಿ, ಸ್ನೇಹಿತರ ಸಹಕಾರದೊಂದಿಗೆ ಕಳೆದ 4 ವರ್ಷದಿಂದ ನಿರಂತರವಾಗಿ ಡಿಸೆಂಬರ್ ಹಾಗೂ ಜನವರಿ ತಿಂಗಳಿನಲ್ಲಿ ಚಳಿಗಾಲ ಸಂದರ್ಭದಲ್ಲಿ ಸ್ನೇಹಿತರೊಡನೆ ಸ್ಥಳಕ್ಕೆ ತೆರಳಿ ಅವರ ಸ್ಥಿತಿಗಳನ್ನು ನೋಡಿ ಹೊದಿಕೆ ವಿತರಿಸುತ್ತಾ ಬಂದಿದ್ದೇವೆ ಎಂದರು.

ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಮಲೆ ಮಾದೇಶ್ವರ ಸೇವಾ ಸಂಸ್ಥೆಯ ಅಧ್ಯಕ್ಷ ಮಹಾನ್ ಶ್ರೇಯಸ್, ಶಿವು, ಯೂನಿಕ್ ಯೂತ್ ಫೌಂಡೇಶನ್ ಸಂಘಟನೆ ಸಂಚಾಲಕರಾದ ಮುದ್ದಸಿರ್ ಅಲಿ ಖಾನ್, ಡಾ.ಜೀಶನ್. ಧರ್ಮಶ್ರೀ, ಮುಜಕ್ಕಿರ್ ಅಲಿಖಾನ್, ನರ್ಗೀಸ್ ಪಠಾಣ್, ಶಹಾಬ್ ಉರ್ ರೆಹಮಾನ್, ಫೈಜಾನ್ ಅಹ್ಮದ್ ಖಾನ್, ಅಖಿಫ್, ಶಾರುಖ್, ಫೌಸ್, ಹೈದರ್ ಪಠಾಣ್ ಇದ್ದರು.

ಶಂಕರ ಮಠದಲ್ಲಿ ವೇದಾಂತ ಶ್ರವಣ ಕಾರ್ಯಕ್ರಮ

ಮೈಸೂರು, ಡಿ.18(ಬಿಎಲ್‌ಯು)–ಶೃಂಗೇರಿ ಶ್ರೀ ಶಾರದಾ ಪೀಠದ ಅಂಗ ಸಂಸ್ಥೆ ಅಹಂ ಬ್ರಹ್ಮಾಸ್ಮಿ ಫೌಂಡೇಷನ್ ವತಿಯಿಂದ ಮೈಸೂರಿನ ಶಂಕರ ಮಠದ ಶ್ರೀ ಅಭಿನವ ಶಂಕರಾಲಯದಲ್ಲಿ ಡಿ.20ರಿಂದ ಮೂರು ದಿನಗಳ ವೇದಾಂತ ಶ್ರವಣ ಕಾರ್ಯಕ್ರಮ ನಡೆಯಲಿದೆ. ಡಿ.20ರಿಂದ 22ರವರೆಗೆ ಸಂಜೆ 5ರಿಂದ 8 ಗಂಟೆವರೆಗೆ ವೇದಾಂತ ಶ್ರವಣ ಕಾರ್ಯಕ್ರಮ ಆಯೋಜಿಸಲಾಗಿದೆ. ಎರಡು ಅವಧಿಯಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಮೊದಲ ಅವಧಿಯಲ್ಲಿ ಸಂಜೆ 5 ರಿಂದ 6.30ರವರೆಗೆ ನಾಡಿನ ಪ್ರಖ್ಯಾತ ವಿದ್ವಾಂಸರು ಉಪನ್ಯಾಸ ನೀಡಲಿದ್ದಾರೆ. ಎರಡನೇ ಅವಧಿಯಲ್ಲಿ ಸಂಜೆ 6.30 ರಿಂದ 8 ಗಂಟೆವರೆಗೆ ಗದಗದ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮಿ ಅವರು ಶ್ರೀ ಶಂಕರ ಭಗವತ್ಪಾದರು ಮತ್ತು ಸನಾತನ ಧರ್ಮ ವಿಚಾರ ಕುರಿತು ಉಪನ್ಯಾಸ ನೀಡಲಿದ್ದಾರೆ.

ಕಾಂತರಾಜು ವರದಿ ಜಾರಿಗೆ ಆಗ್ರಹಿಸಿ ಬೆಳಗಾವಿ ಸುವರ್ಣಸೌಧದ ಎದುರು ಪ್ರತಿಭಟನೆ

ಬೆಳಗಾವಿ, ಡಿ.18– ತಮಗೆ ಹಿಂದುಳಿದ ವರ್ಗದ ಮೀಸಲಾತಿ ನೀಡುವಂತೆ ಆಗ್ರಹಿಸಿ ಪಂಚಮಸಾಲಿ ಸಮುದಾಯ ಪ್ರತಿಭಟನೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿಯ ಕಾಂತರಾಜು ವರದಿಯನ್ನು ಜಾರಿಗೊಳಿಸುವಂತೆ ಆಗ್ರಹಿಸಿ ಬೆಳಗಾವಿಯ ಸುವರ್ಣ ಸೌಧದ ಮುಂಭಾಗ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಮಹಾ ಒಕ್ಕೂಟ ಹಾಗೂ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಸಹಯೋಗದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಸಾಮಾಜಿಕ, ವೈಜ್ಞಾನಿಕ ಮತ್ತು ಶೈಕ್ಷಣಿಕ ಗಣತಿಯ ಕಾಂತರಾಜು ವರದಿಯನ್ನು ಬಿಡುಗಡೆಗೊಳಿಸಿ ಮೀಸಲಾತಿಗೆ ಹೋರಾಟ ನಡೆಸುತ್ತಿರುವ ಪಂಚಮಸಾಲಿ ಸಮಾಜದ ಸ್ವಾಮೀಜಿಗಳಿಗೆ ಮನವರಿಕೆ ಮಾಡಿಸಿ ಕೊಡಬೇಕು ಎಂದರಲ್ಲದೆ, ಮುಂದುವರೆದ ಸಮಾಜಗಳು ಹಿಂದುಳಿದ ಸಮುದಾಯಕ್ಕೆ ವರ್ಗಾಯಿಸಲ್ಪಡುವಂತೆ ಒತ್ತಡ ಹೇರುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.



ಕಾಂತರಾಜು ವರದಿಯನ್ನು ಜಾರಿಗೊಳಿಸುವಂತೆ ಆಗ್ರಹಿಸಿ ಬೆಳಗಾವಿಯ ಸುವರ್ಣಸೌಧದ ಮುಂಭಾಗ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಮಹಾ ಒಕ್ಕೂಟ, ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಸಹಯೋಗದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯ ಸಂಚಾಲಕರು ಹಾಗೂ ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಎಸ್.ಯೋಗೇಶ ಉಪ್ಪಾರ, ಸಮಾಜದ ಯಾವುದೇ ವರ್ಗಗಳನ್ನು ಮೇಲ್ವರ್ಗದಿಂದ ಕೆಳವರ್ಗಕ್ಕೆ ಬದಲಾಯಿಸಬೇಕಾದರೆ ಆ ಸಮಾಜದ ಸ್ಥಿತಿಗತಿಗಳು, ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಅಧ್ಯಯನ ನಡೆಸದೆ ರಾಜ್ಯ ಸರ್ಕಾರಕ್ಕೆ ಧಮಕಿ ಹಾಕುವುದು ಸರಿಯಲ್ಲ ಎಂದು ಖಂಡಿಸಿದರು.

ಪ್ರವರ್ಗ1 ಹಾಗೂ 2ರಲ್ಲಿ 196 ಅತಿ ಹಿಂದುಳಿದ ಜಾತಿಗಳು ಇರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಹಾಗಾಗಿ ಕಾಂತರಾಜು ವರದಿಯನ್ನು ಬಿಡುಗಡೆಗೊಳಿಸಿದರೆ ಎಲ್ಲಾ ಸಮಾಜಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ತಿಳಿಯುತ್ತದೆ ಎಂದು ಅವರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮೈಸೂರು ಜಿಲ್ಲಾ ಮಡಿವಾಳ ಮಾಚಿದೇವರ ಸಂಘದ ಜಿಲ್ಲಾಧ್ಯಕ್ಷ ಎಸ್.ರವಿನಂದನ್, ಕಾಂಗ್ರೆಸ್ ಮುಖಂಡರಾದ ಶಾಂತಕುಮಾರ್, ಓಬಿಸಿ ಅಧ್ಯಕ್ಷ ಎನ್.ಆರ್.ನಾಗೇಶ್, ಸಯಾದ್ ಮನ್ಸೂರ್, ಲೋಕೇಶ್‌ಕುಮಾರ್ ಮಾದಾಪುರ, ಕೆಪಿಸಿಸಿ ಎಸಿ ಘಟಕದ ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ರಾಜಶೇಖರ್, ಕೆಪಿಸಿಸಿ ಪರಿಶಿಷ್ಟ ಪಂಗಡ ವಿಭಾಗದ ಪ್ರಧಾನ ಕಾರ್ಯದರ್ಶಿ ಶಿಂಶಾ ದಿನೇಶ್, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಗೋಪಿ. ಹಲವಾರು ಮುಖಂಡರು ಇದ್ದರು.

'ಕಪ್ಪು-ಬಿಳುಪು' ಗಾನಲಹರಿ ಇಂದು

ಮೈಸೂರು, ಡಿ.18–ಸ್ಟೆಪ್ ಫೌಂಡೇಷನ್ ವತಿಯಿಂದ ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾ ಭವನದಲ್ಲಿ ನಾಳೆ(ಡಿ.19) ಸಂಜೆ 4ರಿಂದ ರಾತ್ರಿ 9 ಗಂಟೆವರೆಗೆ 'ಕಪ್ಪು-ಬಿಳುಪು' ಹಳೆಯ ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಫೌಂಡೇಷನ್ ಅಧ್ಯಕ್ಷೆ ಎಸ್.ಪ್ರೇಮಲತಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೌರವ ಸಮರ್ಪಣೆ



ರಾಜಸ್ಥಾನ ರಾಜ್ಯದ ಮೌಂಟ್ ಅಬುವಿನಲ್ಲಿರುವ ಬ್ರಹ್ಮಕುಮಾರಿಯರ ರಾಜಯೋಗ ಶಿಕ್ಷಣ ಹಾಗೂ ಸಂಶೋಧನಾ ಪ್ರತಿಷ್ಠಾನದ ಸಮಾಜ ಸೇವಾ ಘಟಕದಿಂದ ಮೈಸೂರಿನ ಜ್ಞಾನ ಸರೋವರ್ ರಿಟ್ರೀಟ್ ಸೆಂಟರ್‌ನಲ್ಲಿ ಮೈಸೂರಿನ ಎನ್.ವಿ.ರಮೇಶ್ ಅವರನ್ನೊಳಗೊಂಡಂತೆ 5 ಜಿಲ್ಲೆಗಳ 10 ಸಾಧಕರನ್ನು ಗೌರವಿಸಲಾಯಿತು.

ಮೈಸೂರು ಮಿತ್ರ ಗುರುವಾರ 19 ಡಿಸೆಂಬರ್ 2024

ಇತಿಹಾಸ ಸೃಷ್ಟಿಸಲಿದೆ ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನ

ವೇದಿಕೆಗಳ ಸಿದ್ಧತೆ ಪರಿಶೀಲಿಸಿದ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ



ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆಗಳ ಸಿದ್ಧತೆ ಕಾರ್ಯಗಳ ಪರಿಶೀಲನೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಂಡ್ಯ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮಾತನಾಡಿದರು.

ಮಂಡ್ಯ,ಡಿ.18– ಮೂರನೇ ಬಾರಿಗೆ ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇತಿಹಾಸ ಸೃಷ್ಟಿಸಲಿದೆ. ಹಲವು ಹೊಸತನಗಳಿಗೆ ಸಾಕ್ಷಿಯಾಗುತ್ತಿರುವ ಸಾಹಿತ್ಯ ಸಮ್ಮೇಳನಕ್ಕೆ ಮಂಡ್ಯ ಸಕಲ ರೀತಿಯಲ್ಲಿ ಸಜ್ಜಾಗಿದೆ ಎಂದು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ಎನ್.ಚಲುವರಾಯಸ್ವಾಮಿ ತಿಳಿಸಿದರು.

ನಗರದ ಸ್ಯಾಂಜೋ ಆಸ್ಪತ್ರೆ ಹಾಗೂ ಅಮರಾವತಿ ಹೋಟೆಲ್ ಹಿಂಭಾಗದಲ್ಲಿ ನಿರ್ಮಿಸುತ್ತಿರುವ ವೇದಿಕೆಗಳ ಸಿದ್ಧತೆ ಕಾರ್ಯಗಳ ಪರಿಶೀಲನೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

70–80 ಎಕರೆ ಪ್ರದೇಶದಲ್ಲಿ ಪ್ರಧಾನ ವೇದಿಕೆ, ಎರಡು ಸಮಾನಾಂತರ ವೇದಿಕೆ, 60 ಎಕರೆ ಪ್ರದೇಶದಲ್ಲಿ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿದೆ. 55 ವಸ್ತುಪ್ರದರ್ಶನ ಮಳಿಗೆಗಳು, 350 ವಾಣಿಜ್ಯ ಮಳಿಗೆ, 450 ಪುಸ್ತಕ ಮಳಿಗೆಗಳು ಕೂಡ ತಲೆ ಎತ್ತಿವೆ. ಊಟಕ್ಕೆ 100 ಕೌಂಟರ್, ನೋಂದಾಯಿತ ಪ್ರತಿನಿಧಿಗಳಿಗೆ 40 ಕೌಂಟರ್‌ಗಳನ್ನು ತೆರೆಯಲಾಗಿದ್ದು ಎಲ್ಲರಿಗೂ ಒಂದೇ ಊಟದ ಮೆನು ಇರಲಿದೆ ಎಂದರು.

ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಆಹಾರದ ಗುಣಮಟ್ಟ ಪರೀಕ್ಷೆ ಮಾಡಿ ವರದಿ ಪಡೆಯಲಾಗುತ್ತದೆ. ನೀರನ್ನು ಸಹ ಪರೀಕ್ಷಿಸಲಾಗುತ್ತದೆ. ಸ್ವಚ್ಛತೆಗೆ 250 ಸಿಬ್ಬಂದಿಯನ್ನು ನೇಮಿಸಲಾಗಿದೆ. 150ಕ್ಕೂ ಹೆಚ್ಚು ವಿವಿಧ ಸ್ಥಳಗಳಲ್ಲಿ ಶೌಚಾಲಯ ನಿರ್ಮಿಸಲಾಗಿದೆ. 6 ಸಾವಿರ ನೋಂದಾಯಿತ ಪ್ರತಿನಿಧಿಗಳಿಗೆ ಅರ್ಧ ಕೆಜಿ ಬೆಲ್ಲ, ಅರ್ಧ ಕೆಜಿ ಸಕ್ಕರೆ, ಬ್ರೆಶ್, ಪೇಸ್ಟ್, ಸೋಪು, ಬೆಡ್‌ಶೀಟ್ ಒಳಗೊಂಡ ಲೇದರ್ ಬ್ಯಾಗ್‌ನಲ್ಲಿ ವಸತಿ ಮತ್ತು ಸಮ್ಮೇಳನದ ಕಿಟ್ ನೀಡಲಾಗುವುದು ಎಂದರು.

ಮೂರು ವೇದಿಕೆಗಳನ್ನು ನಿರ್ಮಿಸಲಾಗುತ್ತಿದೆ. ಪ್ರಧಾನ ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷರ ಜೊತೆಗಿನ ಸಂವಾದವೂ ಸೇರಿದಂತೆ 11 ಗೋಷ್ಠಿಗಳು, 2 ಸಮಾನಾಂತರ ವೇದಿಕೆಗಳಲ್ಲಿ 20 ಗೋಷ್ಠಿಗಳು ಆಯೋಜನೆಗೊಂಡಿವೆ. ಸಮ್ಮೇಳನದ ಅಂಗವಾಗಿ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಚೆಸ್ಕಾಂ ವತಿಯಿಂದ ನಗರದಲ್ಲಿ ವಿದ್ಯುತ್ ಅಲಂಕಾರ ಮಾಡಲಾಗುತ್ತಿದೆ. ನಾಡುನುಡಿಗೆ ಸೇವೆ ಸಲ್ಲಿಸಿದ 170 ಸಾಧಕರನ್ನು ಸನ್ಮಾನಿಸಲಾಗುತ್ತಿದೆ. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಾರ್ಥ 87 ಪುಸ್ತಕಗಳನ್ನು ಬಿಡುಗಡೆ ಮಾಡಲಾಗುತ್ತದೆ. ಜೊತೆಗೆ "ಬೆಲ್ಲದಾರತಿ" ಹೆಸರಿನ ಸ್ಮರಣ ಸಂಚಿಕೆ ಕೂಡ ಬಿಡುಗಡೆ ಮಾಡಲಾಗುತ್ತದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಾಡೋಜ ಮಹೇಶ್ ಜೋಶಿ ಮಾತನಾಡಿ, ಈ ಸಮ್ಮೇಳನದಲ್ಲಿ ಸಂಪೂರ್ಣ ತಂತ್ರಜ್ಞಾನ ಉಪಯೋಗಿಸಿ ಸಿದ್ಧತೆ ನಡೆಸಿದ ಜಿಲ್ಲಾಡಳಿತಕ್ಕೆ ಅಭಿನಂದನೆ ಸಲ್ಲಿಸಲಾಗುವುದು ಎಂದರು.

ಮೂರು ವೇದಿಕೆಗಳಿಗೆ ಸಮಾನ ಗೌರವ, ಘನತೆ ನೀಡಲಾಗಿದೆ ಮೂರು ವೇದಿಕೆಗೆ ಅಷ್ಟೇ ಮಹತ್ವವಿದೆ. ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾದ ಗೊ.ರು.ಚನ್ನಬಸಪ್ಪ ಅವರೇ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಿರುವ "ಪ್ರಾಚೀನ ಭಾರತದಲ್ಲಿ ರಾಜಕೀಯ ಹಿಂಸಾಚಾರ", ಕನ್ನಡದಿಂದ ಇಟಲಿಯನ್‌ಗೆ ಅನುವಾದಗೊಂಡಿರುವ ಖ್ಯಾತ ಕಾದಂಬರಿಕಾರ್ತಿ ತ್ರಿವೇಣಿ ಅವರ ಶರಪಂಜರ ಕಾದಂಬರಿ ಸಮ್ಮೇಳನದಲ್ಲಿ ಬಿಡುಗಡೆ ಆಗಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ರವಿಕುಮಾರ್ ಗಣಿಗ, ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್, ಅಕ್ಕ ಸಂಸ್ಥಾಪಕ ಅಮರ್‌ನಾಥ್ ಸೇರಿದಂತೆ ಹಲವರು ಇದ್ದರು.

ಸಾಧುಕೋಕಿಲ, ರಾಜೇಶ್‌ಕೃಷ್ಣನ್, ಅರ್ಜುನ್ ಜನ್ಯರಿಂದ ಸಂಗೀತ ಸಂಜೆ

ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ, ಅಂಬೇಡ್ಕರ್ ಭವನ, ಸಮಾನಾಂತರ ವೇದಿಕೆ ಮತ್ತು ಪ್ರಧಾನ ವೇದಿಕೆಗಳಲ್ಲಿ ಸ್ಥಳೀಯ ಕಲಾವಿದರ ಕಾರ್ಯಕ್ರಮಗಳು ನಡೆಯಲಿದೆ. ಪ್ರಧಾನ ವೇದಿಕೆಯಯಾತ್ರೆ "ನುಡಿ ಜಾತ್ರೆಯ ಸ್ವರ ಯಾತ್ರೆ" ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಡಿ.20ರ ಮೊದಲ ದಿನ ಸಾಧುಕೋಕಿಲ ಮತ್ತು ರಾಜೇಶ್ ಕೃಷ್ಣನ್ ತಂಡದವರಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಡಿ.21ರಂದು ಅರ್ಜುನ್ ಜನ್ಯ ಮತ್ತು ತಂಡದಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಡಿ.22ರಂದು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಪೊಲೀಸ್ ಬ್ಯಾಂಡ್ ಇರಲಿದೆ.

ಇಂದು ಮಂಡ್ಯಕ್ಕೆ ಸಮ್ಮೇಳನಾಧ್ಯಕ್ಷರ ಆಗಮನ



ಸಮ್ಮೇಳನಾಧ್ಯಕ್ಷರಾದ ಗೊ.ರು.ಚನ್ನಬಸಪ್ಪ ಅವರು ಗುರುವಾರ ಸಂಜೆ ಮಂಡ್ಯಕ್ಕೆ ಆಗಮಿಸಲಿದ್ದು ಅವರನ್ನು ಬರಮಾಡಿಕೊಳ್ಳಲಾಗುವುದು. ಡಿ.20ರ ಶುಕ್ರವಾರ ಬೆಳಗ್ಗೆ 6ಕ್ಕೆ ಧ್ವಜಾರೋಹಣ ನೆರವೇರಲಿದೆ. 7 ಗಂಟೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಆರಂಭವಾಗಲಿದೆ. ಮೆರವಣಿಗೆಯಲ್ಲಿ ಹಗಲುವೇಷ, ಮಹಿಳಾ ವೀರಗಾಸೆ, ಗೊರವರ ಕುಣಿತ, ಕಂಸಾಳೆ, ಕರಗ, ಸುಗ್ಗಿಕುಣಿತ, ಕೋಲಾಟ ಒಳಗೊಂಡಂತೆ ಪೂರ್ಣಕುಂಭ ಹೊತ್ತ 300 ಮಹಿಳೆಯರು ಹಾಗೂ 50ಕ್ಕೂ ಹೆಚ್ಚು ಕಲಾ ತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ. ಮೆರವಣಿಗೆಗೆ ಮೈಸೂರು ಅರಮನೆ ರಾಜವಂಶಸ್ಥರಾದ ಶ್ರೀಮತಿ ಪ್ರಮೋದಾದೇವಿ ಅವರು ಚಾಲನೆ ನೀಡಲಿದ್ದಾರೆ.

ನುಡಿ ಹಬ್ಬದ ಅಂಗವಾಗಿ ಮಂಡ್ಯ ಜಿಲ್ಲೆಯ ಶಾಲಾ–ಕಾಲೇಜುಗಳಿಗೆ ರಜೆ ಘೋಷಣೆ



ಮಂಡ್ಯ, ಡಿ.18–ಮಂಡ್ಯದಲ್ಲಿ 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಡಿ.20ರಿಂದ 22ರವರೆಗೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಶಾಲಾ ಕಾಲೇಜುಗಳಿಗೆ ಎರಡು ದಿನ ರಜೆ ಘೋಷಣೆ ಮಾಡಲಾಗಿದೆ.

ನಗರದ ಹೊರವಲಯದ ಸ್ಯಾಂಜೋ ಆಸ್ಪತ್ರೆ ಹಿಂಭಾಗ ಮೂರು ದಿನಗಳ ಕಾಲ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದು ಶಾಲಾ–ಕಾಲೇಜು ಮಕ್ಕಳು ಮತ್ತು ಶಿಕ್ಷಕರು ಸಮ್ಮೇಳನದಲ್ಲಿ ಭಾಗವಹಿಸಲು ಅನುಕೂಲ ವಾಗುವಂತಹ ಶುಕ್ರವಾರ ಮತ್ತು ಶನಿವಾರ ರಜೆ ಘೋಷಣೆ ಮಾಡಲಾಗಿದೆ.

ಜಿಲ್ಲೆಯ ಪ್ರಾಥಮಿಕ, ಪ್ರೌಢಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ರಜೆ ಘೋಷಣೆ ಮಾಡಿ ಜಿಲ್ಲಾಧಿಕಾರಿ ಡಾ.ಕುಮಾರ ಆದೇಶ ಹೊರಡಿಸಿದ್ದಾರೆ. ಮಂಡ್ಯ ಜಿಲ್ಲೆಯಾದ್ಯಂತ ಎಲ್ಲಾ ಸರ್ಕಾರಿ ಮತ್ತು ಅನುದಾನ, ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ರಜೆ ಘೋಷಿಸಿದೆ (22/12/2024 ರಂದು ಭಾನುವಾರ ರಜೆ ಇರುತ್ತದೆ).

ಇದರೊಂದಿಗೆ ಸಮ್ಮೇಳನದಲ್ಲಿ ಭಾಗವಹಿಸುವವರಿಗೆ ಉಳಿದುಕೊಳ್ಳಲು ಸ್ಥಳದ ಅವಶ್ಯಕತೆ ಇರುವುದರಿಂದ ಶಾಲಾ ಕಾಲೇಜುಗಳಲ್ಲಿ ವಾಸ್ತವ್ಯಕ್ಕೆ ಸ್ಥಳಾವಕಾಶ ಕಲ್ಪಿಸಲಾಗುವುದು.

ಸಾಹಿತ್ಯ ಸಮ್ಮೇಳನಕ್ಕೆ ಉಚಿತ ಸಾರಿಗೆ ವ್ಯವಸ್ಥೆ

ಮಂಡ್ಯ: ಜಿಲ್ಲೆಯ ನಾನಾ ಭಾಗಗಳಿಂದ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವವರಿಗೆ ಉಚಿತ ಸಾರಿಗೆ ವ್ಯವಸ್ಥೆ ಮಾಡಲಾಗಿದೆ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ಚಲುವರಾಯಸ್ವಾಮಿ ಹೇಳಿದರು.

ಸ್ಯಾಂಜೋ ಆಸ್ಪತ್ರೆ ಹಾಗೂ ಅಮರಾವತಿ ಹೋಟೆಲ್ ಹಿಂಭಾಗದಲ್ಲಿ ನಿರ್ಮಿಸಿರುವ ವೇದಿಕೆಗಳ ನಿರ್ಮಾಣ ಕಾರ್ಯದ ಸಿದ್ಧತೆ ಪರಿಶೀಲನೆ ನಡೆಸಿ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಸಮ್ಮೇಳನಕ್ಕೆ ಆಗಮಿಸುವ ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರಿಗೆ ಸಾಕಷ್ಟು ಸಂಖ್ಯೆಯಲ್ಲಿ ಕೆಎಸ್‌ಆರ್‌ಟಿಸಿ ವತಿಯಿಂದ ಬಸ್ ವ್ಯವಸ್ಥೆ ಮಾಡಲಾಗಿದೆ. ಸಮ್ಮೇಳನದ ಮೂರು ದಿನ 7 ತಾಲೂಕು ಕೇಂದ್ರಗಳಿಂದ ಸಮ್ಮೇಳನ ನಡೆಯುವ ಸ್ಥಳಕ್ಕೆ 15 ವಿಶೇಷ ವಾಹನಗಳನ್ನು ಒಳಗೊಂಡಂತೆ 105 ವಿಶೇಷ ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಮೈಸೂರು ಮತ್ತು ಬೆಂಗಳೂರಿನಿಂದ ಪ್ರತಿ 30 ನಿಮಿಷಕ್ಕೆ ಒಂದರಂತೆ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಗಿದೆ ಎಂದರು.



ಮಂಡ್ಯ ನಗರದ ವಿವಿಧ ಸ್ಥಳಗಳಿಂದ ಸಮ್ಮೇಳನದ ಸ್ಥಳಕ್ಕೆ ಜನರನ್ನು ಕರೆತರಲು 15 ವಾಹನಗಳ ಸಾರಿಗೆ ಸೌಲಭ್ಯವನ್ನು ಉಚಿತವಾಗಿ ಕಲ್ಪಿಸಲಾಗಿದೆ. ಮೊದಲನೆಯ ದಾಗಿ ಮಂಡ್ಯ ಬಸ್ ನಿಲ್ದಾಣದಿಂದ ರೈಲ್ವೆ ನಿಲ್ದಾಣ, ನಂದಾ ಸರ್ಕಲ್, ಫ್ಯಾಕ್ಟರಿ ಸರ್ಕಲ್, ಸ್ವರ್ಣಸಂದ್ರ, ಮಾಂಡವ್ಯ ಕಾಲೇಜ್, ಉಮ್ಮಡಹಳ್ಳಿ ಗೇಟ್, ಹೊಸಬೂದನೂರು ಮಾರ್ಗವಾಗಿ ಸಮ್ಮೇಳನದ ಸ್ಥಳ ತಲುಪಲಿದೆ.

ಎರಡನೆಯದಾಗಿ ಮಂಡ್ಯ ಬಸ್ ನಿಲ್ದಾಣದಿಂದ ಕೋರ್ಟ್ ನಿಲ್ದಾಣ–ವಿಶ್ವವಿದ್ಯಾಲಯ– ಕಲ್ಲಹಳ್ಳಿ–ವಿ.ವಿ.ನಗರ–ಶನೇಶ್ವರ ದೇವಸ್ಥಾನ–ಚಾಮುಂಡೇಶ್ವರಿ ದೇವಸ್ಥಾನ–ಕನ್ನಿಕಾ ಪರಮೇಶ್ವರಿ ದೇವಸ್ಥಾನ–ಕರ್ನಾಟಕ ಬಾರ್ ಸರ್ಕಲ್–ಹೊಸಹಳ್ಳಿ ಸರ್ಕಲ್–ಬೆ.ರಾಮಣ್ಣ ಸರ್ಕಲ್–ಎಂವಿಜಿ ಬೇಕರಿ–ನಂದಾಸರ್ಕಲ್–ಫ್ಯಾಕ್ಟರಿ ಸರ್ಕಲ್–ಸ್ವರ್ಣಸಂದ್ರ–ಮಾಂಡವ್ಯ ಕಾಲೇಜ್–ಉಮ್ಮಡಹಳ್ಳಿಗೇಟ್–ಹೊಸಬೂದನೂರು ಮಾರ್ಗವಾಗಿ ಸಮ್ಮೇಳನದ ಸ್ಥಳ ತಲುಪಲಿದೆ.

ಮೂರನೇಯದಾಗಿ ಹುಣಸೇಮರ–ಕಾಳಿಕಾಂಬ ದೇವಸ್ಥಾನ–ನಂದಾ ಸರ್ಕಲ್–ಫ್ಯಾಕ್ಟರಿ ಸರ್ಕಲ್–ಗುತ್ತಲು ಕಾಲೋನಿ–ಜಯಲಕ್ಷ್ಮಿ ಟಾಕೀಸ್–ಅರಕೇಶ್ವರ ದೇವಸ್ಥಾನ–ಉಮ್ಮಡಹಳ್ಳಿ ಗೇಟ್–ಹೊಸಬೂದನೂರು ಮಾರ್ಗವಾಗಿ ಸಮ್ಮೇಳನದ ಸ್ಥಳ ತಲುಪಲಿದೆ

ನಾಲ್ಕನೇಯದಾಗಿ ಸತ್ವ ಪಾರ್ಕಿಂಗ್ ಸ್ಥಳದಿಂದ ಉಮ್ಮಡಹಳ್ಳಿ ಗೇಟ್–ಹೊಸಬೂದನೂರು ಮಾರ್ಗವಾಗಿ ಸಮ್ಮೇಳನದ ಸ್ಥಳ ತಲುಪಲಿದೆ. ಮತ್ತು ಅದೇ ಮಾರ್ಗದಲ್ಲಿ ವಾಪಸ್ ಆಗಲಿದೆ ಎಂದು ಸಚಿವರು ವಿವರಿಸಿದರು.

ಸಾಹಿತ್ಯ ಸಮ್ಮೇಳನದ ಕೊನೆ ದಿನ 45 ನಿಮಿಷಗಳ ಪೊಲೀಸ್ ಬ್ಯಾಂಡ್

ದಾಸರ ಕೀರ್ತನೆಗಳು, ಭಕ್ತಿ ಗೀತೆಗಳು, ಕನ್ನಡದ ಗೀತೆಗಳು ಸೇರಿದಂತೆ ಹತ್ತಕ್ಕೂ ಹೆಚ್ಚು ಗೀತೆಗಳ ಆಸ್ವಾದನೆ



ಮಂಡ್ಯ: ದಸರಾದಲ್ಲಿ ಮಾತ್ರ ನುಡಿಸುವ ಪೊಲೀಸ್ ಬ್ಯಾಂಡ್ ಇದೇ ಪ್ರಪ್ರಥಮ ಬಾರಿಗೆ ಸಾಹಿತ್ಯ ಸಮ್ಮೇಳನದಲ್ಲಿ ಸಂಗೀತದ ರಸಧಾರೆ ಹರಿಸಲಿದೆ ಎಂದು ಶಾಸಕರು ಹಾಗೂ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಂಸ್ಕೃತಿಕ ಸಮನ್ವಯ ಸಮಿತಿ ಅಧ್ಯಕ್ಷರಾದ ದಿನೇಶ್ ಗೂಳಿಗೌಡ ಹೇಳಿದರು.

ವೇದಿಕೆ ಸಿದ್ಧತೆ ಕುರಿತು ಪರಿಶೀಲನೆ ನಡೆಸಿದ ನಂತರ ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿದ ಅವರು, ಸಾಕಷ್ಟು ಹೊಸತನಗಳಿಗೆ ಸಾಕ್ಷಿಯಾಗುತ್ತಿರುವ ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮೂರನೇ ದಿನ (ಡಿ.22) ಸಂಜೆ ರಾಜ್ಯ ಪೊಲೀಸ್ ಇಲಾಖೆ ವತಿಯಿಂದ ವಾದ್ಯಮೇಳ ನಡೆಯಲಿದೆ ಎಂದರು.

ಡಿ.22ರಂದು ಗೋಷ್ಠಿಗಳು ಮುಕ್ತಾಯದ ನಂತರ ಸಂಜೆ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪೊಲೀಸ್ ಬ್ಯಾಂಡ್‌ನಿಂದ 45 ನಿಮಿಷಗಳ ಕಾಲ ಹತ್ತಕ್ಕೂ ಹೆಚ್ಚು ಹಾಡುಗಳಿಗೆ ವಾದ್ಯ ವೃಂದದವರು ಸಂಗೀತ ಪ್ರಸ್ತುತಿಪಡಿಸಲಿದ್ದಾರೆ ಎಂದು ಹೇಳಿದರು.

ದಾಸರ ಕೀರ್ತನೆಗಳು, ಭಕ್ತಿಗೀತೆಗಳು, ಕನ್ನಡದ ಗೀತೆಗಳು ಸೇರಿದಂತೆ ಹತ್ತಕ್ಕೂ ಹೆಚ್ಚು ಗೀತೆಗಳನ್ನು ನುಡಿಸಲಿದ್ದಾರೆ. ಪೊಲೀಸ್ ಬ್ಯಾಂಡ್ ಕೇವಲ ದಸರಾದಲ್ಲಿ ಮಾತ್ರನುಡಿಸಲಾಗುತ್ತದೆ ದಸರಾಗೆ ಎಲ್ಲರೂ ಹೋಗಿ ಪೊಲೀಸ್ ವಾದ್ಯ ಕೇಳಲು ಸಾಧ್ಯವಾಗುವುದಿಲ್ಲ ಹೀಗಾಗಿ ಸಾಹಿತ್ಯ ಸಮ್ಮೇಳನದಲ್ಲಿ ಪೊಲೀಸ್ ವಾದ್ಯಮೇಳ ನಡೆಸಲಾಗುತ್ತಿದೆ ಎಂದರು.

ನವೀಕರಣಗೊಂಡ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ ಉದ್ಘಾಟನೆ

ಇಂದಿನಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭ



ನವೀಕರಣಗೊಂಡಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರವನ್ನು ಸಚಿವ ಚಲುವರಾಯಸ್ವಾಮಿ ಉದ್ಘಾಟಿಸಿದರು.

ಮಂಡ್ಯ,ಡಿ.18– ಹಲವಾರು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಮಂಡ್ಯ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರವನ್ನು 1.08 ಕೋಟಿ ರೂ. ವೆಚ್ಚದಲ್ಲಿ ನವೀಕರಿಸಲಾಗಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ತಿಳಿಸಿದರು.

ಇಂದು ಮಂಡ್ಯ ನಗರದ ಕಲಾಮಂದಿರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ ನವೀಕರಣ ಉದ್ಘಾಟಿಸಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು.

ಬಹಳ ವರ್ಷಗಳಿಂದ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರವು ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಕ್ತವಾಗಿರದೆ ಮಳೆ ಬಂದಾಗ ಸೋರುತ್ತಿತ್ತು, ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಸೇರಿದಂತೆ ಇನ್ನಿತರೆ ಸಮಸ್ಯೆಗಳಿದ್ದು, ಉಪಯೋಗಕ್ಕೆ ಅಡಚಣೆಯಾಗಿತ್ತು. ಜಿಲ್ಲೆಯಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವ ಈ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಲಾಮಂದಿರದಲ್ಲಿ ನಡೆಸಬೇಕು ಎಂಬ ಉದ್ದೇಶ ಹಾಗೂ ಕಲಾವಿದರ ಒತ್ತಾಯದ ಮೇರೆಗೆ ನವೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ನಾಳೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಶಾಸಕ ಪಿ.ರವಿಕುಮಾರ್ ಮಾತನಾಡಿ, ಬಹಳ ವರ್ಷಗಳಿಂದ ನಗರದ ಕಲಾಮಂದಿರವು ಹದಗೆಟ್ಟ ಸ್ಥಿತಿಯಲ್ಲಿದ್ದು, ದುರಸ್ತಿಯಾಗಬೇಕಿತ್ತು. ಹಲವಾರು ರಂಗಭೂಮಿ ಕಲಾವಿದರ ಜೀವಾಳವಾದ ಕಲೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಹಲವಾರು ನಾಟಕಗಳನ್ನು ಪ್ರದರ್ಶನ ಮಾಡಲು ನಮ್ಮ ಸರ್ಕಾರ ಕಲಾಮಂದಿರವನ್ನು ನವೀಕರಣ ಮಾಡಲಾಗಿದೆ. 2ನೇ ಹಂತದಲ್ಲಿ 25 ಲಕ್ಷ ರೂ. ವೆಚ್ಚದಲ್ಲಿ ಕೂರುವ ಆಸನಗಳಿಗೆ ಸೀಟ್ ಕವರ್ ಹಾಗೂ ಇನ್ನಿತರೆ ವ್ಯವಸ್ಥೆಗೆ ಕಾಮಗಾರಿಯನ್ನು ಶೀಘ್ರದಲ್ಲಿಯೇ ಕೈಗೊಳ್ಳಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಪಂಚಾಯಿತಿಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶೇಖ್ ತನ್ವೀರ್ ಆಸೀಫ್, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಂಚಾಲಕಿ ಡಾ.ಮೀರಾಶಿವ ಲಿಂಗಯ್ಯ, ನಗರಸಭೆ ಅಧ್ಯಕ್ಷ ಎಂ.ವಿ. ಪ್ರಕಾಶ್, ಉಪಾಧ್ಯಕ್ಷ ಅರುಣ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಿ.ವಿ.ನಂದೀಶ್, ಕಸಾಪ ಗೌರವ ಕಾರ್ಯದರ್ಶಿ ಹರ್ಷ ಪಣ್ಣೆದೊಡ್ಡಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪಕ್ಷಾತೀತ, ಜಾತ್ಯಾತೀತವಾಗಿ ಕನ್ನಡಾಭಿಮಾನಿಗಳು ಭಾಗವಹಿಸಿ

ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಸದಸ್ಯ ಡಾ.ಕೆ.ಅನ್ನದಾನಿ ಮನವಿ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಶಾಸಕ ಕೆ.ಅನ್ನದಾನಿ.

ಮಂಡ್ಯ,ಡಿ.18– ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಿಲ್ಲೆಯ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷಾತೀತ, ಜಾತ್ಯಾತೀತವಾಗಿ ಭಾಗವಹಿಸಿ ಜಿಲ್ಲೆಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಕೆಲಸ ಮಾಡಬೇಕು ಎಂದು ಮಾಜಿ ಶಾಸಕ ಹಾಗೂ ಸಮ್ಮೇಳನದ ಸ್ವಾಗತ ಸಮಿತಿಯ ಸದಸ್ಯ ಡಾ.ಕೆ.ಅನ್ನದಾನಿ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನದ ಮೂಲಕ ಕನ್ನಡ ನಾಡಿನ ನೆಲ, ಜಲ, ಭಾಷೆ ಉಳಿವಿಗೆ ಕಂಕಣಬದ್ಧವಾಗಬೇಕಿದೆ. ಜಿಲ್ಲೆಯ ಹೊರಗಿನಿಂದ ಬರುವ ಪ್ರೀತಿಯ ಕನ್ನಡಿಗರಿಗೆ ಜಿಲ್ಲೆಯಾದ್ಯಂತ ಸಹಕಾರ ನೀಡಿ, ಉತ್ತಮ ರೀತಿಯಲ್ಲಿ ನಡೆಸಿಕೊಳ್ಳುವಂತೆ ಕರೆ ನೀಡಿದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 'ರಾಜಕೀಯದಲ್ಲಿ ಸಾಹಿತ್ಯ, ಸಾಹಿತ್ಯದಲ್ಲಿ ರಾಜಕೀಯ' ಗೋಷ್ಠಿಯಲ್ಲಿ ಭಾಗವಹಿಸುವ ಅವಕಾಶ ನೀಡಿದ್ದು, ಸಮ್ಮೇಳನಕ್ಕೆ ಯಾವುದೆ ಚ್ಯುತಿ ಬಾರತದಂತೆ ಎಚ್ಚರ ವಹಿಸಲು ಸಹಕರಿಸಬೇಕು ಎಂದು ಕೋರಿದರು.

ಸರ್ಕಾರದ, ಸಾರ್ವಜನಿಕರ ತೆರಿಗೆ ಹಣ ವಿನಿಯೋಗ ಮಾಡಿ ಸಮ್ಮೇಳನ ನಡೆಸುತ್ತಿರುವುದು ಕನ್ನಡ ಭಾಷೆಯನ್ನು, ಕನ್ನಡ ಸಂಸ್ಕೃತಿಯನ್ನು ಉಳಿಸಿ ಮುಂದಿನ ಪೀಳಿಗೆಗೆ ನಡೆಸಿಕೊಂಡು ಹೋಗಲು ಎಂದ ಅವರು, ಜಿಲ್ಲೆಯ ಜನರು ಲಕ್ಷ, ಲಕ್ಷ ಸಂಖ್ಯೆಯಲ್ಲಿ ಸಮ್ಮೇಳನಕ್ಕೆ ಆಗಮಿಸಿ, ಪುಸ್ತಕಗಳನ್ನು ಕೊಂಡುಕೊಳ್ಳಬೇಕು ಎಂದು ವಿನಂತಿಸಿಕೊಂಡರು.

ಸಾಹಿತ್ಯ ಸಮ್ಮೇಳನದಲ್ಲಿ ಬಾಡೂಟ ವಿತರಣೆಗೆ ನನ್ನ ವಿರೋಧವಿದೆ. ಮಾಂಸಾಹಾರ ವಿತರಣೆಯಾದಲ್ಲಿ ಬೇರೆಯ ವಿಷಯಗಳಿಗೆ ಪ್ರಚೋದನೆ ನೀಡುವ ಅವಕಾಶವಿರುವ ಆತಂಕವಿದೆ ನಾನು ಹುಟ್ಟಿನಿಂದಲೇ ಮಾಂಸಹಾರಿಯಾಗಿದ್ದೇನೆ. ಆದರೆ ಜಿಲ್ಲೆಯ ಸಂಸ್ಕೃತಿಯನ್ನು ದೇಶ, ವಿದೇಶಕ್ಕೆ ಪರಿಚಯಿಸುವ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯಲು ಅವಕಾಶ ನೀಡಬಾರದೆಂಬ ಉದ್ದೇಶದಿಂದ ಸಮ್ಮೇಳನದಲ್ಲಿ ಮಾಂಸಾಹಾರ ವಿತರಣೆ ಒಮ್ಮತವಿಲ್ಲ ಎಂದು ಪ್ರಶ್ನೆಗೆ ಉತ್ತರ ನೀಡಿದರು.

2018ರಲ್ಲಿ ನಾನು 24 ಲಕ್ಷ ರೂ ವೆಚ್ಚದಲ್ಲಿ 755 ಕೆ.ಜಿ ತೂಕದ 7 ಅಡಿ ಎತ್ತರದ ಪಂಚಲೋಹದ ಅಂಬೇಡ್ಕರ್ ಪುತ್ಥಳಿಯನ್ನು ನಿರ್ಮಾಣ ಮಾಡಿಸಿ ಪುರಸಭೆಯ ಸ್ಥಳದಲ್ಲಿ ಸ್ಥಾಪಿಸಲಾಗಿದ್ದು, ಅರ್ಧ ಎಕರೆ ಜಾಗದಲ್ಲಿ ಪುತ್ಥಳಿಯ ಸುತ್ತ ಹಲವು ಅಭಿವೃದ್ಧಿ ಕಾರ್ಯಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಅಂಬೇಡ್ಕರ್ ಪುತ್ಥಳಿ ಸ್ಥಳಾಂತರಕ್ಕೆ ವಿರೋಧ

ಅಂಬೇಡ್ಕರ್ ಪುತ್ಥಳಿಯನ್ನು ರಸ್ತೆಯ ವೃತ್ತವೊಂದಕ್ಕೆ ಸ್ಥಳಾಂತರಿಸಲು ಕೆಲವರು ಅರ್ಜಿ ಸಲ್ಲಿಸಿದ್ದು, ಇದಕ್ಕೆ ವಿರೋಧವಿದೆ. ತಮಗೆ ಇನ್ನು ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಮಾಡುವ ಉದ್ದೇಶವಿದ್ದರೆ, ಪ್ರತಿ ಹೋಬಳಿಯಲ್ಲೂ ಪುತ್ಥಳಿ ನಿರ್ಮಿಸಿ ಸ್ಥಾಪನೆ ಮಾಡಲಿ, ಅದನ್ನು ಬಿಟ್ಟು ಇರುವ ಪುತ್ಥಳಿಯನ್ನು ಸ್ಥಳಾಂತರಿಸುವ ಆಲೋಚನೆ ಕೈಬಿಡಬೇಕು ಎಂದು ಒತ್ತಾಯಿಸಿದರು.

ದ್ವೇಷದ ರಾಜಕಾರಣಕ್ಕೆ ಮುಂದಾಗಿ ಅಂಬೇಡ್ಕರ್ ಪುತ್ಥಳಿಯನ್ನು ಸ್ಥಳಾಂತರಿಸಿದ್ದೇ ಆದರೆ ಅದು ಇತರೇ ಸಂಘರ್ಷಗಳಿಗೆ ಹಾದಿ ಮಾಡಿಕೊಟ್ಟಂತಾಗುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾಡಳಿತಕ್ಕೆ ಮನವರಿಕೆ ಮಾಡಿದರು.

ಪುರಸಭೆ ಜಾಗದಲ್ಲಿ ಪುತ್ಥಳಿ ಸ್ಥಾಪನೆ ಮಾಡಲಾಗಿದ್ದು, ಇದನ್ನು ಸ್ಥಳಾಂತರ ಮಾಡಲು ಮುಂದಾಗಿದ್ದೀರಿ, ನೀವು ಅಧಿಕಾರದಲ್ಲಿ ಇದ್ದಾಗ ಪುತ್ಥಳಿ ನಿರ್ಮಿಸಿ ಸ್ಥಾಪಿಸಲು ಯೋಗ್ಯತೆ ಇರಲಿಲ್ಲ, ಅದಕ್ಕೆ ನೀವು ಸ್ಥಳಾಂತರಕ್ಕೆ ಮುಂದಾಗಿದ್ದೀರಿ. ಅದನ್ನು ಬಿಟ್ಟು, ಸದರಿ ಸ್ಥಳದಲ್ಲಿ ಇತರೇ ಅಭಿವೃದ್ಧಿ ಕೆಲಸ ಮಾಡಲು ಮುಂದಾಗಲಿ ಎಂದು ತಾಕೀತು ಮಾಡಿದರು. ಗೋಷ್ಠಿಯಲ್ಲಿ ಯುವ ಜನತಾದಳ ಜಿಲ್ಲಾಧ್ಯಕ್ಷ ರವಿ, ಎಸ್ಸಿ ವಿಭಾಗದ ಜಿಲ್ಲಾಧ್ಯಕ್ಷ ಸಾತನೂರು ಜಯರಾಂ, ಮುಖಂಡರಾದ ಕಾಂತರಾಜು, ಶ್ರೀಧರ್, ಜೆಡಿಎಸ್ ಉಪಾಧ್ಯಕ್ಷ ಸಿದ್ದಾಚಾರ್, ಸಿದ್ದರಾಜು ಇದ್ದರು.

ಜಮೀನಿನಲ್ಲಿ 9 ಅಡಿ ಉದ್ದದ ಹೆಬ್ಬಾವು ಪ್ರತ್ಯಕ್ಷ



ಭಾರತೀನಗರ, ಡಿ.18– ಸಮೀಪದ ಕುರಿಕೆಂಪನದೊಡ್ಡಿ ಗ್ರಾಮದ ಶಿವಲಿಂಗೇಗೌಡ ಎಂಬುವವರ ಜಮೀನಿನಲ್ಲಿ 9 ಅಡಿ ಉದ್ದದ ಹೆಬ್ಬಾವು ಪತ್ತೆಯಾಗಿದ್ದು ಇದನ್ನು ಹಿಡಿದು ಅರಣ್ಯ ಇಲಾಖೆಗೆ ಒಪ್ಪಿಸಲಾಗಿದೆ.

ಕುರಿಕೆಂಪನದೊಡ್ಡಿ ಗ್ರಾಮದ ಹೊರವಲಯದಲ್ಲಿರುವ ಶಿವಲಿಂಗೇಗೌಡ ಎಂಬುವವರ ಜಮೀನಿನಲ್ಲಿ ಕಬ್ಬು ಕಟಾವು ಮಾಡುವ ವೇಳೆ ಹೆಬ್ಬಾವು ಪ್ರತ್ಯಕ್ಷಗೊಂಡಿದೆ. ತಕ್ಷಣವೇ ಮೆಳ್ಳಹಳ್ಳಿ ಗ್ರಾಮದ ಸ್ನೇಕ್ ಶಿವಕುಮಾರ್ ಅವರಿಗೆ ವಿಷಯ ಮುಟ್ಟಿಸಿದ್ದಾರೆ. ಶಿವಕುಮಾರ್ ಹೆಬ್ಬಾವನ್ನು ಹಿಡಿದು ಮದ್ದೂರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ.

ಈ ಹೆಬ್ಬಾವು ಸುಮಾರು 9 ಅಡಿ ಉದ್ದವಿದ್ದು, 11 ಕೆ.ಜಿ ತೂಕವಿದೆ. ಇದನ್ನು ನೋಡಲು ಅಕ್ಕಪಕ್ಕದ ಜಮೀನಿನವರು ಕುತೂಹಲದಿಂದ ತೆರಳಿ ವೀಕ್ಷಿಸಿದರು.

ಶಿಕ್ಷಣವನ್ನು ಸವಾಲಿನಂತೆ ಸ್ವೀಕರಿಸಿ ವಿದ್ಯಾಭ್ಯಾಸ ಮಾಡಿ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ವಿದ್ಯಾರ್ಥಿಗಳಿಗೆ ಸಲಹೆ



ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ದಶಮಾನೋತ್ಸವ, ಶಾಲಾ ವಾರ್ಷಿಕೋತ್ಸವ ಸಮಾರಂಭದ ಎರಡನೇ ದಿನದ ಕಾರ್ಯಕ್ರಮವನ್ನು ನಟಿ ಅನುಪ್ರಭಾಕರ್ ಉದ್ಘಾಟಿಸಿದರು. ಸಂಸ್ಥೆ ಅಧ್ಯಕ್ಷ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಇದ್ದಾರೆ.

ಚಿನಕುರಳಿ,ಡಿ.18– ವೈಜ್ಞಾನಿಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಶಿಕ್ಷಣವನ್ನು ಸವಾಲಿನಂತೆ ಸ್ವೀಕರಿಸಿ ವಿದ್ಯಾಭ್ಯಾಸ ನಡೆಸಬೇಕು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೇಳಿದರು.

ಚಿನಕುರಳಿ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ನಡೆದ ದಶಮಾನೋತ್ಸವ ಹಾಗೂ ಶಾಲಾ ವಾರ್ಷಿಕೋತ್ಸವದ ಎರಡನೇ ದಿನದ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ಜನ್ಮಕೊಟ್ಟ ತಂದೆ–ತಾಯಿ, ವಿದ್ಯೆ ಕೊಟ್ಟ ಗುರುಗಳಿಗೆ ಗೌರವ ಕೊಡುವುದನ್ನು ಕಲಿಯಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗಳು ಶಿಕ್ಷಣವನ್ನು ಸವಾಲ್ ಆಗಿ ಸ್ವೀಕರಿಸಬೇಕು, ಭಕ್ತಿಯಿಂದ ಚನ್ನಾಗಿ ಓದುವ ಮೂಲಕ ಉನ್ನತ ಸ್ಥಾನಕ್ಕೆ ಏರಬೇಕು ಎಂದು ತಿಳಿಸಿದರು.

ನಗರದ ಪ್ರದೇಶದ ಮಕ್ಕಳಿಗೆ ಸರಿಸಮಾನವಾದ ಶಿಕ್ಷಣ ಕೊಟ್ಟು ನಗರ ಪ್ರದೇಶದ ಮಕ್ಕಳ ಸರಿ ಸಮಾನವಾಗಿ ನಿಲ್ಲಿಸಬೇಕು ಎಂಬ ಉದ್ದೇಶದಿಂದ ಚಿನಕುರಳಿ ಗ್ರಾಮದಲ್ಲಿ ಎಸ್‌ಟಿಜಿ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದ್ದೇನೆ. ಸಂಸ್ಥೆಯನ್ನು ಆರಂಭಿಸಿ 10 ವರ್ಷವನ್ನು ಯಶಸ್ವಿಯಾಗಿ ಪೂರೈಸಿ 11ನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ಸಂಸ್ಥೆ ಬೆಳವಣಿಗೆಯಲ್ಲಿ ಶಾಲೆ ಶಿಕ್ಷಕರು, ಸಿಬ್ಬಂದಿಗಳು ಹಾಗೂ ಪೋಷಕರು ಉತ್ತಮವಾದ ಸಹಕಾರ ನೀಡಿದ್ದಾರೆ. ಸಂಸ್ಥೆಯಲ್ಲಿ ಮಕ್ಕಳಿಗೆ ಬೇಕಿರುವ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದೇವೆ. ವಿದ್ಯಾರ್ಥಿಗಳು ಎಲ್ಲವನ್ನು ಸದ್ಬಳಕೆ ಮಾಡಿಕೊಂಡು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಬೇಕು. ಜತೆಗೆ ಇದೇ ರೀತಿ ಮುಂದೆಯೂ ಎಲ್ಲಾ ಪೋಷಕರು ಸಂಸ್ಥೆಯ ಬೆಳವಣಿಗೆಗೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ಚಿತ್ರನಟಿ ಅನು ಪ್ರಭಾಕರ್ ಮಾತನಾಡಿ, ಓದುವಂತಹ ದಿನಗಳಲ್ಲಿ ವಿದ್ಯಾರ್ಥಿಗಳು ಕಷ್ಟಪಟ್ಟು ಚನ್ನಾಗಿ ಓದುವ ಮೂಲಕ ಶೈಕ್ಷಣಿಕವಾಗಿ ಬೆಳವಣಿಗೆ ಕಾಣಬೇಕು. ಓದುವಂತಹ ದಿನಗಳಲ್ಲಿ ಓದುವುದು ಕಷ್ಟ ಎಂದು ವಿದ್ಯಾರ್ಥಿಗಳಿಗೆ ಅನಿಸಬಹುದು. ಆದರೆ, ಚನ್ನಾಗಿ ವಿದ್ಯಾಭ್ಯಾಸ ಮಾಡಿದ ಬಳಿಕ ಅದರ ಮಹತ್ವ ತಿಳಿಯಲಿದೆ ಎಂದರು.

ನಾನು ಚಿತ್ರರಂಗಕ್ಕೆ ಬಂದು 25 ವರ್ಷ ಕಳೆದಿವೆ, ನಾನು 18 ವರ್ಷದ ವಯಸ್ಸಿನಲ್ಲಿ ನಟಿಯಾಗಿ ಚಿತ್ರರಂಗಕ್ಕೆ ಬಂದೆ ಚಿತ್ರರಂಗದಲ್ಲಿ ನನಗೆ ಸಾಕಷ್ಟು ಹೆಸರು ಬಂತು, ನನ್ನ ಅಭಿನಯಕ್ಕೆ ನನಗೆ ಎರಡು ರಾಷ್ಟ್ರ ಪ್ರಶಸ್ತಿಗಳು ಬಂದವು. ಆದರೆ, ನಟನೆ ನನ್ನ ವಿದ್ಯಾಭ್ಯಾಸಕ್ಕೆ ತೊಂದರೆ ಆಯಿತು. ನಂತರ ನಾನು ವಿದ್ಯಾಭ್ಯಾಸ ಮಾಡಿದ್ದೇನೆ. ತಂದೆ ತಾಯಿ, ಗುರುಹಿರಿಯರಿಗೆ ಗೌರವ ಕೊಡುವ ಪ್ರತಿಯೊಬ್ಬರು ನಟ–ನಟಿ ಯರೇ ಎನ್ನುವುದು ನನ್ನ ಅಭಿಪ್ರಾಯ ವಾಗಿದೆ ಎಂದರು.

ನಿವೃತ್ತ ಕಾರ್ಯಪಾಲ ಅಭಿಯಂತರ ಖಿಜರ್ ಅಹಮದ್ ಮಾತನಾಡಿ, ಎಸ್‌ಟಿಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಮಾಜಿ ಸಚಿವರಾಗಿರುವ ಸಿ.ಎಸ್.ಪುಟ್ಟರಾಜು ಅವರು 2018ರಲ್ಲಿ ಶಾಸಕರಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಗೆ 180 ಕೋಟಿ ಅನುದಾನವನ್ನು ತಂದು ಕ್ಷೇತ್ರವನ್ನು ಅಭಿವೃದ್ಧಿಪಡಿಸಿದರು. ಪಟ್ಟಣದ ಬಹುತೇಕ ರಸ್ತೆಗಳನ್ನು ಅಭಿವೃದ್ಧಿ ಪಡಿಸಿದ್ದಾರೆ ಎಂದು ಬಣ್ಣಿಸಿದರು.

ಚೈತ್ರ ರಾಮಲಿಂಗೇಗೌಡ ನಿಧನ



ಮೈಸೂರು, ಡಿ.18– ಮೈಸೂರಿನ ಕುವೆಂಪುನಗರದ ಅನಿಕೇತನ ರಸ್ತೆಯ ನಿವಾಸಿ ಚೈತ್ರ ರಾಮಲಿಂಗೇಗೌಡ(38) ಇಂದು ನಿಧನರಾದರು. ಇವರು ಅವಿವಾಹಿತರಾಗಿದ್ದು, ಇಂಗ್ಲಿಷ್ ಅಂಕಣಕಾರಣರೂ ಆಗಿದ್ದರು. ಜೊತೆಗೆ ಸಾಫ್ಟ್‌ವೇರ್ ಉದ್ಯೋಗಿ. ಮೃತರು ತಂದೆ, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಅಪರ ಆಯುಕ್ತ ರಾಮಲಿಂಗೇಗೌಡ, ತಾಯಿ, ಸಹೋದರ ಸೇರಿದಂತೆ ಅಪಾರ ಬಂಧು ವರ್ಗ, ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ. ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿಕೆಗೆ ಸಿಎಂ ಸಿದ್ದರಾಮಯ್ಯ ಆಕ್ರೋಶ

ಶ್ರೀಯುತರ ಸಂವಿಧಾನ ಇಲ್ಲದಿದ್ದರೆ ನಿಮ್ಮೂರಲ್ಲಿ ಗುಜರಿ ವ್ಯಾಪಾರ ಮಾಡಿಕೊಂಡಿರಬೇಕಿತ್ತು...


ಸಿದ್ದರಾಮಯ್ಯ

ಬೆಂಗಳೂರು, ಡಿ.18(ಕೆಎಂಶಿ)– ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಕೊಟ್ಟಿರುವ ಸಂವಿಧಾನದಿಂದ ಕೇಂದ್ರ ಗೃಹ ಸಚಿವರಾಗಿರುವ ನೀವು ಬದುಕು ಕೊಟ್ಟ ಮಹಾತ್ಮನನ್ನೇ ತುಚ್ಛೀಕರಿಸುವ ಕೆಲಸ ಮಾಡಿದ್ದೀರಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಟೀಕಿಸಿದ್ದಾರೆ.

ಸಂಸತ್‌ನಲ್ಲಿ ಅಮಿತ್ ಷಾ ಅವರು ಡಾ.ಅಂಬೇಡ್ಕರ್ ಬಗ್ಗೆ ನೀಡಿದ ಅಭಿಪ್ರಾಯ ಕುರಿತು ಬಹಿರಂಗ ಪತ್ರ ಬರೆದಿರುವ ಮುಖ್ಯಮಂತ್ರಿ, ಸಂವಿಧಾನ ಇಲ್ಲದಿದ್ದರೆ, ನೀವು ನಿಮ್ಮೂರಿನಲ್ಲಿ ಗುಜರಿ ವ್ಯಾಪಾರ ಮಾಡಿಕೊಂಡು ಇರಬೇಕಾಗುತ್ತಿತ್ತು ಎಂದು ವ್ಯಂಗ್ಯವಾಡಿದ್ದಾರೆ.

ನಿಮ್ಮ ಸಹದ್ಯೋಗಿ, ದೇಶದ ಪ್ರಧಾನಿ ನರೇಂದ್ರ ಮೋದಿ ಸಹಾ ರೈಲ್ವೇ ಸ್ಟೇಷನ್‌ನಲ್ಲಿ ಚಹಾ ಮಾರಿಕೊಂಡೇ ಇರಬೇಕಾಗಿತ್ತು, ಅವರಿಗೆ ಪ್ರಧಾನಿಯಾಗುವ ಅವಕಾಶವೇ ಸಿಗುತ್ತಿರಲಿಲ್ಲ, ಇದನ್ನು ಪ್ರಧಾನಿ ಒಪ್ಪಿಕೊಳ್ಳಬಹುದು ಎಂಬುದಾಗಿ ನಂಬಿದ್ದೇನೆ, ನೀವೂ ಒಪ್ಪಿಕೊಂಡು ಬಿಡಿ.

ಸಂಸತ್‌ನಲ್ಲಿ ನೀವು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಆಡಿದ ಮಾತುಗಳಿಂದ ಇಡೀ ದೇಶಕ್ಕೆ ನಿಮ್ಮ ಅಂತರಂಗ ಏನೆಂಬುದು ಅರಿವಾಗಿದೆ, ಡಾ.ಬಾಬಾ ಸಾಹೇಬ್ ಕೊಟ್ಟ ಸಂವಿಧಾನದಡಿ ಕಾರ್ಯನಿರ್ವಹಿಸುತ್ತಿರುವ ನೀವು ಸಂಸತ್‌ನಲ್ಲಿಯೇ ಅವರ ಸ್ಮರಣೆ ವ್ಯಸನ ಎಂಬ ನಿಮ್ಮ ಮಾತಿನಿಂದ ನಮಗೆ ಆಶ್ಚರ್ಯವಾಗಿಲ್ಲ. ನಮಗೆ ಇದು ಗೊತ್ತಿತ್ತು, ತುಚ್ಛೀಕರಿಸುವ ನಿಮ್ಮ ಮಾತಿಗೆ ಶಹಭಾಸ್ ಎನ್ನಲೇಬೇಕು.

ಡಾ. ಬಾಬಾಸಾಹೇಬರ ಬಗ್ಗೆ ತಮಗೆ ಅಪಾರ ಅಭಿಮಾನ, ಗೌರವ ಇದೆ. ನನ್ನ ಮಾತುಗಳನ್ನು ತಿರುಚಲಾಗಿದೆ ಎಂದೆಲ್ಲ ಸ್ಪಷ್ಟೀಕರಣ ಕೊಟ್ಟು ಆತ್ಮವಂಚನೆ ಮಾಡಿಕೊಳ್ಳಬೇಡಿ, ಅದನ್ನು ಸಮರ್ಥಿಸಿಕೊಂಡು ದೇಶವನ್ನು ಎದುರಿಸಿ.

ಡಾ. ಅಂಬೇಡ್ಕರ್ ನಮಗೆ ವ್ಯಸನ ಅಲ್ಲ, ನಿತ್ಯ ಸ್ಮರಣೆ, ನಮ್ಮ ಉಸಿರು ಇರುವವರೆಗೆ, ಸೂರ್ಯ, ಚಂದ್ರ ಇರುವವರೆಗೆ ಅವರ ಸ್ಮರಣೆ ಇರಲಿದೆ.

ನೀವು ತುಚ್ಛೀಕರಿಸಿದಷ್ಟೂ ಪುಟಿದು ಮೇಲೆದ್ದು ಬಂದು ನಮ್ಮ ಮುನ್ನಡೆಯ ಹಾದಿಗೆ ಡಾ.ಅಂಬೇಡ್ಕರ್ ಬೆಳಕಾಗುತ್ತಾರೆ. ನಿಮ್ಮ ದುರಹಂಕಾರದ ಮಾತಿಗೆ ನಿಮ್ಮ ಬೆನ್ನ ಹಿಂದಿರುವ ಚೇಲಾಗಳು ಮೇಜುಕುಟ್ಟಿ ಸಂಭ್ರಮಿಸಿರಬಹುದು. ಆದರೆ, ಸಮಾನತೆ ಮತ್ತು ಘನತೆಯ ಬದುಕು ಪಡೆದಿರುವ ದೇಶದ ಕೋಟ್ಯಾಂತರ ಜನ ನಿಮಗೆ ಛೀಮಾರಿ ಹಾಕುತ್ತಿದ್ದಾರೆ ಎನ್ನುವುದು ತಿಳಿದಿರಲಿ.

ಅಂಬೇಡ್ಕರ್ ಹುಟ್ಟದೇ ಇದ್ದಿದ್ದರೆ ನಾನು ಸಿಎಂ ಆಗ್ತಿರಲಿಲ್ಲ: ಅಂಬೇಡ್ಕರ್ ಭೂಮಿಯಲ್ಲಿ ಹುಟ್ಟದೆ ಇರುತ್ತಿದ್ದರೆ, ನನಗೆ ಮುಖ್ಯಮಂತ್ರಿಯಾಗುವ ಅವಕಾಶವೇ ಬರುತ್ತಿರಲಿಲ್ಲ, ನಾನು ಊರಲ್ಲಿ ದನ, ಕುರಿ ಮೇಯಿಸಿಕೊಂಡು ಇರಬೇಕಾಗುತ್ತಿತ್ತು, ನಮ್ಮ ಪಕ್ಷದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ರಾಜಕೀಯ ಕ್ಷೇತ್ರದಲ್ಲಿ ಉನ್ನತ ಸ್ಥಾನಗಳನ್ನು ಪಡೆದು ಎಐಸಿಸಿಯ ಅಧ್ಯಕ್ಷ ಸ್ಥಾನ ಅಲಂಕರಿಸುತ್ತಿರಲಿಲ್ಲ, ಯಾವುದೋ ಕಾರ್ಖಾನೆಯಲ್ಲಿ ಕಾರ್ಮಿಕರಾಗಿರುತ್ತಿದ್ದರು.

ನೀವು ಹೇಳುವ ವ್ಯಸನ ನಮ್ಮ ಪಾಲಿನ ಡಾ.ಅಂಬೇಡ್ಕರ್ ಸ್ಮರಣೆ, ನಮ್ಮನ್ನೆಲ್ಲ ಇಲ್ಲಿಗೆ ತಂದು ನಿಲ್ಲಿಸಿ ನಮಗೆ ಸ್ಥಾನಮಾನ, ಗೌರವ ಮತ್ತು ಜನರ ಸೇವೆ ಮಾಡುವ ಅವಕಾಶ ಸಂವಿಧಾನ ಕೊಟ್ಟಿದೆ ಎನ್ನುವುದನ್ನು ನಾವು ಮರೆತಿಲ್ಲ.

ಇತಿಹಾಸ ಓದಿರುವ ನಮ್ಮಂತಹವರಿಗೆ ನಿಮ್ಮೊಳಗಿನ ಡಾ.ಅಂಬೇಡ್ಕರ್ ದ್ವೇಷ ಹೊಸದಲ್ಲ, ಅವರು ಬದುಕಿರುವಾಗಲೇ ದೇಶದ ಸಂವಿಧಾನವನ್ನು ನಿಮ್ಮ ಮಾತೃ ಸಂಸ್ಥೆ ಆರ್‌ಎಸ್‌ಎಸ್ ಏಕೆ ತಿರಸ್ಕರಿಸಿತು.

ಆರ್‌ಎಸ್‌ಎಸ್ ನಾಯಕರಾದ ಹೆಡಗೆವಾರ್, ಗೋಲ್ವಾಲ್ಕರ್ ಮತ್ತು ಸಾವರ್ಕರ್ ಸಂವಿಧಾನ ವಿರೋಧಿಸಿ ನೀಡಿರುವ ಹೇಳಿಕೆಗಳು ಇತಿಹಾಸದ ಪುಟಗಳಲ್ಲಿವೆ, ನಿಮ್ಮ ಸುಳ್ಳು ಮತ್ತು ಆತ್ಮವಂಚನೆ ನಡವಳಿಕೆಗಳಿಂದ ಮರೆಮಾಚಬಹುದು, ಆದರೆ ಅಳಿಸಿಹಾಕಲು ಆಗುವುದಿಲ್ಲ ಎನ್ನುವುದು ನೆನಪಿರಲಿ.

ಮೊದಲಿಗೆ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಭಾರತೀಯ ಜನತಾ ಪಕ್ಷದ ಅಂತರಂಗದ ಅಭಿಪ್ರಾಯವನ್ನು ಬಹಿರಂಗವಾಗಿ ಧೈರ್ಯದಿಂದ ದೇಶದ ಮುಂದೆ ತೆರೆದಿಟ್ಟಿದ್ದಕ್ಕಾಗಿ, ಕೊನೆಗೂ ನಿಮ್ಮ ಜೀವಮಾನದಲ್ಲಿ ಒಂದು ಸತ್ಯವನ್ನಾದರೂ ಹೇಳಿದ್ದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ.

ನಿಮ್ಮ ಪಕ್ಷ ಮತ್ತು ಅದರ ಹಿಂದಿರುವ ಪರಿವಾರಕ್ಕೆ ಇತ್ತೀಚೆಗೆ ಮೋದಿ, ಮೋದಿ, ಮೋದಿ ಎಂದು ಹೇಳುವುದು ಒಂದು ವ್ಯಸನವಾಗಿದೆ. ಮೋದಿ ಬದಲಿಗೆ ದೇವರ ನಾಮಸ್ಮರಣೆ ಮಾಡಿದ್ದರೆ ಏಳು ಜನ್ಮದಲ್ಲಿ ಮಾತ್ರ ಅಲ್ಲ, ನೂರು ಜನ್ಮದಲ್ಲಿಯೂ ನಿಮಗೆ ಸ್ವರ್ಗವೇ ಸಿಗುತ್ತಿತ್ತು, ಕೇವಲ ಅಧಿಕಾರದಲ್ಲಿ ಉಳಿಯಲು ಮಾಡಿರುವ ಪಾಪಕೃತ್ಯಗಳಿಗೆ ಕ್ಷಮೆಯೂ ಸಿಗುತ್ತಿತ್ತು ಎಂದು ಕಟುವಾಗಿ ಟೀಕಿಸಿದ್ದಾರೆ.

ಅಂಬೇಡ್ಕರ್ ವಿರೋಧಿ ಪಕ್ಷವಾದ ಕಾಂಗ್ರೆಸ್ ಸುಳ್ಳುಗಳನ್ನು ಹರಡುತ್ತಿದೆ

ವಿವಾದದ ಬಳಿಕ ಅಮಿತ್ ಶಾ ಸುದ್ದಿಗೋಷ್ಠಿ


ಅಮಿತ್ ಶಾ

ನವದೆಹಲಿ, ಡಿ.18– ರಾಜ್ಯಸಭೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಬಗ್ಗೆ ಮಾತನಾಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಅಂಬೇಡ್ಕರ್ ಜಪ ಪಠಿಸುವುದು ಫ್ಯಾಶನ್ ಆಗಿಬಿಟ್ಟಿದೆ. ಈ ರೀತಿ 100 ಬಾರಿ ಅಂಬೇಡ್ಕರ್ ಹೆಸರು ಹೇಳುವ ಬದಲು ದೇವರ ನಾಮವನ್ನಾದರೂ ಪಠಿಸಿದ್ದರೆ ಏಳೇಳು ಜನ್ಮದಲ್ಲೂ ಸ್ವರ್ಗಕ್ಕೆ ಹೋಗುತ್ತಿದ್ದಿರಿ ಎಂದು ವ್ಯಂಗ್ಯವಾಡಿದ್ದರು. ಇದಕ್ಕೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿ, ಅಂಬೇಡ್ಕರ್ ಕುರಿತು ಅವಮಾನಕಾರಿಯಾಗಿ ಮಾತನಾಡಿದ ಅಮಿತ್ ಶಾ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿರುವ ಅಮಿತ್ ಶಾ, ಸಂವಿಧಾನ ವಿರೋಧ ಹಾಗೂ ಅಂಬೇಡ್ಕರ್ ವಿರೋಧಿಯಾದ ಕಾಂಗ್ರೆಸ್ ಸುಳ್ಳುಗಳನ್ನು ಹರಡುತ್ತಿದೆ. ನಾನು ಅಂಬೇಡ್ಕರ್ ವಿರುದ್ಧ ಯಾವುದೇ ಹೇಳಿಕೆ ನೀಡಿಲ್ಲ. ನನ್ನ ಮಾತನ್ನು ತಿರುಚಲಾಗಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ದೆಹಲಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಇಂದು ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ವಿರೋಧ ಪಕ್ಷವು ಸಂಸತ್ತಿನಲ್ಲಿ ನಾನು ಮಾಡಿದ ಟೀಕೆಗಳನ್ನು ತಿರುಚಿದೆ ಮತ್ತು ಅಂಬೇಡ್ಕರ್ ವಿರೋಧಿ ನಿಲುವನ್ನು ಅನುಸರಿಸುತ್ತಿದೆ ಎಂದು ಆರೋಪಿಸಿದರು.

ರಾಜ್ಯಸಭೆಯಲ್ಲಿ ಸಂವಿಧಾನದ ಚರ್ಚೆಯ ವೇಳೆ ಮಾಡಿದ ಟೀಕೆಗಳ ಕುರಿತು ಪ್ರತಿಕ್ರಿಯಿಸಿದ ಅಮಿತ್ ಶಾ, ನನ್ನ ಹೇಳಿಕೆಗಳನ್ನು ತಪ್ಪಾಗಿ ನಿರೂಪಿಸಲಾಗಿದೆ. ಕಾಂಗ್ರೆಸ್ ಸುಳ್ಳು ಸುದ್ದಿಗಳನ್ನು ಹರಡುತ್ತದೆ, ನಾನು ಅಂಬೇಡ್ಕರ್ ವಿರುದ್ಧ ಮಾತನಾಡಿಲ್ಲ. ಸಂಸತ್ತಿನಲ್ಲಿ ಮಾಡಿದ ಕಾಮೆಂಟ್‌ಗಳನ್ನು ಕಾಂಗ್ರೆಸ್ ತಿರುಚಿದ ರೀತಿ ಅತ್ಯಂತ ಖಂಡನೀಯವಾಗಿದೆ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಅಂಬೇಡ್ಕರ್ ಮತ್ತು ಸಂವಿಧಾನ ವಿರೋಧಿ ಪಕ್ಷವಾಗಿದೆ. ಬಿಆರ್ ಅಂಬೇಡ್ಕರ್ ಅವರಿಗೆ ಭಾರತ ರತ್ನ ನೀಡದಿರಲು ಕಾಂಗ್ರೆಸ್ ಪ್ರಯತ್ನಿಸಿದೆ. ನಿನ್ನೆಯಿಂದ ಕಾಂಗ್ರೆಸ್ ಸತ್ಯವನ್ನು ತಿರುಚಿ ಪ್ರಸ್ತುತಪಡಿಸುತ್ತಿದೆ. ಕಾಂಗ್ರೆಸ್ ಬಿ.ಆರ್ ಅಂಬೇಡ್ಕರ್ ವಿರೋಧಿಯಾಗಿದ್ದು, ಮೀಸಲಾತಿ ಮತ್ತು ಸಂವಿಧಾನದ ವಿರುದ್ಧವಾಗಿದೆ ಎಂದರು.

ಕಾಂಗ್ರೆಸ್ ವೀರ ಸಾವರ್ಕರ್ ಅವರನ್ನು ಕೂಡ ಅವಮಾನಿಸಿದೆ. ತುರ್ತು ಪರಿಸ್ಥಿತಿಯನ್ನು ಹೇರುವ ಮೂಲಕ ಕಾಂಗ್ರೆಸ್ ಎಲ್ಲಾ ಸಾಂವಿಧಾನಿಕ ಮೌಲ್ಯಗಳನ್ನು ಉಲ್ಲಂಘಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ನನ್ನ ಹೇಳಿಕೆಯನ್ನು ತಿರುಚಿ ಪ್ರಸ್ತುತಪಡಿಸಲಾಗಿದೆ. ಈ ಹಿಂದೆ ಅವರು ಪ್ರಧಾನಿ ನರೇಂದ್ರ ಮೋದಿಯವರ ಎಡಿಟೆಡ್ ಹೇಳಿಕೆಗಳನ್ನು ಕಾಂಗ್ರೆಸ್ ಬಿಡುಗಡೆ ಮಾಡಿತ್ತು. ಚುನಾವಣೆ ನಡೆಯುತ್ತಿರುವಾಗ ನನ್ನ ಹೇಳಿಕೆಯನ್ನು ಎಐ ಬಳಸಿ ಎಡಿಟ್ ಮಾಡಲಾಗಿತ್ತು. ಇಂದು ಅವರು ನನ್ನ ಹೇಳಿಕೆಯನ್ನು ತಿರುಚಿ ಸುಳ್ಳು ಹರಡುತ್ತಿದ್ದಾರೆ. ನನ್ನ ಸಂಪೂರ್ಣ ಹೇಳಿಕೆಯನ್ನು ಸಾರ್ವಜನಿಕರ ಮುಂದೆ ಇಡಲು ನಾನು ವಿನಂತಿಸುತ್ತೇನೆ. ನಾನು ಎಂದಿಗೂ ಅಂಬೇಡ್ಕರ್ ಅವರನ್ನು ಅವಮಾನಿಸುವ ರೀತಿಯ ಹೇಳಿಕೆ ನೀಡಿಲ್ಲ. ಬಿಜೆಪಿ ಅಧಿಕಾರದಲ್ಲಿದ್ದಾಗಲೆಲ್ಲ ನಾವು ಅಂಬೇಡ್ಕರ್ ಅವರ ತತ್ವಗಳನ್ನು ಪ್ರಚಾರ ಮಾಡಿದ್ದೇವೆ. ಕಾಂಗ್ರೆಸ್‌ನ ಈ ನೀಚ ಪ್ರಯತ್ನಕ್ಕೆ ಬೆಂಬಲ ನೀಡಿಲ್ಲ ಎಂದು ಅಮಿತ್ ಶಾ ಹೇಳಿದ್ದಾರೆ.

ಡಿ.21, ಮೈಸೂರಲ್ಲಿ ವಿಶ್ವ ಧ್ಯಾನ ದಿನ



ಮೈಸೂರು, ಡಿ.18(ಜಿಎ)–ಮೈಸೂರು ವಿಶ್ವವಿದ್ಯಾನಿಲಯದ ಬಯಲು ರಂಗ ಮಂಟಪದಲ್ಲಿ ಡಿ.21ರಂದು ಬೆಳಗ್ಗೆ 5.30ರಿಂದ 8 ಗಂಟೆವರೆಗೆ ವಿಶ್ವ ಧ್ಯಾನ ದಿನವನ್ನು ಆಚರಿಸಲಾಗುತ್ತಿದೆ ಎಂದು ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರೀಯ ಸಂಚಾಲಕಿ ಲಕ್ಷ್ಮೀಜಿ ತಿಳಿಸಿದರು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಧ್ಯಾನದ ಅಭ್ಯಾಸವು ಮಾನಸಿಕ ಆರೋಗ್ಯ ಮತ್ತು ನೆಮ್ಮದಿಗೆ ಕಾರಣವಾಗುತ್ತದೆ ಎಂದು ತಿಳಿಸಿ, ಡಿ.21ರಂದು ವಿಶ್ವ ಧ್ಯಾನ ದಿನವನ್ನು ಆಂತರಿಕ ಶಾಂತಿ, ಜಾಗತಿಕ ಸೌಹಾರ್ದತೆ ವಿಷಯದೊಂದಿಗೆ ಆಚರಿಸಲು ಕರೆ ನೀಡಿದೆ. ಹೀಗಾಗಿ ಇದೇ ಡಿ.21ರ ಬೆಳಗ್ಗೆ 5.30ರಿಂದ ಬೆಳಗ್ಗೆ ಎಂಟರವರೆಗೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿ ಇನ್ನಿತರ ಇಲಾಖೆ, ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಆಚರಿಸಲಿದೆ ಎಂದು ಹೇಳಿದರು.

ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಹಾಗೂ ಇನ್ನಿತರರು ಸೇರಿದಂತೆ ಸುಮಾರು ಮೂರರಿಂದ ನಾಲ್ಕು ಸಾವಿರ ಮಂದಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಧ್ಯಾನದಿಂದಾಗಿ ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಹೆಚ್ಚುತ್ತದೆ. ಸಿಡುಕುವುದು ಮೊದಲಾದ ಕೆಟ್ಟ ಅಭ್ಯಾಸಗಳು ಮರೆಯಾಗುತ್ತವೆ. ಇದು ಆ ವ್ಯಕ್ತಿಗೆ ಮಾತ್ರವಲ್ಲ ಕುಟುಂಬ ಹಾಗೂ ಸಮಾಜಕ್ಕೂ ಅನುಕೂಲ ಉಂಟು ಮಾಡುತ್ತದೆ. ಹೀಗಾಗಿ ಜನತೆ ಧ್ಯಾನದತ್ತ ಒಲವು ತೋರಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ, ಡಾ.ಗಣೇಶ್ ಕುಮಾರ್, ಶಶಿ, ದೇವರಾಜ್ ಉಪಸ್ಥಿತರಿದ್ದರು.

ಡಿ.21, 22ರಂದು ಹುಲಿಯೂರು ದುರ್ಗದ ಶ್ರೀ ಸಿದ್ಧಗಂಗಾ ಮಠದಲ್ಲಿ ವಿಚಾರ ಸಂಕಿರಣ


ಮೈಸೂರು, ಡಿ. 18–ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಕುಣಿಗಲ್ ತಾಲೂಕು ಹುಲಿಯೂರುದುರ್ಗ ಶ್ರೀ ಸಿದ್ಧಗಂಗಾ ಮಠದ ಸಹಯೋಗದೊಂದಿಗೆ ಡಿ.21 ಮತ್ತು 22ರಂದು ಹುಲಿಯೂರು ದುರ್ಗದಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ (ಎಸ್.ಎಲ್.ವಿ.) 'ಯಡಿಯೂರು ಶ್ರೀ ತೋಂಟದ ಸಿದ್ಧಲಿಂಗೇಶ್ವರ' ಕುರಿತಾಗಿ ಎರಡು ದಿನಗಳ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿದೆ.

ಡಿಸೆಂಬರ್ 21ರಂದು ಬೆಳಗ್ಗೆ 10ಕ್ಕೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ, ತುಮಕೂರು ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ.ವಿ.ಪರಮಶಿವಮೂರ್ತಿ ಉದ್ಘಾಟಿಸಲಿದ್ದಾರೆ. ಗೋಸಲ ಪರಂಪರೆ ಮತ್ತು ಶ್ರೀ ಸಿದ್ಧಲಿಂಗೇಶ್ವರರ ಜೀವನ ಚರಿತ್ರೆ, ಭಕ್ತ–ಮಾಹೇಶ್ವರ ಸ್ಥಲಗಳ ವಚನಗಳು, ಪ್ರಸಾದಿ–ಪ್ರಾಣಲಿಂಗಿ ಸ್ಥಲಗಳ ವಚನಗಳು, 'ಶರಣ–ಐಕ್ಯ' ಸ್ಥಲಗಳ ವಚನಗಳು, ಆಚರಣೆ ಮತ್ತು ಸಾಮಾಜಿಕ ಮೌಲ್ಯಗಳ ವಚನಗಳು–ಈ ವಿಷಯಗಳ ಕುರಿತು ಕ್ರಮವಾಗಿ ಡಾ.ಬಿ.ನಂಜುಂಡಸ್ವಾಮಿ, ಡಾ.ಜ್ಯೋತಿಶಂಕರ್, ಡಾ.ಎಂ.ಎನ್. ನಂದೀಶ್ ಹಂಚೆ, ಕೋ.ರಂ.ಬಸವರಾಜು ಮತ್ತು ಡಾ.ಶ್ರೀ ಬಸವ ಮರುಳ ಸಿದ್ಧ ಸ್ವಾಮಿಗಳು ಉಪನ್ಯಾಸ ನೀಡಲಿದ್ದಾರೆ.

21ರಂದು ಸಂಜೆ 5.30ಕ್ಕೆ 'ವೀರಶೈವ–ಲಿಂಗಾಯತ ತಾತ್ವಿಕ ಮತ್ತು ಸಾಮಾಜಿಕ ಚಿಂತನೆ' ವಿಷಯ ಕುರಿತು ಸಂವಾದವಿರುತ್ತದೆ. ಡಾ.ಶ್ರೀ ಶರತ್‌ಚಂದ್ರ ಸ್ವಾಮಿಗಳು ಸಮನ್ವಯಕಾರರಾಗಿದ್ದು, ಶ್ರೀ ಶ್ರೀಕಂಠ ಸ್ವಾಮಿಗಳು, ಶ್ರೀ ಷಡಕ್ಷರ ದೇಶಿಕೇಂದ್ರ ಸ್ವಾಮಿಗಳು, ಡಾ.ಶ್ರೀ ಅಭಿನವ ಮಲ್ಲಿಕಾರ್ಜುನ ಸ್ವಾಮಿಗಳು, ಶರಣೆ ಯೋಗೇಶ್ವರಿ ಮಾತಾಜಿಯವರು ಸಂವಾದಕರಾಗಿ ಪಾಲ್ಗೊಳ್ಳಲಿದ್ದು, ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಅಧ್ಯಕ್ಷತೆ ವಹಿಸಲಿದ್ದಾರೆ. ಮಧ್ಯಾಹ್ನ 12.30ಕ್ಕೆ ಗದಗ ಜಗದ್ಗುರು ಶ್ರೀ ತೋಂಟದಾರ್ಯ ಮಹಾಸಂಸ್ಥಾನ ಮಠದ ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ, ಹುಲಿಯೂರು ದುರ್ಗದ ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಶಿವಾನಂದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಸಮಾರೋಪ ಭಾಷಣ ಮಾಡಲಿದ್ದಾರೆ. ರಾಜ್ಯದ ವಿವಿಧ ಭಾಗಗಳಿಂದ ಸುಮಾರು 200 ಮಠಾಧಿಪತಿಗಳು, ಮಾತಾಜಿಗಳು, ಸಾಧಕರು, ಜಿಜ್ಞಾಸುಗಳು ಆಗಮಿಸಿ ಗೋಷ್ಠಿಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಗ್ರಾಹಕರ ಹಿತರಕ್ಷಣಾ ಕಾಯಿದೆ ಉಪಯೋಗಕಾರಿ

ಗ್ರಾಹಕ ಪಂಚಾಯತ್ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಅಭಿಮತ



ಮೈಸೂರಿನ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ಗ್ರಾಹಕ ಜಾಗರಣ ಪಾಕ್ಷಿಕ–2024 ಅನ್ನು ಬಿಡುಗಡೆ ಮಾಡಲಾಯಿತು.

ಮೈಸೂರು, ಡಿ. 18–ಗ್ರಾಹಕರ ಹಿತ ರಕ್ಷಣಾ ಕಾಯಿದೆ 1986 ಇತರೆ ಕಾಯಿದೆಗಳಂತೆ ಶಕ್ತಿಯುತವಾಗಿದ್ದು, ಗ್ರಾಹಕರು ಮೋಸ ಹೋದಾಗ ಗ್ರಾಹಕರ ಹಿತ ರಕ್ಷಣಾ ಕಾಯಿದೆಯನ್ವಯ ಪರಿಹಾರ ಪಡೆಯಬಹುದು ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಜಿಲ್ಲಾಧ್ಯಕ್ಷರಾದ ಸಿ.ಎಸ್.ಚಂದ್ರಶೇಖರ್ ಹೇಳಿದರು.

ಮೈಸೂರಿನ ಜೆಪಿ ನಗರದಲ್ಲಿರುವ ಪುಟ್ಟರಾಜು ಗವಾಯಿ ಕ್ರೀಡಾಂಗಣದಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ಗ್ರಾಹಕ ಜಾಗರಣ ಪಾಕ್ಷಿಕ–2024 (ಗ್ರಾಹಕ ಜಾಗರಣ ಪಖ್ವಾಡ)"ಭಾರತ್ ಮಾತಾ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ದೀಪ ಬೆಳಗಿಸಿ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಗ್ರಾಹಕರು ಮೋಸ ಹೋದಾಗ ದೂರನ್ನು ಎಲ್ಲಿ ಮತ್ತು ಹೇಗೆ ಸಲ್ಲಿಸಬೇಕೆಂಬ ಗೊಂದಲಗಳಿಂದ ದೂರು ಸಲ್ಲಿಸುವುದಿಲ್ಲ. ಗ್ರಾಹಕ ವೇದಿಕೆಯು ಗ್ರಾಹಕರ ದೂರುಗಳನ್ನು ಸ್ವೀಕರಿಸಿ ಶೇ. 90ರಷ್ಟು ಗ್ರಾಹಕರ ಪರವಾಗಿ ಪ್ರತಿಕ್ರಿಯಿಸುತ್ತದೆ. ಗ್ರಾಹಕ ಹಿತರಕ್ಷಣಾ ಕಾಯಿದೆ ಬಗ್ಗೆ ಇನ್ನೂ ಹೆಚ್ಚಿನ ಜಾಗೃತಿಯಾಗಬೇಕಿದೆ ಎಂದರು.

ವಕೀಲ ರವೀಂದ್ರ ಮಾತನಾಡಿ, ಇಂದಿನ ಮಾರುಕಟ್ಟೆ ಡಿಜಿಟಲ್ ಮಾರುಕಟ್ಟೆಯಾಗಿ, ಆನ್‌ಲೈನ್ ವ್ಯವಹಾರ ಮಾಡಲು ಯುವ ಜನರು ಉತ್ಸುಕರಾಗಿರುತ್ತಾರೆ. ಇಲ್ಲಿಯೂ ಸಾಕಷ್ಟು ಪ್ರಮಾಣದಲ್ಲಿ ಗ್ರಾಹಕರು ಮೋಸ ಹೋದ ನಿದರ್ಶನಗಳಿವೆ. ಆದ್ದರಿಂದ ಡಿಜಿಟಲ್ ಮಾರುಕಟ್ಟೆಯಲ್ಲಿ ಗ್ರಾಹಕರು ಜಾಗೃತರಾಗಿರುವುದು ಅವಶ್ಯಕವಾಗಿರುತ್ತದೆ ಎಂದರು.

ಗ್ರಾಹಕ ಪಂಚಾಯತ್‌ನ ಮೈಸೂರು ಘಟಕದ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ರವಿಶಂಕರ್, ಆನಂದ್ ದಯಾನಂದ್, ಜೆ.ಪಿ.ನಗರದ ಹಿರಿಯ ನಾಗರಿಕರ ಬಸವರಾಜ್, ಗುರುದೇವ್, ಬಸವರಾಜ್, ಶೇಷಾದ್ರಿ, ಶ್ರೀಕಂಠಯ್ಯ, ಶ್ರೀನಿವಾಸ್ ಗೌಡ, ಪುಟ್ಟಮಾದಪ್ಪ ಇನ್ನಿತರರಿದ್ದರು.

ಡಾ.ರಾಮಕೃಷ್ಣ ಹೆಗಡೆಯವರಿಗೆ ಹವ್ಯಕ ಶಿಕ್ಷಕ ರತ್ನ ಪ್ರಶಸ್ತಿ



ಮೈಸೂರು, ಡಿ. 18– ಬೆಂಗಳೂರಿನ ಶ್ರೀ ಅಖಿಲ ಹವ್ಯಕ ಮಹಾಸಭಾ ವಿಶ್ವ ಹವ್ಯಕ ಸಮ್ಮೇಳನದ ನಿಮಿತ್ತ ಶಿಕ್ಷಣ ಕ್ಷೇತ್ರದಲ್ಲಿನ ಮಹತ್ತರ ಸೇವೆ ಸಲ್ಲಿಸಿದವರಿಗೆ ಕೊಡ ಮಾಡುವ ಪ್ರತಿಷ್ಠಿತ 'ಹವ್ಯಕ ಶಿಕ್ಷಕ ರತ್ನ' ಪ್ರಶಸ್ತಿಗೆ ಡಾ. ರಾಮಕೃಷ್ಣ ಹೆಗಡೆಯವರು ಆಯ್ಕೆಯಾಗಿದ್ದಾರೆ.

ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸಂಯೋಜಕರು ಮತ್ತು IEEE ಮೈಸೂರು ವಿಭಾಗದ ಖಜಾಂಚಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ತಮ್ಮ 23 ವರ್ಷದ ವೃತ್ತಿಜೀವನದಲ್ಲಿ 50ಕ್ಕೂ ಹೆಚ್ಚು ತಮ್ಮ ಸಂಶೋಧನೆಗೆ ಸಂಬಂಧಪಟ್ಟಂತೆ ಸಂಶೋಧನಾ ಲೇಖನವನ್ನು ಪ್ರತಿಷ್ಠಿತ ಅಂತಾ ರಾಷ್ಟ್ರೀಯ ಮಟ್ಟದ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್‌ಗೆ ಸಂಬಂಧಪಟ್ಟ ಸಂಶೋಧನಾ ಪತ್ರಿಕೆ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಸ್ತುತಪಡಿಸಿದ್ದಾರೆ ಮತ್ತು ಪ್ರಕಟಿಸಿದ್ದಾರೆ. ಡಿಸೆಂಬರ್ 28ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಜರುಗುವ ವಿಶ್ವ ಹವ್ಯಕ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.


ದಿಲ್ಲಿ ಚಲೋಗೆ ತಡೆ; ರೈತರಿಂದ ಮೂರು ಗಂಟೆ ರೈಲ್ ರೋಕೋ



ಚಂಡೀಗಢ: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ)ಗೆ ಕಾನೂನು ಖಾತರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ರೈತರು ಬುಧವಾರ ಮೂರು ಗಂಟೆಗಳ ರೈಲ್ ರೋಕೋ ಪ್ರತಿಭಟನೆಯ ಭಾಗವಾಗಿ ಪಂಜಾಬ್‌ನ ಹಲವು ಸ್ಥಳಗಳಲ್ಲಿ ರೈಲುಗಳನ್ನು ತಡೆದು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಿಸಾನ್ ಮಜ್ದೂರ್ ಮೋರ್ಚಾದ ಮುಖಂಡ ಸರ್ವಾನ್ ಸಿಂಗ್ ಪಂಧೇರ್ ಮಾತನಾಡಿ, ರೈತರು ಮಧ್ಯಾಹ್ನ 12ರಿಂದ ಹಲವೆಡೆ ರೈಲು ಹಳಿಗಳ ಮೇಲೆ ಕುಳಿತಿದ್ದು, ಮಧ್ಯಾಹ್ನ 3 ಗಂಟೆವರೆಗೆ ಪ್ರತಿಭಟನೆ ನಡೆಸಿದ್ದಾರೆ ಎಂದರು.

ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾದ ಬ್ಯಾನರ್ ಅಡಿ ರೈತರು ಕಳೆದ ಶನಿವಾರ ದಿಲ್ಲಿ ಚಲೋ ಪುನರಾರಂಭಿಸುತ್ತಿದ್ದಂತೆ ಹರಿಯಾಣ ಪೊಲೀಸರು ಅವರ ಮೇಲೆ ಅಶ್ರುವಾಯು, ಜಲಫಿರಂಗಿ ಪ್ರಯೋಗಿಸಿ ತಡೆದಿದ್ದರು. ಕಳೆದ ಮೂರು ವಾರಗಳಿಂದ ಪಂಜಾಬ್ ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲ್, ಪಂಜಾಬ್ ಮತ್ತು ಹರಿಯಾಣ ನಡುವಿನ ಖಾನೌರಿ ಗಡಿಯಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದು, ಎಂಎಸ್‌ಪಿಗೆ ಕಾನೂನು ಖಾತರಿ ಸೇರಿದಂತೆ ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರವನ್ನು ಒತ್ತಾಯಿಸಿದ್ದಾರೆ.

ಶಾಸಕ ಸಿ.ಪಿ.ಯೋಗೇಶ್ವರ್‌ಗೆ ಅಭಿನಂದನೆ...


ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಜಯಗಳಿಸಿದ ಶಾಸಕ ಸಿ.ಪಿ.ಯೋಗೇಶ್ವರ್ ಅವರನ್ನು ಬೆಳಗಾವಿ ಸುವರ್ಣಸೌಧದಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್ ಮತ್ತು ಸ್ನೇಹಿತರು ಅಭಿನಂದಿಸಿದರು.

ಮತಯಾಚನೆ...


ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ 2025–2030ನೇ ಸಾಲಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ ಮೈಸೂರಿನ ಪಂಚಮುಖಿ ಗಣಪತಿ ದೇವಸ್ಥಾನದ ಮುಂಭಾಗ ಪೂಜೆ ಸಲ್ಲಿಸಿ, ಬ್ಯಾಂಕ್‌ನ ಮಾಜಿ ಅಧ್ಯಕ್ಷ ಸೋಮಣ್ಣ ಅವರ ಪುತ್ರಿ, ಪ್ರಸ್ತುತ ನಿರ್ದೇಶಕಿ ಎಸ್. ಶೀಲಾ, ಎಸ್‌ಬಿಎಂ ಮಂಜು ನೇತೃತ್ವದ ತಂಡದ ಪರ ಮತಯಾಚಿಸಿದರು. ಈ ವೇಳೆ ಬ್ಯಾಂಕ್‌ನ ನಿರ್ದೇಶಕರಾದ ಎಸ್‌ಬಿಎಂ ಮಂಜು, ರವಿ (ರಾಜಕೀಯ), ಅರವಿಂದ, ಮಂಚಪ್ಪ, ಎಸ್.ಆರ್. ರವಿಕುಮಾರ್, ಅಭ್ಯರ್ಥಿಗಳಾದ ಜಿ.ಕುಮಾರ್‌ಗೌಡ, ಎಚ್.ವಸಂತ ಮುನಿಷ್, ಎಂ.ಛಾಯಮ್ಮ, ರೋಹಿತ್ ಎಸ್., ವೈ.ವಿಕಾಸ್ ಮತಯಾಚಿಸಿದರು.


ಅಭಿನಂದನೆ...



ಮೈಸೂರಿನ ಅಕ್ಷ ಭಾರತ್ ಮಿಷನ್ ವತಿಯಿಂದ ಆಶಾದೀಪ ವಿಕಲಚೇತನರ ತರಬೇತಿ ಕೇಂದ್ರದಲ್ಲಿ ಸಾಧಕ ವಿಕಲಚೇತನರನ್ನು ಅಭಿನಂದಿಸಲಾಯಿತು. ಸಾಹಿತಿ ಸತೀಶ್ ಜವರೇಗೌಡ, ಅಂಧ ನೌಕರ ಹೆಚ್.ಕೆ.ನಾಗೇಶ್, ಕೇಂದ್ರದ ಸಂಸ್ಥಾಪಕರಾದ ಗುರುಸ್ವಾಮಿ ಮತ್ತು ರಂಗಸ್ವಾಮಿ, ಉಪನ್ಯಾಸಕ ಮುರುಳಿ, ಸಂಪನ್ಮೂಲ ಶಿಕ್ಷಕ ಹರೀಶ್ ಇದ್ದರು.


ದೇಶ - ವಿದೇಶ

ಕ್ಯಾನ್ಸರ್ ಲಸಿಕೆ; ವೈದ್ಯಕೀಯ ವಿಜ್ಞಾನದಲ್ಲಿ ರಷ್ಯಾದ ಸಾಧನೆ




ಮಾಸ್ಕೋ: ರಷ್ಯಾದ ಆರೋಗ್ಯ ಸಚಿವಾಲಯವು ಕ್ಯಾನ್ಸರ್ ಲಸಿಕೆಯನ್ನು ಅಭಿವೃದ್ಧಿಪಡಿಸಿರುವುದಾಗಿ ಘೋಷಿಸಿದೆ. ಅದನ್ನು ತನ್ನ ನಾಗರಿಕರಿಗೆ ಉಚಿತವಾಗಿ ನೀಡಲಿದೆ ಎಂಬುದನ್ನೂ ಹೇಳಿದೆ. ರಷ್ಯಾದ ಆರೋಗ್ಯ ಸಚಿವಾಲಯದ ವಿಕಿರಣಶಾಸ್ತ್ರ ವೈದ್ಯಕೀಯ ಸಂಶೋಧನಾ ಕೇಂದ್ರದ ಮುಖ್ಯಸ್ಥ ಆಂಡ್ರೆ ಕಪ್ರಿನ್ ಮಾತನಾಡಿ, ಲಸಿಕೆ ವಿತರಣೆಯನ್ನು 2025ರ ಆರಂಭದಲ್ಲಿ ಪ್ರಾರಂಭಿಸಲಾಗುವುದು ಎಂದು ಹೇಳಿದ್ದಾರೆ. ಈ ಲಸಿಕೆ ಕ್ಯಾನ್ಸರ್ ರೋಗಿಗಳ ಚಿಕಿತ್ಸೆಗಾಗಿ ಇರುತ್ತದೆ. ಗಡ್ಡೆಯ ರಚನೆಯನ್ನು ತಡೆಯಲು ಇದನ್ನು ಬಳಸಲಾಗುವುದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಕ್ಯಾನ್ಸರ್ ಲಸಿಕೆಗಳಂತೆಯೇ ಪ್ರತಿ ಶಾಟ್ ಅನ್ನು ಪ್ರತಿ ರೋಗಿಗೆ ಅನುಗುಣವಾಗಿ ಮಾಡಲಾಗುತ್ತದೆ ಎಂದು ರಷ್ಯಾದ ವಿಜ್ಞಾನಿಗಳು ಹೇಳಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮಾತನಾಡಿ, ದೇಶದ ವಿಜ್ಞಾನಿಗಳು ಕ್ಯಾನ್ಸರ್ ಲಸಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದು ಅಂತಿಮ ಹಂತದಲ್ಲಿದೆ ಎಂದು ಹೇಳಿದ್ದರು. ನಾವು ಕ್ಯಾನ್ಸರ್ ಲಸಿಕೆಗಳು ಹಾಗೂ ಹೊಸ ಪೀಳಿಗೆಯ ಇಮ್ಯುನೊಮಾಡ್ಯುಲೇಟರಿ ಔಷಧಗಳ ರಚನೆಗೆ ಬಹಳ ಹತ್ತಿರವಾಗುತ್ತಿದ್ದೇವೆ ಎಂದು ಹೇಳಿದ್ದರು.

ಇಂದೋರ್‌ನಲ್ಲಿ ಭಿಕ್ಷುಕರಿಗೆ ಹಣ ನೀಡಿದರೆ ಎಫ್‌ಐಆರ್




ಇಂದೋರ್: ಭಾರತದ ಸ್ವಚ್ಛ ನಗರ ಎಂದೇ ಖ್ಯಾತಿಗಳಿಸಿರುವ ಮಧ್ಯಪ್ರದೇಶದ ಇಂದೋರ್ ಈಗ ಭಿಕ್ಷಾಟನೆ ಮುಕ್ತವಾಗಲು ಪಣ ತೊಟ್ಟಿದೆ. ನಗರದ ಬೀದಿಗಳು ಭಿಕ್ಷುಕರಿಂದ ಮುಕ್ತವಾಗಿರುವುದನ್ನು ಖಚಿತಪಡಿಸಿಕೊಳ್ಳಲು ತೀವ್ರ ಕ್ರಮಕ್ಕೆ ಮುಂದಾಗಿರುವ ಇಂದೋರ್ ಜಿಲ್ಲಾಡಳಿತ, ಜನವರಿ 1, 2025ರಿಂದ ನಗರದಲ್ಲಿ ಭಿಕ್ಷುಕರಿಗೆ ಭಿಕ್ಷೆ ನೀಡುವವರ ವಿರುದ್ಧವೇ ಎಫ್‌ಐಆರ್ ದಾಖಲಿಸಲು ನಿರ್ಧರಿಸಿದೆ. ಇಂದೋರ್‌ನ ಎಲ್ಲಾ ನಿವಾಸಿಗಳಿಗೆ ಮನವಿ ಮಾಡುತ್ತೇವೆ. ಭಿಕ್ಷೆ ನೀಡುವ ಮೂಲಕ ಪಾಪದಲ್ಲಿ ಪಾಲುದಾರರಾಗಬೇಡಿ. ಜನವರಿ 1ರಿಂದ ಯಾರಾದರೂ ಭಿಕ್ಷೆ ನೀಡುತ್ತಿರುವುದು ಕಂಡುಬಂದರೆ, ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುವುದು ಎಂದು ಎಚ್ಚರಿಸಿದರು. ಈ ಕ್ರಮವು ಇಂದೋರ್ ಸೇರಿದಂತೆ 10 ನಗರಗಳನ್ನು ಭಿಕ್ಷಾಟನೆಯಿಂದ ಮುಕ್ತಗೊಳಿಸುವ ಗುರಿ ಹೊಂದಿರುವ ಸ್ಮೈಲ್ (ಲೈವ್ಲಿಹುಡ್ ಮತ್ತು ಎಂಟರ್‌ಪ್ರೈಸ್‌ಗಾಗಿ ಅಂಚಿನಲ್ಲಿರುವ ವ್ಯಕ್ತಿಗಳಿಗೆ ಬೆಂಬಲ) ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಪ್ರಾಯೋಗಿಕ ಯೋಜನೆಯ ಭಾಗವಾಗಿದೆ. ಜನವರಿ 1, 2025ರಿಂದ ಅನ್ವಯವಾಗುವಂತೆ, ಇಂದೋರ್ ಜಿಲ್ಲಾ ವ್ಯಾಪ್ತಿಯಲ್ಲಿನ ಭಿಕ್ಷುಕರಿಗೆ ಭಿಕ್ಷೆ ನೀಡುವುದನ್ನು ನಿಷೇಧಿಸಿ, ಆದೇಶ ಹೊರಡಿಸಿದೆ.

ಪ್ಯಾಲೆಸ್ಟೀನ್ ಬ್ಯಾಗ್ ಹಿಡಿದು ಸಂಸತ್ತಿಗೆ ಹೋದ ಪ್ರಿಯಾಂಕಾ: ಪಾಕ್ ರಾಜಕಾರಣಿ ಗುಣಗಾನ




ಇಸ್ಲಾಮಾಬಾದ್: ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ಸಂಸತ್ತಿಗೆ ಪ್ಯಾಲೆಸ್ಟೀನ್ ಎಂದು ಬರೆದಿರುವ ಬ್ಯಾಗ್ ಹಿಡಿದುಕೊಂಡು ಹೋಗಿರುವುದು ಪಾಕಿಸ್ತಾನದಲ್ಲೂ ಚರ್ಚೆ ಹುಟ್ಟುಹಾಕಿದೆ. ಪಾಕಿಸ್ತಾನ ಮಾಜಿ ಸಚಿವ ಫವಾದ್ ಹಸನ್ ಚೌಧರಿ ಮಾತನಾಡಿ, ಜವಾಹರಲಾಲ್ ನೆಹರೂ ಅವರಂತಹ ಮಹಾನ್ ಸ್ವಾತಂತ್ರ್ಯ ಹೋರಾಟಗಾರರ ಮರಿಮಕ್ಕಳಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ ಎಂದು ಬರೆದಿದ್ದಾರೆ. ಹೇಡಿಗಳ ನಡುವೆ ಪ್ರಿಯಾಂಕಾ ತಲೆ ಎತ್ತಿ ನಿಂತಿದ್ದಾರೆ. ಇಲ್ಲಿವರೆಗೂ ಪಾಕಿಸ್ತಾನದ ಯಾವೊಬ್ಬ ಸಂಸತ್ ಸದಸ್ಯನೂ ಅಂತಹ ಧೈರ್ಯ ತೋರಿಲ್ಲ ಎಂಬುದು ನಾಚಿಕೆಗೇಡಿನ ಸಂಗತಿ ಎಂದಿದ್ದಾರೆ. ಪ್ರಿಯಾಂಕಾ ಬ್ಯಾಗ್‌ನಲ್ಲಿ ಪ್ಯಾಲೆಸ್ಟೀನ್ ಎಂಬ ಬರಹವಿತ್ತು ಜತೆಗೆ ಕಲ್ಲಂಗಡಿ ಹಣ್ಣಿನ ಚಿತ್ರ ಕೂಡ ಇತ್ತು ಇದನ್ನು ಪ್ಯಾಲೆಸ್ಟೀನ್ ಒಗ್ಗಟ್ಟಿನ ಸಂಕೇತ ಎಂದು ಪರಿಗಣಿಸಲಾಗುತ್ತದೆ. ಕಲ್ಲಂಗಡಿ ಚಿತ್ರಗಳು ಮತ್ತು ಎಮೋಜಿಗಳನ್ನು ಪ್ಯಾಲೆಸ್ಟೀನ್ ಅನ್ನು ಬೆಂಬಲಿಸಲು ಬಳಸಲಾಗುತ್ತದೆ. ಗಾಜಾದಲ್ಲಿ ಇಸ್ರೇಲ್ ಕ್ರಮದ ವಿರುದ್ಧ ಪ್ರಿಯಾಂಕಾ ಬಹಳ ಸಮಯದಿಂದ ಧ್ವನಿ ಎತ್ತುತ್ತಿದ್ದಾರೆ. ಅಕ್ಟೋಬರ್‌ನಲ್ಲಿ ಹಮಾಸ್–ಇಸ್ರೇಲ್ ನಡುವಿನ ಯುದ್ಧವು ವರ್ಷ ಪೂರ್ಣಗೊಳಿಸಿದಾಗ ಪ್ರಿಯಾಂಕಾ ಇಸ್ರೇಲ್ ಅಂತರರಾಷ್ಟ್ರೀಯ ಕಾನೂನು ಉಲ್ಲಂಘಿಸುತ್ತಿದೆ ಎಂದು ಆರೋಪಿಸಿದ್ದರು.

ಜಮ್ಮು–ಕಾಶ್ಮೀರದ ಮನೆಯಲ್ಲಿ ಬೆಂಕಿ; ಮಾಜಿ ಡಿವೈಎಸ್‌ಪಿ ಸೇರಿ ಆರು ಮಂದಿ ಸಾವು



ಜಮ್ಮು: ಜಮ್ಮು ಮತ್ತು ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ಬುಧವಾರ ಮುಂಜಾನೆ ಮನೆಯೊಂದರಲ್ಲಿ ಬೆಂಕಿ ಹತ್ತಿ ಉಸಿರುಗಟ್ಟಿ ಮಾಜಿ ಉಪ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಅವರ ಮೂರು ವರ್ಷದ ಮೊಮ್ಮಗ ಸೇರಿದಂತೆ ಆರು ಮಂದಿ ಮೃತಪಟ್ಟಿದ್ದಾರೆ. ಘಟನೆಯಲ್ಲಿ ಗಾಯಗೊಂಡಿರುವ ಇತರ ನಾಲ್ವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪೊಲೀಸರ ಪ್ರಕಾರ, ಬೆಳಗಿನ ಜಾವ 2.30ರ ಸುಮಾರಿಗೆ ಮನೆಗೆ ಬೆಂಕಿ ಹೊತ್ತಿಕೊಂಡಿರುವುದನ್ನು ಗಮನಿಸಿದ ಸ್ಥಳೀಯರು ಅಲ್ಲಿನ ನಿವಾಸಿಗಳನ್ನು ರಕ್ಷಿಸಲು ಮುಂದಾದರು. ಸಂತ್ರಸ್ತರನ್ನು ಕಥುವಾದಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು, ಅಲ್ಲಿ ಇಬ್ಬರು ಅಪ್ರಾಪ್ತ ವಯಸ್ಕರು ಸೇರಿದಂತೆ ಆರು ಮಂದಿ ಮೃತಪಟ್ಟಿದ್ದಾರೆ. ಮೃತರನ್ನು 81 ವರ್ಷದ ಮಾಜಿ ಡಿವೈಎಸ್‌ಪಿ ಅವತಾರ್ ಕೃಷ್ಣ ರೈನಾ, ಅವರ ಮಗಳು ಬರ್ಖಾ ರೈನಾ (25), ಮಗ ತಕಾಶ್ (3), 17 ವರ್ಷದ ಗಂಗಾ ಭಗತ್, 15 ವರ್ಷದ ಡ್ಯಾನಿಶ್ ಭಗತ್ ಮತ್ತು 6 ವರ್ಷದ ಅದ್ವಿಕ್ ಎಂದು ಗುರುತಿಸಲಾಗಿದೆ. ಗಾಯಗೊಂಡವರು ಮತ್ತು ಚಿಕಿತ್ಸೆ ಪಡೆಯುತ್ತಿರುವವರು 61 ವರ್ಷದ ಸ್ವರ್ಣ (ಅವತಾರ್ ಕೃಷ್ಣ ರೈನಾ ಅವರ ಪತ್ನಿ), ನೀತು ದೇವಿ (40), ಅರುಣ್‌ಕುಮಾರ್ (15), ಮತ್ತು 69 ವರ್ಷದ ಮಹಿಳೆ ಎಂದು ಗುರುತಿಸಲಾಗಿದೆ.

ಪ್ಯಾಲೆಸ್ಟೈನ್ ರಾಷ್ಟ್ರ ಸ್ಥಾಪನೆ ಎಂದಿಗೂ ಒಪ್ಪಲ್ಲ: ಇಸ್ರೇಲ್ ಪ್ರಧಾನಿ ನೆತನ್ಯಾಹು



ಜೆರುಸಲೇಂ: ಪ್ಯಾಲೆಸ್ಟೈನ್ ದೇಶ ಸ್ಥಾಪನೆಗೆ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸ್ಪಷ್ಟಪಡಿಸಿದ್ದಾರೆ. ಸೌದಿ ಅರೇಬಿಯಾದೊಂದಿಗಿನ ಸಂಬಂಧವನ್ನು ಸಹಜ ಸ್ಥಿತಿಗೆ ತರುವ ಪ್ರಯತ್ನಗಳ ಭಾಗವಾಗಿ ಪ್ಯಾಲೆಸ್ಟೈನ್ ರಾಷ್ಟ್ರ ಸ್ಥಾಪನೆಗೆ ಇಸ್ರೇಲ್ ಒಪ್ಪಿಕೊಂಡಿದೆ ಎಂಬ ವರದಿಗಳನ್ನು ನೆತನ್ಯಾಹು ತಿರಸ್ಕರಿಸಿದ್ದಾರೆ. ಪ್ರಧಾನಿ ನೆತನ್ಯಾಹು ಪ್ಯಾಲೆಸ್ಟೈನ್ ರಾಷ್ಟ್ರ ಸ್ಥಾಪನೆಯಾಗದಂತೆ ಪ್ರಯತ್ನಿಸಿದ್ದಾರೆ ಹಾಗೂ ಮುಂದೆಯೂ ಅದೇ ಪ್ರಯತ್ನ ಮುಂದುವರಿಸಲಿದ್ದಾರೆ ಎಂದು ಅವರ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ. ಪ್ಯಾಲೆಸ್ಟೈನ್ ರಾಷ್ಟ್ರ ಸ್ಥಾಪನೆಯು ಇಸ್ರೇಲ್‌ನ ಭದ್ರತೆಗೆ ಅಪಾಯವನ್ನುಂಟು ಮಾಡುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಸೌದಿ ಅರೇಬಿಯಾದೊಂದಿಗಿನ ಸಂಬಂಧಗಳನ್ನು ಉತ್ತಮಗೊಳಿಸಲು ನಡೆಯುತ್ತಿರುವ ಮಾತುಕತೆಗಳ ಭಾಗವಾಗಿ ಪ್ಯಾಲೆಸ್ಟೈನ್ ರಾಷ್ಟ್ರ ಸ್ಥಾಪನೆಯ ವಿಷಯವನ್ನು ಇಸ್ರೇಲ್ ಪರಿಗಣಿಸುತ್ತಿದೆ ಎಂದು ಇಸ್ರೇಲ್ ಮಾಧ್ಯಮಗಳು ಈ ಹಿಂದೆ ವರದಿ ಮಾಡಿರುವುದಾಗಿ ಕ್ಸಿನ್ಹುವಾ ಸುದ್ದಿ ಸಂಸ್ಥೆ ಹೇಳಿತ್ತು. ಸ್ವತಂತ್ರ ಪ್ಯಾಲೆಸ್ಟೈನ್ ರಾಷ್ಟ್ರದ ಸ್ಥಾಪನೆಯಾಗಬೇಕು ಎಂಬ ತನ್ನ ನಿಲುವಿನಿಂದ ಸೌದಿ ಅರೇಬಿಯಾದ ನಾಯಕತ್ವವು ಹಿಂದೆ ಸರಿದಿದೆ ಎಂಬ ವರದಿಗಳು ಕೂಡ ಅಷ್ಟೇ ಆಧಾರರಹಿತವಾಗಿವೆ ಎಂದು ಹೆಸರು ಹೇಳಲಿಚ್ಛಿಸದ ಅಧಿಕಾರಿಯೊಬ್ಬರು ಮಾಧ್ಯಮಗಳಿಗೆ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಗನ್ ಕಾರ್ನಿವಲ್ ತೋಕ್ ನಮ್ಮೆ' ಆಚರಣೆ

● ಹೂವುಗಳಿಂದ ಅಲಂಕರಿಸಿ ಬಂದೂಕುಗಳಿಗೆ ಪೂಜೆ ● ದುಡಿಕೋಟ್ ಪಾಟ್‌ನೊಂದಿಗೆ ಮೆರವಣಿಗೆ



ಕಡಿಯತ್ನಾಡ್ ಸಮೀಪದ ಖಾಸಗಿ ರೆಸಾರ್ಟ್‌ನಲ್ಲಿ ನಡೆದ ಗನ್ ಕಾರ್ನಿವಲ್ ತೋಕ್ ನಮ್ಮೆ ಆಚರಣೆಯಲ್ಲಿ ಬಂದೂಕುಗಳಿಗೆ ಪೂಜೆ ಸಲ್ಲಿಸಲಾಯಿತು.



ಶೂಟಿಂಗ್ ಸ್ಪರ್ಧೆಯಲ್ಲಿ ಬಂದೂಕುಗಳನ್ನು ಪ್ರದರ್ಶಿಸಿದ ಮಹಿಳೆಯರು.

ಮಡಿಕೇರಿ, ಡಿ.18–ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ 15ನೇ ವರ್ಷದ 'ಗನ್ ಕಾರ್ನಿವಲ್ ತೋಕ್ ನಮ್ಮೆ' ಮೂರ್ನಾಡ್‌ನ ಬಲಂಬೇರಿ ರಸ್ತೆಯ ಬಳಿ ಕಡಿಯತ್ನಾಡ್ ಸಮೀಪದ ಖಾಸಗಿ ರೆಸಾರ್ಟ್‌ನಲ್ಲಿ ಆಚರಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನ ಬಂದೂಕುಗಳನ್ನು ಹೂವುಗಳಿಂದ ಅಲಂಕರಿಸಿ, ವಾಹನದಲ್ಲಿಟ್ಟು ದುಡಿಕೋಟ್ ಪಾಟ್‌ನೊಂದಿಗೆ ಮೆರವಣಿಗೆ ನಡೆಸಲಾಯಿತು. ಮಕ್ಕಳು, ಮಹಿಳೆಯರು ಮತ್ತು ಪುರುಷರಿಗಾಗಿ ಶೂಟಿಂಗ್ ಸ್ಪರ್ಧೆಗಳು ನಡೆಸಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಕೊಡವ ಮಹಿಳೆಯರು ಭಾಗವಹಿಸಿದ್ದರು. ಸಭೆಯಲ್ಲಿ ಕೊಡವರ ಗೌರವಾನ್ವಿತ ಗುರಿ ಮತ್ತು ಶಾಸನಬದ್ಧ ಹಕ್ಕೊತ್ತಾಯ ಪರಿಗಣಿಸಬೇಕೆಂಬ ನಿರ್ಣಯ ಅಂಗೀಕರಿಸಲಾಯಿತು.

ಸಾಧಕರಿಗೆ ಪ್ರಶಸ್ತಿ ಪ್ರದಾನ: 15ನೇ ವಾರ್ಷಿಕ ಗನ್ ಕಾರ್ನಿವಲ್‌ನಲ್ಲಿ ಕೊಡವ ಸಾಹಿತ್ಯದ ಮೂಲಕ ದಾಖಲೆ ಮಾಡಿದ ಪಂಜೆಮಂಗೇಶ ರಾವ್, ಶಕ್ತಿ ಪತ್ರಿಕೆಯ ಸಂಪಾದಕ ದಿವಂಗತ ಜಿ.ಯದು ಮಣಿ ಹಾಗೂ ದಿವಂಗತ ಡಿ.ಎನ್. ಕೃಷ್ಣಯ್ಯ ಅವರಿಗೆ ಮರಣೋತ್ತರ 'ಕೊಡವ ರತ್ನ' ಪ್ರಶಸ್ತಿ ನೀಡಲಾಯಿತು.

ದಿ.ಜಿ.ಯದುಮಣಿ ಪರವಾಗಿ ಶಕ್ತಿ ಪತ್ರಿಕೆ ಸಂಪಾದಕ ಜಿ.ರಾಜೇಂದ್ರ ದಿ.ಪಂಜೆಮಂಗೇಶರಾಯರ ಪರವಾಗಿ ಹೆಚ್.ಟಿ.ಅನಿಲ್, ಡಿ.ಎನ್.ಕೃಷ್ಣಯ್ಯ ಅವರ ಪರವಾಗಿ ಅವರ ಮೊಮ್ಮಗ ಕ್ಯಾಪ್ಟನ್ ರಾಜಾರಾಮ್ ಅವರು ಪ್ರಶಸ್ತಿ ಸ್ವೀಕರಿಸಿದರು.

ಅಂಗರುಶಾಸ್ತ್ರವೈದ್ಯ ಡಾ.ಸಿಆರ್.ಹರ್ಷ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಪ್ರಾಧ್ಯಾಪಕ ಡಾ.ಎಂ.ಎನ್.ರವಿಶಂಕರ್, 191ಕ್ಕೂ ಅಧಿಕ ಶವಸಂಸ್ಕಾರಗಳನ್ನು ನೆರವೇರಿಸಿರುವ ಕಾಂಡೇರ ಕೆ.ಸುರೇಶ್, ಪ್ರಥಮ ಕೊಡವ ಎಂಎ ತರಗತಿ ಪ್ರಾಧ್ಯಾಪಕಿ ಬಾಚುಣಿಯಂಡ ರಾಣು ಅಪ್ಪಣ್ಣ, ಕೊಡಂದೇರ ಉತ್ತರೆ ತಿಮ್ಮಯ್ಯ, ಪಟ್ಟಮಾಡ ಲಲಿತಾ ಗಣಪತಿ, ಹಂಚೆಟ್ಟಿರ ನಯನ ಚಂಗಪ್ಪ, ಮುಕ್ಕಾಟಿರ ಎ.ವಸಂತ್, ಬೊಟ್ಟೋಳಂಡ ಜಿ.ಮಿಟ್ಟುಚಂಗಪ್ಪ, ಉದಿಯಂಡ ಚಂಗಪ್ಪ ಬೊಳ್ಳಾರ್ಪಂಡ ಸಾಬು ಚಂಗಪ್ಪ, ನಂದಿನೆರವಂಡ ಅಪ್ಪಯ್ಯ, ಪೆಮ್ಮುಡಿಯಂಡ ವೇಣು ಅಪ್ಪಣ್ಣ ಅವರಿಗೆ 'ಕೊಡವ ವಿಭೂಷಣ' ಪ್ರಶಸ್ತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ನಂದೇಟಿರ ಕವಿತಾ ಸುಬ್ಬಯ್ಯ, ಕಲಿಯಂಡ ಮೀನಾ ಪ್ರಕಾಶ್, ಲೆ.ಕರ್ನಲ್ ಬಿ.ಎಂ.ಪಾರ್ವತಿ, ಬೊಟ್ಟಂಗಡ ಸವಿತಾ ಗಿರೀಶ್, ಪುಲ್ಲೇರ ಸ್ವಾತಿ ಕಾಳಪ್ಪ, ಮನೆಯಪಂಡ ಕಾಂತಿ ಸತೀಶ್, ಬಿದ್ದಂಡ ಉಷಾ ದೇವಮ್ಮ, ಬೊಪ್ಪಂಡ ಬೊಳ್ಳಮ್ಮ ನಾಣಯ್ಯ, ಕಲಿಯಂಡ ಪ್ರಕಾಶ್, ಅಳ್ಮಂಡ ಜೈ, ಪಟ್ಟಮಾಡ ಕುಶ, ಬಾಚರಣಿಯಂಡ ಚಿಪ್ಪಣ್ಣ, ನಂದೇಟಿರ ರವಿ ಸುಬ್ಬಯ್ಯ, ಅರೆಯಡ ಗಿರೀಶ್, ಚಂಬಂಡ ಜನತ್, ಬೇಪಡಿಯಂಡ ಬಿದ್ದಪ್ಪ, ಅಜ್ಜಿಕುಟ್ಟೀರ ಲೋಕೇಶ್, ಜಿಲ್ಲೆಯ ವಿವಿಧ ಕಡೆಗಳಿಂದ ಸಿಎನ್‌ಸಿ ಬೆಂಗಲಿಗರು ಪಾಲ್ಗೊಂಡಿದ್ದರು.

> ಕೊಡವರ ಮಾತೃಭೂಮಿ, ಸಾಂಸ್ಕೃತಿ ಭೂ ಭಾಗಗಳು, ಕಾವೇರಿ ಮಾತೆ, ಮಂದ್‌ಗಳು ಹಾಗೂ ಬಂದೂಕು ಕೊಡವ ಜನಾಂಗದ ಧಾರ್ಮಿಕ ಜನಾಂಗೀಯ ಸಂಸ್ಕಾರವಾಗಿದೆ. ಕೊಡವರ ಹಳೆಯ ಸಾಂಪ್ರದಾಯಿಕ ಆಚರಣೆ ಮತ್ತು ಜಾನಪದ ಕಾನೂನು ವ್ಯವಸ್ಥೆಗಳನ್ನು ಪ್ರದರ್ಶಿಸಲು ಮತ್ತು ಸಂರಕ್ಷಿಸಲು ಸರ್ಕಾರವನ್ನು ಆಗ್ರಹಿಸಿ ಸಂವಿಧಾನದ ಶೆಡ್ಯೂಲ್ 6ರ ಅಡಿ ಶಾಂತಿಯುತ ಹೋರಾಟವನ್ನು 35 ವರ್ಷಗಳಿಂದ ನಡೆಸಲಾಗುತ್ತಿದೆ.
>
> –ನಂದಿನೆರಂಡ ನಾಚಪ್ಪ, ಸಿಎನ್‌ಸಿ ಅಧ್ಯಕ್ಷ

ಸಿಎನ್‌ಸಿ ಸಂಘಟನೆ ಹೋರಾಟ ಶ್ಲಾಘನೀಯ

ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮ ಬುಡುಕಟ್ಟು ಜನಾಂಗವನ್ನು ಸಂರಕ್ಷಿಸುವುದು ಸಂವಿಧಾನದ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಸಿಎನ್‌ಸಿ ಸಂಘಟನೆ ನಿರಂತರ ಹೋರಾಟ ಮಾಡುತ್ತಿರುವುದು ಶ್ಲಾಘನೀಯ ಎಂದು ರಾಜ್ಯ ವನ್ಯಜೀವಿ ಸಂರಕ್ಷಣಾ ಮಂಡಳಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಹೇಳಿದರು.

ತೋಕ್ ನಮ್ಮೆಯಲ್ಲಿ ಬಾಳೆ ಕಡಿಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಎಸ್‌ಟಿ ಟ್ಯಾಗ್‌ಗಾಗಿ ನಡೆಸುತ್ತಿರುವ ಹೋರಾಟ ಅತ್ಯಂತ ಅರ್ಥ ಗರ್ಭಿತವಾಗಿದೆ. ಎಸ್‌ಟಿ ಸ್ಥಾನಮಾನ ಒಂದು ಬುಡಕಟ್ಟು ಸಮುದಾಯದ ಭೂ ಭಾಗದ ಅಸ್ತಿತ್ವವನ್ನು ಸಾರುತ್ತದೆ. ರಾಜ್ಯ ಪುನರ್ವಿಂಗಡಣೆ ಬಳಿಕ ಕೊಡಗು ಜಿಲ್ಲೆಗೆ ಸೂಕ್ತ ಸ್ಥಾನಮಾನ ದೊರಕಿಲ್ಲ. ಕೊಡವ ಸಮುದಾಯದ ಹಕ್ಕುಗಳಿಗೂ ಸಾಕಷ್ಟು ಅನ್ಯಾಯವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕೊಡವ ಸಮುದಾಯದ ಭವಿಷ್ಯದ ದೃಷ್ಟಿಯಿಂದ ಕೊಡವರ ಸಂವಿಧಾನಿಕ ಹಕ್ಕು ಮತ್ತು ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿರುವ ಸಿಎನ್‌ಸಿ ಸಂಘಟನೆಗೆ ಆರ್ಥಿಕ ಶಕ್ತಿ ತುಂಬುವ ಕೆಲಸವೂ ಸಮುದಾಯದಿಂದ ನಡೆಯಬೇಕು ಎಂದು ತಿಳಿಸಿದರು.

ವಿರಾಜಪೇಟೆ ಪಟ್ಟಣದಲ್ಲಿ ಹುಲಿ ಪ್ರತ್ಯಕ್ಷ



ವಿರಾಜಪೇಟೆ–ಮಡಿಕೇರಿ ಮುಖ್ಯ ರಸ್ತೆಯಲ್ಲಿ ಹುಲಿ ಹೋಗುತ್ತಿರುವ ದೃಶ್ಯ ಕ್ಯಾಮರಾದಲ್ಲಿ ಸೆರೆಯಾಗಿರುವುದು.

ಮಡಿಕೇರಿ, ಡಿ.18–ವಿರಾಜಪೇಟೆ ಪಟ್ಟಣದಲ್ಲಿ ಹುಲಿ ಕಾಣಿಸಿಕೊಳ್ಳುವ ಮೂಲಕ ಭೀತಿ ಮೂಡಿಸಿದೆ.

ಮಂಗಳವಾರ ರಾತ್ರಿ ವಿರಾಜಪೇಟೆ ಕಾವೇರಿ ಕಾಲೇಜು ಮುಂಭಾಗದ ಕುಕ್ಲೂರು ಮುತ್ತಪ್ಪ ದೇವಸ್ಥಾನದ ವಿರಾಜಪೇಟೆ–ಮಡಿಕೇರಿ ಮುಖ್ಯ ರಸ್ತೆಯಲ್ಲಿ ಹುಲಿ ಪ್ರತ್ಯಕ್ಷವಾಗಿದೆ. ಕತ್ತಲಿನಲ್ಲಿ ಹುಲಿ ರಸ್ತೆಯ ಒಂದು ಬದಿಯಿಂದ ಮತ್ತೊಂದು ಕಡೆಗೆ ಹೋಗುತ್ತಿರುವ ದೃಶ್ಯ ಕಾರಿನ ಡ್ಯಾಶ್ ಬೋರ್ಡ್ ಕ್ಯಾಮರಾದಲ್ಲಿ ಸೆರೆಯಾಗಿದೆ.

ಮಾಹಿತಿ ಅರಿತು ಸ್ಥಳಕ್ಕೆ ವಿರಾಜಪೇಟೆ ವಲಯ ಅರಣ್ಯಾಧಿಕಾರಿಗಳು ಮತ್ತ ಸಿಬ್ಬಂದಿ ಆಗಮಿಸಿ ಪರಿಶೀಲನೆ ನಡೆಸಿದರು. ಈ ವೇಳೆ ಸ್ಥಳದಲ್ಲಿ ಅದರ ಹೆಜ್ಜೆ ಗುರುತು ಪತ್ತೆಯಾಗಿದ್ದು, ಪೂಮಾಲೆ ಮಂದ್ ಮೂಲಕ ವಿರಾಜಪೇಟೆ–ಮಡಿಕೇರಿ ರಸ್ತೆಬದಿಗೆ ತೆರಳಿರುವ ಶಂಕೆ ವ್ಯಕ್ತವಾಗಿದೆ. ಹುಲಿಯನ್ನು ಸಮೀಪದ ಕಾಡಿಗೆ ಓಡಿಸಲು ಅರಣ್ಯ ಇಲಾಖೆಯಿಂದ ಕಾರ್ಯಾಚರಣೆ ನಡೆಸಲಾಗುತ್ತಿದೆ.

'ಡಿ' ಗ್ರೂಪ್ ನೌಕರನ ಮೇಲೆ ಹಲ್ಲೆ: ದೂರು ದಾಖಲು



ಶನಿವಾರಸಂತೆ ಆರೋಗ್ಯ ಕೇಂದ್ರದ ವೈದ್ಯರು ಹಾಗೂ ಸಿಬ್ಬಂದಿ ಕಪ್ಪುಪಟ್ಟಿ ಧರಿಸಿ ಆರೋಗ್ಯ ಕೇಂದ್ರದ ಎದುರು ಧರಣಿ ನಡೆಸಿದರು.

ಮಡಿಕೇರಿ, ಡಿ.18–ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರದ 'ಡಿ' ಗ್ರೂಪ್ ನೌಕರ ವಿಜಿತ್ ಮೇಲೆ ಕ್ಷುಲ್ಲಕ ಕಾರಣಕ್ಕಾಗಿ ಚಿಕ್ಕಕೊಳತೂರು ಗ್ರಾಮದ ಅರವಿಂದ್ ಹಲ್ಲೆ ನಡೆಸಿದ ಘಟನೆ ಮಂಗಳವಾರ ರಾತ್ರಿ ನಡೆದಿದೆ.

ಚಿಕ್ಕಕೊಳತೂರು ಗ್ರಾಮದ ಅರವಿಂದ್ ತಮ್ಮ ತಂದೆಯನ್ನು ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಗೆ ದಾಖಲಿಸಿದ್ದರು. ಅರವಿಂದ್ ತಂದೆ ಡಬ್ಬಕ್ಕೆ ಮಾಡಿದ್ದ ಮೂತ್ರವನ್ನು ಶೌಚಾಲಯಕ್ಕೆ ಸುರಿದು, ನೀರು ಹಾಕದೆ ಬಂದಿದ್ದರು. ನಾನು ನೀರು ಹಾಕುವಂತೆ ತಿಳಿಸಿದೆ. ಅದಕ್ಕಾಗಿ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು 'ಡಿ' ಗ್ರೂಪ್ ನೌಕರ ವಿಜಿತ್ ಎಂದು ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಅರವಿಂದ್ ವಿರುದ್ಧ ದೂರು ದಾಖಲಿಸಿದ್ದಾರೆ.

ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ: ಆಸ್ಪತ್ರೆಯ 'ಡಿ' ಗ್ರೂಪ್ ನೌಕರನ ಮೇಲೆ ಹಲ್ಲೆ ನಡೆಸಿರುವುದನ್ನು ಖಂಡಿಸಿ, ಬುಧವಾರ ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರದ ವೈದ್ಯರು ಹಾಗೂ ಸಿಬ್ಬಂದಿ ಕಪ್ಪುಪಟ್ಟಿ ಧರಿಸಿ ಆರೋಗ್ಯ ಕೇಂದ್ರದ ಎದುರು ಧರಣಿ ನಡೆಸಿದರು.

ಹಲ್ಲೆ ನಡೆಸಿದ ಆರೋಪಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯರು ಮತ್ತು ಸಿಬ್ಬಂದಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ದುಬಾರೆ ರ್‍ಯಾಫ್ಟಿಂಗ್ ಗೈಡ್ ಆತ್ಮಹತ್ಯೆ

ಕುಶಾಲನಗರ: ಸಮೀಪದ ನಂಜರಾಯಪಟ್ಟಣ ಬಳಿಯ ಪ್ರವಾಸಿ ತಾಣ ದುಬಾರೆಯ ರ್‍ಯಾಫ್ಟಿಂಗ್ ಗೈಡ್ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬುಧವಾರ ಸಂಜೆ ನಡೆದಿದೆ.

ಚಿಕ್ಕಬೆಟ್ಟಗೇರಿ ಗ್ರಾಮದ ದಿ.ಅಪ್ಪುಡ ಮುತ್ತಣ್ಣ ಅವರ ಪುತ್ರ ಪ್ರವೀಣ್ (ರಾಜಮಣಿ, (22) ಆತ್ಮಹತ್ಯೆ ಮಾಡಿಕೊಂಡಿದ್ದು, ಈತ ದುಬಾರೆಯಲ್ಲಿ ರ್‍ಯಾಫ್ಟಿಂಗ್ ಗೈಡ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಸಂಜೆ ತಮ್ಮ ಮನೆ ಸಮೀಪದ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿದ್ದಾರೆ. ಆದರೆ, ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಸ್ಥಳ ಪರಿಶೀಲಿಸಿದ ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಗಾಳಿಬೀಡು–ಕಾಲೂರು ಮುಖ್ಯರಸ್ತೆ ದುರಸ್ತಿಗೆ ಒತ್ತಾಯಿಸಿ ಗ್ರಾಮಸ್ಥರ ಪ್ರತಿಭಟನೆ



ಗಾಳಿಬೀಡು–ಕಾಲೂರು ಮುಖ್ಯರಸ್ತೆ ದುರಸ್ತಿಗೊಳಿಸುವಂತೆ ಒತ್ತಾಯಿಸಿ ವಿವಿಧ ಗ್ರಾಮಸ್ಥರು ಗಾಳಿಬೀಡುವಿನ 3ನೇ ಮೈಲಿನಲ್ಲಿ ಪ್ರತಿಭಟನೆ ನಡೆಸಿದರು.

ಮಡಿಕೇರಿ, ಡಿ.18–ಸಂಪೂರ್ಣವಾಗಿ ಗುಂಡಿ ಬಿದ್ದಿರುವ ಗಾಳಿಬೀಡು–ಕಾಲೂರು ಮುಖ್ಯರಸ್ತೆಯನ್ನು ತಕ್ಷಣ ದುರಸ್ತಿಗೊಳಿಸುವಂತೆ ಒತ್ತಾಯಿಸಿ ವಿವಿಧ ಗ್ರಾಮಸ್ಥರು ಗಾಳಿಬೀಡು ರಸ್ತೆಯ 3ನೇ ಮೈಲಿನಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನಡೆಸಿದ ಗಾಳಿಬೀಡು, ಕೋಳಿಗೂಡು, ವಣಚಲು, ಕಾಲೂರು, ಕೂಟುಹೊಳೆ, ಕೆನಿಡುಗಣೆ ಹಾಗೂ ಹೆಬ್ಬೆಟ್ಟಗೇರಿ ಗ್ರಾಮಸ್ಥರು, ಸರ್ಕಾರ, ಜಿಲ್ಲಾಡಳಿತ ಹಾಗೂ ಲೋಕೋಪಯೋಗಿ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 15 ವರ್ಷಗಳಿಂದ ಗುಂಡಿ ಬಿದ್ದಿರುವ ಈ ರಸ್ತೆಯನ್ನು ದುರಸ್ತಿ ಮಾಡುವಂತೆ ಸರ್ಕಾರ, ಜಿಲ್ಲಾಡಳಿತ, ಶಾಸಕರು ಹಾಗೂ ಸಂಬಂಧಿಸಿದ ಇಲಾಖೆಗಳಿಗೆ ಹಲವು ಮನವಿ ಸಲ್ಲಿಸಿದ್ದೇವೆ. ಆದರೂ ಸೂಕ್ತ ಸ್ಪಂದನೆ ದೊರೆತ್ತಿಲ್ಲ. ಇದೀಗ ತೇಪೆ ಹಚ್ಚುವ ಕೆಲಸ ಮಾಡಲಾಗುತ್ತಿದ್ದು, ಇದನ್ನು ಕೈಬಿಟ್ಟು ತಕ್ಷಣ ರಸ್ತೆಯನ್ನು ಸಂಪೂರ್ಣವಾಗಿ ಸರಿಪಡಿಸಬೇಕು ಎಂದು ಪಟ್ಟುಹಿಡಿದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಿರೀಶ್ ಅವರನ್ನು ಪ್ರತಿಭಟನಾಕಾರರು ತರಾಟೆಗೆ ತೆಗೆದುಕೊಂಡರು. ಕಳಪೆ ಕಾಮಗಾರಿ ಮೂಲಕ ರಸ್ತೆ ಗುಂಡಿ ಮುಚ್ಚಲಾಗುತ್ತಿದೆ. ನೂತನ ರಸ್ತೆ ನಿರ್ಮಿಸಬೇಕು ಎಂದು ಆಗ್ರಹಿಸಿದರು. ಈ ರಸ್ತೆ ಮೂಲಕವೇ ಪ್ರಾಸೋದ್ಯಮ ತಾಣಗಳಿಗೆ ದಿನನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಸರ್ಕಾರಕ್ಕೂ ಇದರಿಂದ ಉತ್ತಮ ಆದಾಯ ಲಭಿಸುತ್ತಿದೆ. ಹೀಗಿದ್ದರೂ ರಸ್ತೆ ಅಭಿವೃದ್ಧಿಗೆ ಮೀನಮೇಷ ಎಣಿಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಇಂಜಿನಿಯರ್ ಗಿರೀಶ್, ಮಡಿಕೇರಿ ಕ್ಷೇತ್ರದ ರಸ್ತೆ ಅಭಿವೃದ್ಧಿಗೆ ಶಾಸಕರು 7.5 ಕೋಟಿ ರೂ. ಅನುದಾನ ಮೀಸಲಿಟ್ಟಿದ್ದಾರೆ. ಈ ಮೊತ್ತದಲ್ಲಿ ಮಡಿಕೇರಿ–ಕಡಮಕಲ್ಲು–ಸುಬ್ರಮಣ್ಯ ರಸ್ತೆಯ 4 ಕಿ.ಮೀ ಅನ್ನು 1.50 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ, 1 ಕಿ.ಮೀ ಮರುರಸ್ತೆ ನಿರ್ಮಾಣ ಮತ್ತು 3 ಕಿ.ಮೀ. ರಸ್ತೆಯನ್ನು ದುರಸ್ತಿಗೊಳಿಸುವುದಾಗಿ ಎಂದು ಭರವಸೆ ನೀಡಿದರು.

ಬಳಿಕ ಗ್ರಾಮಸ್ಥರು ಪ್ರತಿಭಟನೆ ಕೈಬಿಟ್ಟರು. ಪ್ರತಿಭಟನೆಯಲ್ಲಿ ವಿವಿಧ ಗ್ರಾಮಗಳ ಪ್ರಮುಖರಾದ ಕೆ.ಕೆ.ಧರ್ಮಾವತಿ, ಡೀನ್ ಬೋಪಣ್ಣ, ಪಾಂಡೀರ ಸುಬ್ರಮಣಿ, ಹರೀಶ ರೈ, ಶಿವಪ್ರಸಾದ್ ರೈ, ನವೀನ್ ದೇರಳ, ಯು.ಎಸ್.ಗಿರೀಶ್, ಯಾಲದಾಳು ರಾಜಶೇಖರ ಮತ್ತಿತರರು ಪಾಲ್ಗೊಂಡಿದ್ದರು.

ಹೆಜ್ಜಾಲ–ಚಾಮರಾಜನಗರ ರೈಲು ಮಾರ್ಗ ಆರಂಭಿಸಿ

ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣಗೆ ಸಂಸದ ಸುನೀಲ್ ಬೋಸ್ ಮನವಿ ಸಲ್ಲಿಕೆ



ರೈಲ್ವೆ ವಿದ್ಯುದ್ದೀಕರಣ ಕಾರ್ಯಕ್ಕೆ ಎನ್‌ಓಸಿ ನೀಡುವಂತೆ ಸಂಸದ ಸುನೀಲ್ ಬೋಸ್ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರ, ಡಿ.18–ಹೆಜ್ಜಾಲ–ಚಾಮರಾಜನಗರ ಹೊಸ ರೈಲು ಮಾರ್ಗ ಯೋಜನೆ ಆರಂಭಿಸಲು ಮತ್ತು ಮೈಸೂರು–ಚಾಮರಾಜನಗರ ನಡುವಿನ ರೈಲ್ವೆ ವಿದ್ಯುದ್ದೀಕರಣ ಕಾರ್ಯಕ್ಕೆ ಎನ್‌ಓಸಿ ನೀಡುವಂತೆ ಸಂಸದ ಸುನೀಲ್ ಬೋಸ್ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಬುಧವಾರ ಮನವಿ ಸಲ್ಲಿಸಿದರು.


ಕರ್ನಾಟಕದಲ್ಲಿ 142 ಕಿ.ಮೀ. ಹಾದುಹೋಗುವ ಹೆಜ್ಜಾಲ–ಚಾಮರಾಜನಗರ ಹೊಸ ರೈಲು ಮಾರ್ಗ ಯೋಜನೆ ಸ್ಥಗಿತಗೊಳಿಸಲಾಗಿದೆ. ಮೂಲತಃ ಬೆಂಗಳೂರು–ಸತ್ಯಮಂಗಲದ (260 ಕಿಮೀ) ನಡುವಿನ ಈ ಯೋಜನೆಯನ್ನು 1997–98ರಲ್ಲಿ ಮಂಜೂರು ಮಾಡಲಾಗಿತ್ತು. ಸತ್ಯಮಂಗಲ ಅರಣ್ಯ ಪ್ರದೇಶದಲ್ಲಿ ಯೋಜನೆ ಸಂಬಂಧ 2013–14ರಲ್ಲಿ ಸರ್ವೇ ನಡೆಸಲು ತಮಿಳುನಾಡು ಸರ್ಕಾರ ಹಾಗೂ ಕೇಂದ್ರ ಅಧಿಕಾರ ಸಮಿತಿ ಅನುಮತಿ ನೀಡಲಿಲ್ಲ.

ಮೊದಲಿಗೆ ಕೆಂಗೇರಿಯಿಂದ ಯೋಜನೆ ಆರಂಭಿಸಲು ಯೋಜಿಸಲಾಗಿತ್ತು. ಆದರೆ, ಅಂತಿಮ ಸ್ಥಳ ಸರ್ವೆಯಲ್ಲಿ ಅರಣ್ಯ ಭೂಮಿ ಇರುವುದನ್ನು ಗಮನಿಸಲಾಯಿತು. ಆದ್ದರಿಂದ ಅರಣ್ಯ ಭೂಮಿಯನ್ನು ತಪ್ಪಿಸಲು ಟೇಕ್ ಆಫ್ ನಿಲ್ದಾಣವನ್ನು ಹೆಜ್ಜಾಲಕ್ಕೆ ಸ್ಥಳಾಂತರಿಸಲಾಗಿದೆ. ಈ ಯೋಜನೆಯನ್ನು ಆದ್ಯತೆ ಮೇರೆಗೆ ಪರಿಗಣಿಸಿ, ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಮನವಿ ಮಾಡಿದರು.

ಅಲ್ಲದೆ, ಮೈಸೂರು–ಚಾಮರಾಜನಗರ ವಿಭಾಗದ ರೈಲ್ವೆ ವಿದ್ಯುದ್ಧೀಕರಣ ಕಾರ್ಯಕ್ಕೆ ಭಾರತ ವಿಮಾನ ನಿಲ್ದಾಣ ಪ್ರಾಧಿಕಾರದಿಂದ ನಿರಾಪೇಕ್ಷಣಾ ಪತ್ರ (ಎನ್‌ಓಸಿ) ಮಂಜೂರು ಮಾಡಿಸಬೇಕು. ಈ ಕಾರ್ಯವನ್ನು ಮೈಸೂರಿನ ನೈಋತ್ಯ ರೈಲ್ವೆ ವಿಭಾಗದ ಕೋರ್‌ಗೆ ನಿಯೋಜಿಸಲಾಗಿದೆ. ಎನ್‌ಓಸಿಗಾಗಿ ಭಾರತ ವಿಮಾನ ನಿಲ್ದಾಣ ಪ್ರಾಧಿಕಾರದ (ಎಎಐ) ವೆಬ್‌ಸೈಟ್‌ನಲ್ಲಿ ಮನವಿ ಸಲ್ಲಿಸಲಾಗಿದೆ. ವಿಮಾನ ನಿಲ್ದಾಣ ಪ್ರಾಧಿಕಾರದಿಂದ ವಿದ್ಯುದ್ಧೀಕರಣ ಕಾರ್ಯಕ್ಕೆ ಎನ್‌ಓಸಿ ಮಂಜೂರು ಮಾಡಿಸುವಂತೆ ಸಚಿವ ಸೋಮಣ್ಣ ಅವರಿಗೆ ಮನವಿ ಮಾಡಿದ್ದಾರೆ.

ರಾಜೀ ಸಂಧಾನ; 61,962 ಪ್ರಕರಣ ಇತ್ಯರ್ಥ

● ಜಿಲ್ಲೆಯ ನಾಲ್ಕು ತಾಲೂಕಿನಲ್ಲಿ ಮೆಗಾ ಲೋಕ್ ಅದಾಲತ್
● ಜಿಲ್ಲಾ ನ್ಯಾಯಾಧೀಶೆ ಬಿ.ಎಸ್.ಭಾರತಿ ಮಾಹಿತಿ



ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಬಿ.ಎಸ್.ಭಾರತಿ ಮಾತನಾಡಿದರು.

> 85 ವರ್ಷದ ಮಹಾದೇವಮ್ಮ ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ವರ್ಷಗಳ ಹಿಂದೆ ಹೂಡಲಾಗಿದ್ದ ಮೂಲ ದಾವೆ ಪ್ರಕರಣ ಒಮ್ಮತದಿಂದ ಲೋಕ್ ಅದಾಲತ್‌ನಲ್ಲಿ ತೀರ್ಮಾನವಾಗಿದೆ. ಇದು ಈ ಬಾರಿಯ ಅದಾಲತ್‌ನ ವಿಶೇಷ.
>
> –ಬಿ.ಎಸ್.ಭಾರತಿ, ಜಿಲ್ಲಾ ನ್ಯಾಯಾಧೀಶೆ

ಚಾಮರಾಜನಗರ, ಡಿ.18–ಸರ್ವರಿಗೂ ನ್ಯಾಯ ಎಂಬ ಪರಿಕಲ್ಪನೆಯಡಿ ಜನಸಾಮಾನ್ಯರ ಅನುಕೂಲಕ್ಕಾಗಿ ತ್ವರಿತವಾಗಿ ಪ್ರಕರಣಗಳು ಇತ್ಯರ್ಥವಾಗಬೇಕೆಂಬ ಉದ್ದೇಶದಿಂದ ಜಿಲ್ಲಾದ್ಯಂತ ಹಮ್ಮಿಕೊಂಡಿದ್ದ ಮೆಗಾ ಲೋಕ್ ಅದಾಲತ್‌ನಲ್ಲಿ ಒಟ್ಟು 61,962 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೆ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯ ಆವರಣದ ವ್ಯಾಜ್ಯ ಪೂರ್ವ ಪರಿಹಾರ ಕೇಂದ್ರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ದೇಶನದ ಮೇರೆಗೆ ಜಿಲ್ಲೆಯ ನಾಲ್ಕು ತಾಲೂಕಿನ ನ್ಯಾಯಾಲಯಗಳಲ್ಲಿ ಮೆಗಾ ಲೋಕ್ ಅದಾಲತ್ ನಡೆಸಲಾಗಿದೆ. ಎಲ್ಲಾ ಸಿವಿಲ್ ಹಾಗೂ ರಾಜಿಯಾಗಬಲ್ಲ ಕ್ರಿಮಿನಲ್ ಮತ್ತು ಇನ್ನಿತರ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಗೊಳಿಸಲಾಗಿದೆ ಎಂದರು.

ನ್ಯಾಯಾಲಯದ 1229 ಪ್ರಕರಣ, 60,463 ವ್ಯಾಜ್ಯ ಪೂರ್ವ ಪ್ರಕರಣ ಸೇರಿ ಒಟ್ಟು 61,692 ಪ್ರಕರಣಗಳು ಲೋಕ್ ಅದಾಲತ್‌ನಲ್ಲಿ ಬಗೆಹರಿಸಲಾಗಿದೆ ಚಾಮರಾಜನಗರ ತಾಲೂಕಿನಲ್ಲಿ 346 ನ್ಯಾಯಾಲಯ ಪ್ರಕರಣ, 40,342 ವ್ಯಾಜ್ಯ ಪೂರ್ವ ಪ್ರಕರಣ ಸೇರಿ 40,688 ಪ್ರಕರಣ, ಯಳಂದೂರು ತಾಲೂಕಿನಲ್ಲಿ 3864, ಕೊಳ್ಳೇಗಾಲ ತಾಲೂಕಿನಲ್ಲಿ 11,106 ಹಾಗೂ ಗುಂಡ್ಲುಪೇಟೆ ತಾಲೂಕಿನಲ್ಲಿ 60,034 ಪ್ರಕರಣಗಳು ಇತ್ಯರ್ಥಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ವರ್ಷದಲ್ಲಿ ಮಾರ್ಚ್ ಮತ್ತು ಜುಲೈ 13, ಸೆಪ್ಟೆಂಬರ್ ಹಾಗೂ ಡಿಸೆಂಬರ್ 14 ರಂದು ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ನಡೆದ ಲೋಕ್ ಅದಾಲತ್‌ಗಳಲ್ಲಿ ರಾಜೀಯೋಗ್ಯ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳ ಪಕ್ಷಕಾರರುಗಳು ನ್ಯಾಯಾಧೀಶರು, ವಕೀಲರು ಮತ್ತು ಸಂಧಾನಕಾರರ ಸಲಹೆ ಪಡೆದು 10 ರಿಂದ 15 ವರ್ಷಗಳಿಂದ ಬಾಕಿ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಂಡಿದ್ದಾರೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ ಮಾತನಾಡಿ, ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳಿಗೆ ಶೀಘ್ರಗತಿ ನ್ಯಾಯ ಒದಗಿಸುವುದು, ಸಮಯ, ಕೋರ್ಟ್ ಫೀ ಉಳಿತಾಯವಾಗುವಂತೆ ಮಾಡುವುದು ಲೋಕ್ ಅದಾಲತ್‌ನ ಉದ್ದೇಶವಾಗಿದೆ. ಅದಾಲತ್ ಯಶಸ್ಸಿಗೆ ನ್ಯಾಯಾಧೀಶರು, ವಕೀಲರು, ನ್ಯಾಯಾಲಯ ಸಿಬ್ಬಂದಿ, ಜಿಲ್ಲಾಡಳಿತ, ಜಿಪಂ, ಪೊಲೀಸ್, ಕಾರ್ಮಿಕ, ಅಬಕಾರಿ, ಕಂದಾಯ ಇಲಾಖೆ, ಬ್ಯಾಂಕ್‌ಗಳು, ಮಾಧ್ಯಮ ಪ್ರತಿನಿಧಿಗಳು ನೀಡಿದ ಸಹಕಾರ ಕಾರಣವಾಗಿದೆ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ನಂಜಯ್ಯ ಮಾತನಾಡಿ, ಲೋಕ್ ಅದಾಲತ್‌ನಲ್ಲಿ ರಾಜೀ ಸಂಧಾನದ ಮೂಲಕ ವ್ಯಾಜ್ಯಗಳನ್ನು ಬಗೆಹರಿಸಲು ವಕೀಲರು ಶ್ರಮವಹಿಸಿದ್ದಾರೆ. ಅದಾಲತ್‌ನಲ್ಲಿ ಪ್ರಕರಣಗಳು ಇತ್ಯರ್ಥಗೊಳ್ಳುವುದರಿಂದ ಕಕ್ಷಿದಾರರಲ್ಲಿ ಬಾಂಧವ್ಯ ಉಂಟಾಗಿ ಪ್ರೀತಿ, ವಿಶ್ವಾಸ, ನಂಬಿಕೆ ಉಳಿಯುತ್ತದೆ. ದ್ವೇಷ ಭಾವನೆ ಹೋಗುತ್ತದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ರಂಗಸ್ವಾಮಿ, ಜಂಟಿ ಕಾರ್ಯದರ್ಶಿ ಮೋಹನ್ ಜಗದೀಶ್ ಇದ್ದರು.

ಜಮೀನಿನಲ್ಲಿ ಸೇಂದಿ ತಯಾರಿಸುತ್ತಿದ್ದ ಇಬ್ಬರ ಬಂಧನ

● ಅಬಕಾರಿ ಪೋಲೀಸರ ದಾಳಿ ● 17 ಸಾವಿರ ಮೌಲ್ಯದ ಪರಿಕರ ಜಪ್ತಿ



ಸೇಂದಿ ತಯಾರಿಕಾ ಘಟಕದ ಮೇಲೆ ದಾಳಿ ನಡೆಸಿದ ಅಬಕಾರಿ ಪೊಲೀಸರು, ಸೇಂದಿ ಹಾಗೂ ತಯಾರಿಕ ಪರಿಕರಗಳನ್ನು ವಶಪಡಿಸಿ ಕೊಂಡಿರುವುದು.

ಚಾಮರಾಜನಗರ: ರಾಸಾಯನಿಕ ಬಳಕೆ ಮಾಡಿ ಸೇಂದಿ ತಯಾರಿಸಿ, ಮಾರಾಟ ಮಾಡುತ್ತಿದ್ದ ಜಾಲವನ್ನು ಬೇಧಿಸಿರುವ ಅಬಕಾರಿ ಪೊಲೀಸರು, ಇಬ್ಬರನ್ನು ಬಂಧಿಸಿ, 335 ಲೀಟರ್ ಸೇಂದಿ ಹಾಗೂ ತಯಾರಿಕ ಪರಿಕರಗಳನ್ನು ಜಪ್ತಿ ಮಾಡಿದ್ದಾರೆ.

ತಾಲೂಕಿನ ನವಿಲೂರು ಗ್ರಾಮದ ಎಸ್. ಸಿದ್ದಮಲ್ಲಿಕಾರ್ಜುನಸ್ವಾಮಿ ಅಲಿಯಾಸ್ ಸೋಮಣ್ಣ (71) ಹಾಗೂ ತಮಿಳುನಾಡು ಮೂಲದ ಪಳಿಯೂರು ಗ್ರಾಮದ ಪೆರಿಯಾಸ್ವಾಮಿ (55) ಬಂಧಿತರು.

ಸೋಮಣ್ಣ ಅವರ ಜಮೀನಿನಲ್ಲಿ ಪೆರಿಯಾಸ್ವಾಮಿ ರಾಸಾಯನಿಕ ಬಳಕೆ ಮಾಡಿ ಸೇಂದಿ ತಯಾರಿಸಿ, ಮಾರಾಟ ಮಾಡುತ್ತಿದ್ದರು. ಅಬಕಾರಿ ಪೊಲೀಸರು ದಾಳಿ ನಡೆಸಿ, ಇಬ್ಬರನ್ನು ಬಂಧಿಸಿ, 17 ಸಾವಿರ ರೂ. ಮೌಲ್ಯದ ಸೇಂದಿ ಸಂಗ್ರಹಿಸಿ ಹಾಗೂ ಪರಿಕರಗಳನ್ನು ವಶಪಡಿಸಿಕೊಂಡಿದ್ದಾರೆ.

ಅಬಕಾರಿ ಉಪಅಧೀಕ್ಷಕ ವಿಜಯ ಕುಮಾರ್ ಮಾರ್ಗದರ್ಶನದಲ್ಲಿ ಚಾ.ನಗರ ವಲಯ ಅಬಕಾರಿ ಇನ್ಸ್‌ಪೆಕ್ಟರ್‌ಗಳಾದ ಮಹದೇವ್, ಉಮಾಶಂಕರ್, ಸುರೇಶ್, ಸಬ್ ಇನ್ಸ್‌ಪೆಕ್ಟರ್ ನಂದಿನಿ ಮತ್ತು ಸಿಬ್ಬಂದಿ ದಾಳಿ ನಡೆಸಿದ್ದಾರೆ.

ಇಂದು ಹರವೆ ಶಾಖಾ ಮಠ ಉದ್ಘಾಟನೆ



ಸರ್ಪಭೂಷಣ ಸ್ವಾಮೀಜಿ

ಚಾಮರಾಜನಗರ: ಜಿಲ್ಲಾ ಕೇಂದ್ರದಲ್ಲಿ ಗುರುವಾರ(ಡಿ.19) ಹರವೆ ಶಾಖಾ ಮಠ ಉದ್ಘಾಟನೆ, ಶ್ರೀಮಠದಲ್ಲಿ ವಿದ್ಯಾರ್ಥಿನಿಲಯ ನಿರ್ಮಾಣಕ್ಕೆ ಶಂಕುಸ್ಥಾಪನೆ, ಧಾನ್ಯ, ಯೋಗ ಹಾಗೂ ಆಧ್ಯಾತ್ಮಿಕ ಕಾರ್ಯಕ್ರಮ ನಡೆಯಲಿದೆ ಎಂದು ಹರವೆ ವಿರಕ್ತ ಮಠಾಧ್ಯಕ್ಷ ಶ್ರೀ ಸರ್ಪಭೂಷಣಸ್ವಾಮೀಜಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಕೇಂದ್ರದಲ್ಲೂ ಸೇವೆ ವಿಸ್ತರಣೆಯಾಗಬೇಕೆಂಬ ಉದ್ದೇಶದಿಂದ ಉತ್ತುವಳ್ಳಿ– ಮೂಡ್ಲುಪುರ ಮಾರ್ಗದಲ್ಲಿ ಹರವೆ ಶಾಖಾ ಮಠ ನಿರ್ಮಿಸಲಾಗಿದೆ. ಸುತ್ತೂರು ಶ್ರೀಗಳು, ಸಿದ್ದಗಂಗಾ ಶ್ರೀಗಳು, ಕನಕಪುರ ಶ್ರೀಗಳು ಸೇರಿದಂತೆ ವಿವಿಧ ಹರಗುರು ಚರಮೂರ್ತಿಗಳು ಮಠವನ್ನು ಉದ್ಘಾಟಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ಶಾಸಕರು, ಸಂಸದರು, ಮಾಜಿ ಶಾಸಕರು, ಸ್ಥಳೀಯ ಜನಪ್ರತಿನಿಧಿಗಳು ಭಾಗವಹಿಲಿದ್ದಾರೆ. ತಾಲೂಕಿನ ಹರವೆ ಗ್ರಾಮದ ವಿರಕ್ತ ಮಠ ಸುಮಾರು 400 ವರ್ಷಗಳ ಇತಿಹಾಸ ಹೊಂದಿದೆ ಈ ಮಠದ ಮೂಲ ಗುರುಗಳಾದ ಶ್ರೀ ಚನ್ನಬಸವಸ್ವಾಮೀಜಿ ಗ್ರಾಮದ ಜನರಲ್ಲಿ ಧರ್ಮ ಜಾಗೃತಿ ಮೂಡಿಸಿ, ಶರಣರ ತತ್ವವನ್ನು ಸಾರಿದರು ಎಂದು ತಿಳಿಸಿದರು.

ನಿರ್ಮಿತಿ ಕೇಂದ್ರದಲ್ಲಿ ಇ–ಆಫೀಸ್‌ಗೆ ಚಾಲನೆ



ಮಂಗಲ ಗ್ರಾಮದ ನಿರ್ಮಿತಿ ಕೇಂದ್ರದಲ್ಲಿ ಕಂಪ್ಯೂಟರ್ ಬಟನ್ ಒತ್ತುವ ಮೂಲಕ ಇ–ಆಫೀಸ್ ತಂತ್ರಾಂಶ ವ್ಯವಸ್ಥೆಗೆ ಡಿಸಿ ಶಿಲ್ಪನಾಗ್ ಚಾಲನೆ ನೀಡಿದರು.

ಚಾಮರಾಜನಗರ, ಡಿ.18–ಸರ್ಕಾರಿ ಕಚೇರಿಗಳಲ್ಲಿ ಇ–ಆಫೀಸ್ ತಂತ್ರಾಂಶ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ನಿರ್ಮಿತಿ ಕೇಂದ್ರದಲ್ಲಿ ಇ–ಆಫೀಸ್ ತಂತ್ರಾಂಶಕ್ಕೆ ಬುಧವಾರ ಚಾಲನೆ ನೀಡಲಾಯಿತು.

ತಾಲೂಕಿನ ಮಂಗಲ ಗ್ರಾಮದ ನಿರ್ಮಿತಿ ಕೇಂದ್ರದಲ್ಲಿ ಕಂಪ್ಯೂಟರ್ ಬಟನ್ ಒತ್ತುವ ಮೂಲಕ ಇ–ಆಫೀಸ್ ತಂತ್ರಾಂಶ ವ್ಯವಸ್ಥೆಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಚಾಲನೆ ನೀಡಿದರು.

ನಂತರ ಮಾತನಾಡಿದ ಶಿಲ್ಪಾನಾಗ್, ಸರ್ಕಾರಿ ಕಚೇರಿ ಕೆಲಸ–ಕಾರ್ಯಗಳಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಎಲ್ಲಾ ಕಚೇರಿಗಳಲ್ಲಿ ಇ–ಆಫೀಸ್ ತಂತ್ರಾಂಶ ಅಳವಡಿಸಲಾಗುತ್ತಿದೆ. ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಇ–ಆಫೀಸ್ ಅಳವಡಿಕೆಯಲ್ಲಿ ಚಾಮರಾಜನಗರ ಜಿಲ್ಲೆ ಮುಂಚೂಣಿಯಲ್ಲಿದೆ. ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಹಾಗೂ ತಹಸೀಲ್ದಾರ್ ಕಚೇರಿಗಳಲ್ಲಿ ಈ ವ್ಯವಸ್ಥೆ ಜಾರಿಯಲ್ಲಿದೆ. ಜಿಲ್ಲೆಯ ಎಲ್ಲಾ 16 ನಾಡಕಚೇರಿಗಳಲ್ಲೂ ಇ–ಆಫೀಸ್ ತಂತ್ರಾಂಶವನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗಿದೆ ಎಂದರು.

ಇ–ಆಫೀಸ್ ತಂತ್ರಾಂಶ ಅನುಷ್ಠಾನದಿಂದ ಜನಸಾಮಾನ್ಯರು ಸೌಲಭ್ಯಕ್ಕೆ ಸಲ್ಲಿಸಿದ ಅರ್ಜಿ ಸಂಬಂಧಿಸಿದ ಕಡತ ಯಾವ ಹಂತದಲ್ಲಿ ಬಾಕಿ ಇದೆ. ವಿಲೇವಾರಿಗೆ ಎಷ್ಟು ದಿನದಿಂದ ಬಾಕಿ ಇದೆ ಎಂಬುದು ತಿಳಿಯಲಿದೆ. ಸಂಸದರು ಹಾಗೂ ಶಾಸಕರ ಅನುದಾನದಡಿಯ ಕಾಮಗಾರಿ, ಮೂರನೇ ವ್ಯಕ್ತಿಯಿಂದ ಕಾಮಗಾರಿ ಪರಿಶೀಲನೆ, ಇತರೆ ವರದಿಗಳನ್ನು ಟ್ರ್ಯಾಕ್ ಮಾಡಲು ಅನುಕೂಲವಾಗಲಿದೆ. ಇದರಿಂದ ಆಡಳಿತದಲ್ಲಿ ಸುಧಾರಣೆ ಕಾಣಲಿದೆ ಎಂದರು.

ಇದೇ ವೇಳೆ ಜಿಲ್ಲಾಧಿಕಾರಿ ಕಚೇರಿಯ ಜಿಲ್ಲಾ ಇ–ಆಡಳಿತ ಸಮಾಲೋಚಕ ಮಧುಕೇಶ್, ತಂತ್ರಾಂಶ ವ್ಯವಸ್ಥೆಯ ಅನುಷ್ಠಾನ ಕುರಿತು ನಿರ್ಮಿತಿ ಕೇಂದ್ರದ ಅಧಿಕಾರಿಗಳು, ಸಿಬ್ಬಂದಿಗೆ ಮಾಹಿತಿಯನ್ನು ಪವರ್ ಪಾಯಿಂಟ್ ಮೂಲಕ ವಿವರಿಸಿದರು. ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕಿ ಮಂಜುಳಾ, ಉಪವ್ಯವಸ್ಥಾಪಕರಾದ ವೃಷಭೇಂದ್ರ, ರವಿಕುಮಾರ್ ಇತರರು ಇದ್ದರು.

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಗ್ರಾಪಂ ಜಿಲ್ಲಾ ನೌಕರರ ಸಂಘದಿಂದ ಜಿಲ್ಲಾಧಿಕಾರಿ ಎದುರು ಪ್ರತಿಭಟನೆ ನಡೆಯಿತು.

ಚಾಮರಾಜನಗರ, ಡಿ.18–ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಗ್ರಾಮ ಪಂಚಾಯಿತಿ ಜಿಲ್ಲಾ ನೌಕರರ ಸಂಘ ಸಿಐಟಿಯು ನೇತೃತ್ವದಲ್ಲಿ ನಗರದ ಜಿಲ್ಲಾಧಿಕಾರಿ ಎದುರು ಬುಧವಾರ ಪ್ರತಿಭಟನೆ ನಡೆಸಿತು.

ಸಂಘದ ಅಧ್ಯಕ್ಷ ಸಿದ್ದರಾಜು ಮಾತನಾಡಿ, ಗ್ರಾಪಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕರವಸುಲಿಗಾರ, ಕ್ಲರ್ಕ್, ಡಾಟಾ ಎಂಟ್ರಿ ಆಪರೇಟರ್, ನೀರುಗಂಟಿ, ಜವಾನ, ಸ್ವಚ್ಛತಾಗಾರರ ಸೇವಾ ಹಿರಿತನ ಪರಿಗಣಿಸಿ ವೇತನ ಹೆಚ್ಚಳ ಮಾಡಬೇಕು. ಐಪಿಡಿ ಸಾಳಪ್ಪ ವರದಿಯಂತೆ ಸ್ವಚ್ಛತೆಗಾರರ ನೇಮಕವಾಗಬೇಕು. ನೌಕರರಿಗೆ ಆಸ್ಪತ್ರೆ ವೆಚ್ಚ ಭರಿಸಬೇಕು ಎಂದು ಒತ್ತಾಯಿಸಿದರು.

ನಂತರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಸಂಘದ ಉಪಾಧ್ಯಕ್ಷರಾದ ಮಲ್ಲು, ಆರ್ಮುಗಂ ಹೊನ್ನೂರು, ಪ್ರಧಾನ ಕಾರ್ಯದರ್ಶಿ ಸುರೇಶ್ ಅಮ್ಮನಪುರ, ಖಜಾಂಚಿ ದೊರೆಸ್ವಾಮಿ, ಪತ್ರಿಕಾ ಕಾರ್ಯದರ್ಶಿ ಕೃಷ್ಣನಾಯಕ, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ರಾಜಣ್ಣ, ಯಳಂದೂರು ತಾಲೂಕು ಅಧ್ಯಕ್ಷೆ ಹೊನ್ನೂರು ಮಹದೇವಮ್ಮ, ಚಾಮರಾಜನಗರ ತಾಲೂಕು ಅಧ್ಯಕ್ಷ ಕೃಷ್ಣ, ಮುಖಂಡರಾದ ರಾಧಾಕೃಷ್ಣ, ವೈ.ಕೆ.ಪಳನಿ ಮಾದಾಪುರ ರಂಗಸ್ವಾಮಿ, ಸರಗೂರು ಅವಾಸ ಇತರರು ಭಾಗವಹಿಸಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
We are seeking a young and sincere **Female Graduate or Staff Nurse** to join our Skin & Hair Clinic in JP Nagar, Mysore. Salary: ₹20,000+
Send your resume via WhatsApp to 6366345111 or 8310091538

ವೆರಿಕೋಸ್ ವೇನ್ಸ್ ತೊಂದರೆಯೇ? ಮಂಡಿ ನೋವಿನ ಸಮಸ್ಯೆಯೇ ?
ತಜ್ಞರಿಂದ ಸಂಶೋಧಿಸಿದ ಔಷಧಿ/ಮುಲಾಮು ಮತ್ತು ತೈಲವನ್ನು ಮೇಲೆ ಮಸಾಜ್ ಮಾಡುವ ಮೂಲಕ ಪರಿಣಾಮಕಾರಿ ಚಿಕಿತ್ಸೆಯನ್ನು ನೀಡಲಾಗುವುದು.
ಡಾ|| ಸಹನಾ ವಿ., BAMS, PGDAC, PGDAM ಮೈಸೂರು
M: 8861137033

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

WANTED
North - West Corner Site in Mysore City.
Contact:
8884001233, 9620546347

WANTED
ACCOUNTANT AND OFFICE WORK
QUALIFICATION: B.COM, BBM, SKILLS: TALLY, M.S OFFICE
WHATSAPP YOUR RESUME:
7090399319,7204959799

MUDA APPROVED SITE FOR SALE
Vajamangala, Nagawala, Hunsuru, Devagalli, Uttanahalli
Contact no:
8884001233 / 9620546347

BUNGALOW for SALE at NIVEDITANAGAR
4 Bedroom Duplex, 50x60, MUDA, East Facing,12 years Old, PRICE - 2.98 CR,
Behind Bharath Petrol Bunk
Contact Owner. Brokers Excuse
8296493739

1BHK HOUSE
JUST 3KM to City Center
ಪೂರ್ವ–ಉತ್ತರ ದಿಕ್ಕು
ಬಾಡಿಗೆ–4500/–, ಭೋಗ್ಯ–4,50,000/– ಜಾಕಿಪ್ಲಾಟ್ಸ್ ಸರ್ಕಲ್ ಹತ್ತಿರ ಲಭ್ಯವಿದೆ ಹಾಗೂ 30x40 ಸೈಟ್ ವಿದ್ಯಾವಿಕಾಸ ಹತ್ತಿರ ಮಾರಾಟಕ್ಕಿದೆ. ಸಂಪರ್ಕಿಸಿ
8123075038

BAR PARTNERSHIP
ಕ್ಲೈಂಟ್‌ಗಳಲ್ಲಿ ಒಬ್ಬರು ಬಾರ್ ಮತ್ತು ರೆಸ್ಟೋರೆಂಟ್ (ಗುತ್ತಿಗೆ/ಬಾಡಿಗೆ/ಪಾಲುದಾರಿಕೆ) ನಡೆಸಲು ಪಾಲುದಾರಿಕೆಯನ್ನು ಹುಡುಕುತ್ತಿದ್ದಾರೆ. ಈ ವ್ಯವಹಾರ ಕ್ಷೇತ್ರದಲ್ಲಿ ಉತ್ತಮ ಜ್ಞಾನ ಹೊಂದಿರುವವರು ದಯವಿಟ್ಟು
ಸಂಪರ್ಕಿಸಿ: **9738787333**

MAHENDRA DEVELOPERS
is looking for a Dynamic and dedicated persons for
MARKETING EXECUTIVES - 2
SITE ENGINEERS - 2
COOK - 1. Contact:
8884001233, 9620546347

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪು ನಗರದಿಂದ ಕೇವಲ 6 ಕಿಲೋಮೀಟರ್ ದೂರದಲ್ಲಿರುವ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
ಸಂಪರ್ಕಿಸಿ: ಡಾ.ಗುರುಪ್ರಸಾದ್
9036284426

ಆಫೀಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಜೆ.ಪಿ. ನಗರದಲ್ಲಿ
9449089231

SITE FOR SALE
30x50, West face (Alliance Cerene) Mysore-Bannur Road, Vajamangala. Price is 3500 per sq.ft.
7975298494, 9844545718

WANTED
Reputed Debt Collections Company looking for Field Officer and Team Leaders for Mysore & Mandya location.
Call **8073540993**
HR **8660710505**

NYPUNYA SCHOOL OF EXCELLENCE
DATTAGALLI/R.T.NAGAR
Job Openings :
- Senior Accountant: (M.Com)-Minimum 5 years of experience in accounting and advanced MS Excel skills. Strong knowledge of Indian tax regulations, including GST, TDS, and other statutory compliance.
- Drawing and art teacher (MFA, BFA)
- IMTC/AMI-trained Montessori teachers

Interested candidates can send their resume to: hrnse@nypunyaschool.education
CONTACT : **9110851597**

SITE FOR SALE
30X50 WEST FACING PRICE – 63 LAKHS
3 BHK HOME–99 LAKHS PLACE : NEAR INFOSYS
MUDA APPROVALS 90% LOAN AVAILABLE
Ph: 9538003006

ತಕ್ಷಣ ಬೇಕಾಗಿದ್ದಾರೆ
Age (18-24) 10th, PUC BBM ಯಾದ Management Trainee ಗಳಾಗಿ *No Fee* Earn (8900/-ರಿಂದ 18500/-pm Only Freshers Meet Us Today Join Tommorrow ಮೈಸೂರು & ರಾಮನಗರ ವಿಭಾಗಕ್ಕೆ
Callus:
9342827788

ಕೆಲಸ ಖಾಲಿ ಇದೆ
ಮೈಸೂರು & ಬೆಂಗಳೂರಿನಲ್ಲಿರುವ ಕಂಪನಿ ಮತ್ತು ಆಫೀಸ್ ಕೆಲಸಗಳಿಗೆ 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್/ ಫೇಲ್ ಆದಂತಹ ಯುವಕ ಯುವತಿಯರಿಗೆ ಊಟ ವಸತಿ ಯೊಂದಿಗೆ ಸಂಬಳ+ಓಟಿ 18,000/- 25000/-. ಸಂಪರ್ಕಿಸಿ:
9572825533
9148933004

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

REQUIRED ACCOUNTANT
Fresher & Experienced For Auditor Office, 3rdf Stage, Vijayanagar, Mysore
Call: 9448642132

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Aniketana Road, Kuvempunagar, Mysuru
MYSURU 9611028523 BANGALORE 9343142258

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ ಹುಡುಗಿಯರು ಬೇಕಾಗಿದ್ದಾರೆ ವಿದ್ಯಾರ್ಹತೆ, ITI, 8th TO 2nd PUC ವರೆಗೆ ಊಟ ವಸತಿ ESI PF ಮತ್ತು ವಾಹನ ಸೌಲಭ್ಯ ಇರುತ್ತದೆ ಸಂಬಳ 11500 ರಿಂದ 18000 ಇರುತ್ತದೆ ಮತ್ತು ಹೌಸ್ ಕೀಪಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
Ph-8951869646 / 9902645646

SITE FOR SALE
40x60 Dattagalli
30x40
Judicial Layout
9740088990

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಯಲ್ಲಿ Helper ಕೆಲಸಕ್ಕೆ SSLC PUC/ITI ಮಾಡಿರುವ ಯುವಕರು ಬೇಕಾಗಿದ್ದಾರೆ. ಊಟ, ESI, PF ಸೌಲಭ್ಯವಿದೆ. ಸಂಪರ್ಕಿಸಿ:
Ph-9945537353 / 7204642920

7 BHK (G+2) HOUSE FOR RENT
Suitable for :
PLAYHOME, DIAGNOSTICS NURSING HOME, BANK, etc.
Bogadhi 2nd Stage, Opp Nirmithi Kendra, MYSORE
Ph : 9845377292

SITE FOR SALE
N/E Corner 60x70 Suvarna Nagara Bhogadi Road
8050821108

WANTED
A Reputed Lodge in the heart of the city is looking for a **Receptionist Role.** Those having previous experience & freshers also can apply. (having Computer & hotel Industry knowledge preferred.
9663427888 / 9663747452

ತಕ್ಷಣವೇ ಬೇಕಾಗಿದ್ದಾರೆ
ಸೀನಿಯರ್ ಆರ್ಕಿಟೆಕ್ಟ್
ಎಕ್ಸ್‌ಪೀರಿಯನ್ಸ್ 9 – 12 ವರ್ಷ
ವಿದ್ಯಾರ್ಹತೆ: BE Civil or B.Architecture ಮಾಡಲು ಬಂದವರಿಗೆ ಆದ್ಯತೆ. ಸಂಪರ್ಕಿಸಿ:
9035010467 / 8073882830

ಬೇಕಾಗಿದ್ದಾರೆ
MARUTHI SUZUKI ARENA AND TATA MOTORS CAR SHOWROOM ಗಳಿಗೆ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (*ಸಂಬಳ: 18000 Rs ಇಂದ 30000 Rs + ಇನ್ಸೆಂಟಿವ್ಸ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ.
9535849148, 7411273440

WANTED
- Architects (Exp & Fresher)
- Civil Engineers (M.Tech, BE/Dip)
- QC Enginers (BE/Dip)
- Structural Engineers (M.Tech, BE)

CADD FORUM
195/B,17th Main, 13th Cross, Saraswathipuram, Mysore-09
9916266181 / 9945621188



SUNZONE SOLAR SYSTEM
VM Double Road, Kuvempunagar, Mysuru
9845175443

HOUSE FOR RENT
3 BHK, 2 BR with all amenities, 1st Floor, behind Secure Hospital, (Old Sita Ranga) Preferably official families (Brokers Excuse)
M: 9482262730

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7996497954

CHANGE OF NAME
I V. Chandrakala, W/o Late Sri Arvind, residing at No/ 1191, 8th Cross, Kurubageri, Lashkar Mohalla, Mysore-570001, have changed my name from Rashmi to V. Chandrakala on my own free will sworn in before Notary C.R. Seetharam, Mysore vide affidavit dated 16.12.2024.
Sd/- V. Chandrakala

ನಿವೃತ್ತ ಅಧಿಕಾರಿಗಳಿಗೆ ಉದ್ಯೋಗ
ವಿದ್ಯಾರ್ಹತೆ: ಯಾವುದೇ ಪದವಿ
ವೇತನ ರೂ. 30000/– ಮತ್ತು ಇತರೆ ಭತ್ಯೆಗಳು
ಸಂದರ್ಶನಕ್ಕೆ ಹಾಜರುಪಡಿಸಬೇಕಾದ ದಾಖಲೆಗಳು
1)ಪದವಿ ಅಂಕಪಟ್ಟಿ 2) ಆಧಾರ್ ಕಾರ್ಡ್ 3) ಪಾನ್ ಕಾರ್ಡ್ 4) ಬ್ಯಾಂಕ್ ಪಾಸ್ ಪುಸ್ತಕ 5) ಪಾಸ್‌ಪೋರ್ಟ್ ಅಳತೆ ಭಾವಚಿತ್ರ
ಸಂಪರ್ಕಿಸಿ: **9886647852**

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ಜೊತೆಗೆ ಊಟ, ವಸತಿಯೊಂದಿಗೆ ಸಂಬಳ – ಟಿ.ಟಿ. 15200 – 36,100
7337645977, 7892046990

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

HOUSE FOR RENT
2 BHK (Site 30x50 Dimension)
A/2-04. Murthy Nilaya, AIISH Layout, Bogadi (South) Mysuru - 570 026. Vegetarians Only, Brokers Excuse
8884565185 /8073290552

ಸೋಲಾರ್ ವಾಟರ್ ಹೀಟರ್
Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
ಹುಣಸೂರು ಮತ್ತು ಕಟ್ಟೆಮಳಲವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ಉತ್ತಮ ಸಂಬಳದೊಂದಿಗೆ
ವಿದ್ಯಾರ್ಹತೆ: S.S.L.C ಮೇಲ್ಪಟ್ಟು
ESI ಮತ್ತು PF ಸೌಲಭ್ಯವಿರುತ್ತದೆ.
ಸಂಪರ್ಕಿಸಬೇಕಾದ ಸಂಖ್ಯೆಗಳು
9620667819 / 8431936140

WANTED
ಫರ್ನಿಷಿಂಗ್ ಅಂಗಡಿಯಲ್ಲಿ
MAINTENANCE & ACCOUNTANT
Minimum 1 yr experience
Qualification 2nd year PUC
ಕೆಲಸಕ್ಕೆ ಬೇಕಾಗಿದ್ದಾರೆ
Salary: 12k to 15k,Time : 10AM to 9PM
Address:Akbar Road, Near Ashoka Road,
Phone: 9916514950

SK Construction
ಹೊಸ ಮನೆ ಕಟ್ಟಿಸಬೇಕೇ, ಚಿಂತೆ ಬೇಡ
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿಕೊಡುತ್ತೇವೆ.
Phone: 9620528490

WANTED
For Delivery ಮೈಸೂರು, ಶ್ರೀರಂಗಪಟ್ಟಣ, ಹುಣಸೂರು, HD ಕೋಟೆ
Job Role: Delivery Executive(Delivery Boy)
ಸಂಬಳ ವಾರಕ್ಕೆ ಪಾವತಿ & ಪರ್ ಶಿಪ್‌ಮೆಂಟ್ ಪಾವತಿ
15,000 –25,000 ರೂ. ಪೆಟ್ರೋಲ್ ಭತ್ಯೆ, ಮೊಬೈಲ್ ರೀಚಾರ್ಜ್+ ESI & PF ಸೌಲಭ್ಯಗಳು.
ಅಗತ್ಯ : ಬೈಕ್ ಮತ್ತು ಸ್ಮಾರ್ಟ್ ಮೊಬೈಲ್
HURRY UP & JOIN TODAY
8073831098/9742293343

SITES FOR SALE
JP Nagar Ring Road
30x40, 34 Lakhs
Near Gurur Bus Stop, Ramabainagar,Mysore.
(Corporation limits with E Katha)
DTCP approved 1.5 Kms from JP Nagar Ring Road
8660105902

SITE FOR SALE
MUDA APPROVED
Bogadi Pattana Panchayat, E Katha
40x52
MS Ramaiah Layout, Behind Vijaya Nagar 4th Stage.
Price: 4250/- per Sqft.,
9019746369

S S International Tours and Travels
Group Tour
4N-5DAYS
VARANASI(Kashi) AYODHYA GAYA BODHGAYA – 33,900/-
January : 02nd, 16th, 23rd, 31st
February :03rd, 13th, 20th,27th
March : 03rd, 13th, 20th, 28th
6362673241 |8296964112
Vivekananda Circle, Mysore

ತಕ್ಷಣ ಬೇಕಾಗಿದ್ದಾರೆ
ತಿ.ನರಸೀಪುರ ರಸ್ತೆ ಹಾಗೂ ಮೇಟಗಳ್ಳಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
8660309477

ಬೇಕಾಗಿದ್ದಾರೆ
ಕಛೇರಿಯಲ್ಲಿ ಪ್ಯಾಕಿಂಗ್‌ಕೆಲಸ ಮಾಡಲು **ಹುಡುಗ** ಕಂಪ್ಯೂಟರ್ ಜ್ಞಾನವುಳ್ಳವರು ಬೇಕಾಗಿದ್ದಾರೆ.
ಸಂಪರ್ಕಿಸಿ: **9620909987**

ಬೇಕಾಗಿದ್ದಾರೆ
ಮೈಸೂರು ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ ಹುಡುಗರು ಬೇಕಾಗಿದ್ದಾರೆ.
ಸಂಬಳ: 15,000/–
ಮೊ: 7899754149

ಬೇಕಾಗಿದ್ದಾರೆ
ಕೈಗಾರಿಕಾ ಪ್ರದೇಶ ಯಾದಗಿರಿ, ಮೈಸೂರು
ಮಹಿಳೆಯರು: 12000
ಹುಡುಗರು:16000
ಕೆಲಸದ ಸಮಯ: 9 ರಿಂದ 6.30
9448664411

ಬೇಕಾಗಿದ್ದಾರೆ
ನಿರ್ಮಲ ಎಂಟರ್‌ಪ್ರೈಸಸ್, ವಿಜಯನಗರ, 4ನೇ ಹಂತ, ಮೈಸೂರು
ಡೆಲಿವರಿ ಕೆಲಸ ಮಾಡಲು **ಹುಡುಗರು ಬೇಕಾಗಿದ್ದಾರೆ.**
ವಯೋಮಿತಿ: 20–40 ವರ್ಷ,
ಸಂಬಳ: 12,000 – 15,000/–
9663372416 / 8088262971

ಮೈಸೂರಿನ ಹೊಸ ಹೋಟೆಲ್‌ಗೆ ಬೇಕಾಗಿದ್ದಾರೆ
- ಕೌಂಟರ್ ಬಾಯ್ಸ್ – 4
- ಕ್ಯಾಪ್ಟನ್ – 3 Exp: 4-5 years
- ನಾಟಿ ನಾನ್‌ವೆಜ್ ಭಟ್ಟರು–1
- ಕ್ಯಾಷಿಯರ್ – 2
- ಪಾತ್ರೆ ತೊಳೆಯುವವರು – 8

Mob: 9449646645

ಭೋಗ್ಯಕ್ಕೆ ಮನೆ ಬೇಕಾಗಿದೆ
2BHK ಮನೆ ಕುವೆಂಪುನಗರ ರಾಮಕೃಷ್ಣನಗರ, ಅರವಿಂದನಗರ ಸುತ್ತಮುತ್ತ 30x40
Broker Excuse
8618762110

SITE FOR SALE
(30X40)
OLIVE ENCLAVE (NEAR MANUGANAHALLY) MYS-HUNSUR HIGHWAY 8 KM FROM RING ROAD
15 LAKCS
9538839926

WANTED
LADY INCHARGE
For Girls Hostel
Qualification: Any Degree
Salary: 12,000/-
Location: Mysore,
Need to stay in Hostel
Food and Accommodation is Free
Mob: 9964242430

WANTED
A reputed industry located in Metagalli, Mysore, is looking for male candidates:
1. Electrical Engineer: B.E./Diploma in E&E or E&C.
2. Technicians: ITI in Electrical or Electronics.
3. Sales Executive: MBA with 1-2 years of sales experience.

Contact: Please call between 10:00 AM to 5:00 PM at **9901178588**

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ, ಹಾಗೂ ಸೆಕ್ಯೂರಿಟಿ **ಸೂಪರ್‌ವೈಸರ್** ಬೇಕಾಗಿದ್ದಾರೆ, ಈ ಕೆಲಸದಲ್ಲಿ ಅನುಭವ ಇರಬೇಕು (ಎಸ್‌ಎಸ್‌ಎಲ್‌ಸಿ ಪಾಸ್, ಸ್ಕೂಟರ್ ಇರಬೇಕು, ವಯಸ್ಸು 45 ರ ಒಳಗೆ).
Contact: 8310098788

ಶ್ರೀ ರಾಘವೇಂದ್ರ ಎಂಟರ್ ಪ್ರೈಸಸ್
ಬೇಕಾಗಿದ್ದಾರೆ
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್
(ದ್ವಿಚಕ್ರ ವಾಹನ ಹೊಂದಿರುವವರಿಗೆ ಆದ್ಯತೆ)
ಆಕರ್ಷಕ ವೇತನ ಮತ್ತು ಭತ್ಯೆ,
ಸಂಪರ್ಕಿಸಿ:
9620089888 / 9632603807

ಕನ್ಸಲ್ಟೆನ್ಸಿ ಅಲ್ಲ ಕುವೆಂಪುನಗರ Action World ಕಂಪನಿಗೆ SSLC Pass, PUC, ITI, Any Degree ಆಗಿರುವ ಅಭ್ಯರ್ಥಿಗಳಿಗೆ ನೇರ ನೇಮಕಾತಿ. ಯಾವುದೇ Experience ಅಗತ್ಯವಿಲ್ಲ (ಕೂಡಲೇ ಕರೆ ಮಾಡಿ) ವಯೋಮಿತಿ: 18–30 yrs. ತಿಂಗಳಿಗೆ 17600–26700+ಉಚಿತ ವಸತಿ+ಊಟ/ ಸಂಪರ್ಕಿಸಿ:
7406821955

SITE FOR SALE
Plot No. 74 Rajarajewari Layout, Measurement 1344
Price 2500Rs/Sqft (negotiable)
300 meter from Talur cross, Towords Kellahalli road.
Ph No: 9916161641

SITE FOR SALE
30x40, South Face, Ilvala, Rate: 18 Lakhs
Mob: 8861220989
Address: 516, Kuvempunagar, Mysore - 570023

CHANGE OF NAME
I SANTOSH RANI, W/o ARUN K KUTHNIKAR residing at 273, PADMAKALA, KERGALLI Main Road, RT NAGAR MYSURU- 22 have changed my name to SANTOSHI ARUN KUTHNIKAR as per affidavit sworn by me before NM RAMANI, Notary, Mysuru city.
Sd/- SANTOSHI ARUN KUTHNIKAR

SITE FOR SALE
20x30 30x40
(Bank Loan Available)
Srirampura Ring Road, Mysore. Contact:
Mob: 8050345574

ಸೈಟ್ ಮಾರಾಟಕ್ಕಿದೆ
40x20 W/F
2ನೇ ಹಂತ
ಶ್ರೀರಾಂಪುರ ಬೈಪಾಸ್
ಸಂಪರ್ಕಿಸಿ:
9342288281

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ. ಹಾಗೂ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಕೆ.ಆರ್.ಎಸ್, ವರುಣ, ಚೆಸಿಷನ್ ಕಾಲೇಜು ಸುತ್ತ ಮುತ್ತ ಮತ್ತು ಬೋಗಾದಿ, ಮೈಸೂರಿನ ಸುತ್ತ ಮುತ್ತ
ವಿದ್ಯಾರ್ಹತೆ: S.S.L.C PASS or Fail
ದೂರವಾಣಿ: **9538886328**

ತಕ್ಷಣ ಬೇಕಾಗಿದ್ದಾರೆ
ಟೆಲಿಕಾಲಿಂಗ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
(ಮೈಸೂರು / 8000 ದಿಂದ 15000 ವರೆಗೆ ಸಂಬಳವಿರುತ್ತದೆ. (T &C)
9036489767 / 9036489760

ಸೈಟುಗಳು ಮಾರಾಟಕ್ಕಿವೆ
ಬೋಗಾದಿ–ಗದ್ದಿಗೆ ಮುಖ್ಯರಸ್ತೆಗೆ ಹೊಂದಿಕೊಂಡಂತೆ DTCP ಯಿಂದ ಅನುಮೋದನೆಗೊಂಡ ಸೈಟುಗಳನ್ನು ಮಾರಾಟ ಮಾಡುತ್ತಿದ್ದೇವೆ.
6360633036

ಕಛೇರಿ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸು: 22 to 30
ವಿದ್ಯಾಭ್ಯಾಸ: ಯಾವುದೇ ಪದವಿ MBA / M.Com
ಸಂಬಳ: 15000 to 25000
ಹುದ್ದೆಗಳು: ನುರಿತ ಟೆಲಿಕಾಲರ್–04 (Female)
Data Manager-02 (male)
Office Incharge-02 (Male and Female)
ಸ್ಥಳ: ಮೈಸೂರು
7411122619

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
(Associated with ICICI Bank)
2921/ಎ, ಸರಸ್ವತಿಪುರಂ, ಮೈಸೂರು
ನಾವು ICICI ಬ್ಯಾಂಕಿನ ಸಹಭಾಗಿತ್ವದಲ್ಲಿ ಮನೆ ಸಾಲ ಬಿಸಿನೆಸ್ ಲೋನ್, Personal Loan ಮತ್ತು ವಾಹನ ಸಾಲ ಮಾಡಿ ಕೊಡಲಾಗುವುದು. ಯಾವುದೇ ಲೋನ್ ಬೇಕಾದಲ್ಲಿ ಸಂಪರ್ಕಿಸಿ ಹಾಗೂ ಟೆಲಿಕಾಲಿಂಗ್‌ಗೆ ಹುಡುಗಿಯರು ಬೇಕಾಗಿದ್ದಾರೆ.
8088647887

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು
ವಯೋಮಿತಿ : 50 ವರ್ಷದೊಳಗೆ
ಸಂಬಳ: 17500/–26 Days 8Hours
ESI,PF ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ
9620777819
9620667819

ಕೆಲಸಕ್ಕೆ ಬೇಕಾಗಿದ್ದಾರೆ
ಯುವತಿಯರು ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ
ಬೆಳಿಗ್ಗೆ 8 ರಿಂದ ಸಂಜೆ 6ರ ವರೆಗೂ
ಸಂಪರ್ಕಿಸಿ:
9606514441
08214242351

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಜಮೀನಿನ ಹಕ್ಕುಪತ್ರ ನೀಡಲು ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ಎಐಕೆಕೆಎಂಎಸ್‌ನಿಂದ

ಹೆಚ್.ಡಿ.ಕೋಟೆ ಆಡಳಿತ ಸೌಧದ ಬಳಿ ಪ್ರತಿಭಟನೆ



ತಹಸಿಲ್ದಾರ್ ಶ್ರೀಧರ್ ಅವರಿಗೆ ಮನವಿ ಪತ್ರ ನೀಡಿದರು.

ಹೆಚ್.ಡಿ.ಕೋಟೆ, ಡಿ.18– ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಲು ಹಾಗೂ ಜಮೀನಿನ ಹಕ್ಕುಪತ್ರ ನೀಡಲು ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಎಐಕೆಕೆಎಂಎಸ್‌ನ ಜಿಲ್ಲಾ ಸಂಚಾಲಕ ಹೆಚ್.ಎಂ. ಬಸವರಾಜ್ ಆಪಾದಿಸಿದ್ದಾರೆ.

ಪಟ್ಟಣದ ತಾಲೂಕು ಆಡಳಿತ ಸೌಧದ ಬಳಿ ರೈತರ ಸಮ್ಮುಖದಲ್ಲಿ ನಡೆದ ಪ್ರತಿಭಟನೆಯಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಅವರು, ಹಲವಾರು ವರ್ಷಗಳಿಂದ ರೈತರಿಗೆ ಸಾಗುವಳಿ ದೊರಕದೆ ಆಡಳಿತ ಸೌಧದ ಕಚೇರಿಗೆ ಅಲೆಯುತ್ತಾ ಬಂದಿದ್ದಾರೆ. ಅದೇ ಉಳ್ಳವರಿಗೆ, ಪ್ರಭಾವಿ ವ್ಯಕ್ತಿಗಳಿಗೆ ಹಕ್ಕುಪತ್ರ ನೀಡಲು ಅಧಿಕಾರಿಗಳು ಮುಂದಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಐಕೆಕೆಎಂಎಸ್ ಸದಸ್ಯ ಶ್ರೀನಿವಾಸಮೂರ್ತಿ ಮಾತನಾಡಿ, ತಾಲೂಕು ಕಚೇರಿಯಲ್ಲಿ ರೈತರಿಗೆ ಸ್ಪಂದಿಸುವ ಕೆಲಸ ಮಾಡದೆ ರೈತರನ್ನು ಅಲೆದಾಡುವ ಹಾಗೆ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ರೈತರಿಗೆ ಸ್ಪಂದಿಸುವ ಕೆಲಸ ತಾಲೂಕು ಆಡಳಿತ ಸೌಧದಲ್ಲಿ ಆಗಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ರೈತ ಸೀನಬೋವಿ ಮಾತನಾಡಿ, ಆಡಳಿತ ಸೌಧ ಕಚೇರಿಗೆ ಹಲವಾರು ವರ್ಷಗಳಿಂದ ಅಲೆದಾಡಿ ನಮಗೆ ಯಾವುದೇ ರೀತಿಯ ಕೆಲಸಗಳನ್ನ ಮಾಡಿಕೊಡದೆ ಉಳ್ಳವರಿಗೆ ಅಧಿಕಾರಿಗಳು ಕೆಲಸ ಮಾಡಿಕೊಡಲು ಮುಂದಾಗಿದ್ದಾರೆ ಎಂದು ದೂರಿದರು.

ಸರ್ಕಾರವು ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ಕೊಡುವುದೆಂದರೆ ಅದು ಭಿಕ್ಷೆಯಲ್ಲ. ಅದು ನ್ಯಾಯಬದ್ಧವಾಗಿ ಕೊಡಬೇಕಾಗಿರುವ ಹಕ್ಕು. ರಾಜ್ಯದ ಹಲವೆಡೆಗಳಲ್ಲಿ ಭೂಮಿಯನ್ನು ಸಕ್ರಮ ಮಾಡಿಕೊಳ್ಳಲು ಅರ್ಜಿ 50, 53 ನ್ನು ಹಾಕಿ ಹಕ್ಕುಪತ್ರಕ್ಕಾಗಿ ದಶಕಗಳಿಂದ ಕಾಯುತ್ತಿದ್ದಾರೆ. ಇತ್ತೀಚೆಗೆ ಸರ್ಕಾರದ ಹೊಸ ಆದೇಶದ ಪ್ರಕಾರವೂ ಅರ್ಜಿ 57ಅನ್ನು ಸಹ ಹಾಕಿದ್ದಾರೆ. ಆದರೆ ಸರ್ಕಾರದಿಂದ ಸಕಾರಾತ್ಮಕವಾದ ಪ್ರತಿಕ್ರಿಯೆ ಬರದೆ ಈ ಅರ್ಜಿಯನ್ನೇ ತಿರಸ್ಕರಿಸುತ್ತಿರುವಂತಹ ಘಟನೆಗಳು ಈ ರೈತರಿಗೆ ನಿರಾಸೆಯನ್ನು ತಂದಿದೆ ಎಂದರು.

ಅರಣ್ಯ ಇಲಾಖೆಯು ಸರ್ಕಾರವು ಈ ಸಮಸ್ಯೆಯನ್ನು ಪರಿಹರಿಸುವವರೆಗೆ ಕಾಯದೆ ಈ ಸಾಗುವಳಿದಾರರ ಮೇಲೆ ದಾಳಿ ಮಾಡುತ್ತಿದೆ. ರೈತರ ಜಮೀನಿಗೆ ಏಕಾಏಕಿ ಬೇಲಿ ಹಾಕಿಕೊಂಡು ತಮ್ಮದೆಂದು ಘೋಷಿಸುತ್ತಿದೆ. ಸಾಗುವಳಿದಾರರ ಮೇಲೆ ಕೆಲವೆಡೆ ದೈಹಿಕವಾಗಿಯೂ ದಾಳಿ ನಡೆದಿದೆ. ಇಲ್ಲಿ ಸರ್ಕಾರವು ಅರಣ್ಯ ಭೂಮಿ ಮತ್ತು ಕಂದಾಯ ಭೂಮಿಗಳನ್ನು ಜಂಟಿಯಾಗಿ ಸರ್ವೇ ಮಾಡಿ ವಿಂಗಡಣೆ ಮಾಡಿಲ್ಲ. ಹಕ್ಕುಪತ್ರವನ್ನೂ ನೀಡಿಲ್ಲ. ಅಲ್ಲದೇ ಅರಣ್ಯ ಪ್ರದೇಶದ ಆಸುಪಾಸಿನಲ್ಲಿ ಬದುಕುತ್ತಿರುವ ಬುಡಕಟ್ಟು ಜನಾಂಗ ಮತ್ತು ಆದಿವಾಸಿಗಳಿಗೆ ಅವರ ಜಮೀನನ್ನು ಕಿತ್ತುಕೊಳ್ಳುವುದಷ್ಟೇ ಅಲ್ಲ, ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸಲಾಗುತ್ತದೆ ಎಂದರು. ಕಾಡಂಚಿನ ಬದುಕನ್ನು ಬಿಟ್ಟರೆ ಅವರಿಗೆ ಬೇರೆ ಯಾವುದೇ ಆದಾಯದ ಮೂಲವಿಲ್ಲದೆ, ಬೇರೆ ಕಸುಬು ತಿಳಿಯದ ಈ ಜನರು ಸರ್ಕಾರದ ಈ ಕ್ರಮದಿಂದಾಗಿ ಭಿಕ್ಷೆ ಬೇಡುವ ಸ್ಥಿತಿಗೆ ತಳ್ಳಲ್ಪಡುತ್ತಾರೆ ಎಂದರು. ಇದೇ ಸಂದರ್ಭದಲ್ಲಿ ಗ್ರೇಡ್ 2 ತಹಸಿಲ್ದಾರ್ ಶ್ರೀಧರ್ ಅವರಿಗೆ ಮನವಿ ಪತ್ರ ನೀಡಿದೆ ಎಂದರು. ಪ್ರತಿಭಟನೆಯಲ್ಲಿ ಎಐಡಿವೈಓ ಸುನಿಲ್ ಟಿ ಆರ್, ಹಿರೇಹಳ್ಳಿ ಬಿ. ಗ್ರಾಮದ ರಂಗರಾಜು, ಕೃಷ್ಣೇಗೌಡ, ಮಂಜು, ಸ್ವಾಮಿ ಗೌಡ. ಮುರುಗನಹಳ್ಳಿ ಗುರುಸ್ವಾಮಿ, ಹೊಮ್ಮರಗಳ್ಳಿ ಶ್ರೀನಿವಾಸ ಮೂರ್ತಿ, ಸೇರಿದಂತೆ ಹಲವರು ಭಾಗವಹಿಸಿದ್ದರು.

ಮಹಿಳೆಯರಲ್ಲೂ ಮದ್ಯ ಸೇವನೆ ಚಟ ಆತಂಕಕಾರಿ ಬೆಳವಣಿಗೆ


ನಂಜನಗೂಡಿನ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಬುಧವಾರ ನಡೆದ ಮದ್ಯ ವರ್ಜನ ಶಿಬಿರವನ್ನು ಟಿಎಚ್‌ಒ ಡಾ. ಶಿವಪ್ರಸಾದ್ ಉದ್ಘಾಟಿಸಿದರು.

ನಂಜನಗೂಡು, ಡಿ.18– ಮದ್ಯ ಸೇವನೆಯು ಒಂದು ಚಟವಾಗಿದ್ದು, ಈ ಚಟ ಗಂಡಸರಲ್ಲಿ ವಿಪರೀತವಾಗಿದೆ. ನಾಗರಿಕತೆಯ ಹುಚ್ಚಾಟದಲ್ಲಿ ಮಹಿಳೆಯರೂ ಚಟಕ್ಕೆ ಒಳಗಾಗುತ್ತಿರುವುದು ಆತಂಕ ಉಂಟುಮಾಡುತ್ತಿದೆ ಎಂದು ಸರ್ಕಾರಿ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಶಿವಪ್ರಸಾದ್ ವಿಷಾದ ವ್ಯಕ್ತಪಡಿಸಿದರು.

ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಬುಧವಾರ ಶ್ರೀ ಧರ್ಮಸ್ಥಳ ಗ್ರಾಮೋದ್ಯೋಗ ಸಂಸ್ಥೆ ವತಿಯಿಂದ ಆಯೋಜಿಸಲಾಗಿದ್ದ ಮದ್ಯ ವರ್ಜನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಗರ ಪ್ರದೇಶಗಳಲ್ಲಿ ಹೆಂಗಸರು, ಗಂಡಸರು ಒಟ್ಟಿಗೆ ಸೇರಿ ಮದ್ಯಸೇವನೆ ಮಾಡುತ್ತಿರುವುದು ಹೆಚ್ಚಾಗಿ ಕಾಣಬಹುದಾಗಿದ್ದು, ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಇದು ಬಹಳ ವಿರಳ. ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆ ಗಾಂಜಾ, ಅಫೀಮು, ಡ್ರಗ್ಸ್ ಸೇವನೆ ಚಟಗಳಿಗೆ ದಾಸರಾಗಿರುವುದು ಪೋಷಕರಲ್ಲಿ ಭಯ ಹುಟ್ಟಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಮದ್ಯವರ್ಜನ ಶಿಬಿರವನ್ನು ಆಯೋಜಿಸಿರುವುದು ಅರ್ಥಪೂರ್ಣವಾಗಿದೆ ಎಂದು ಹೇಳಿದರು.

ಮದ್ಯವ್ಯಸನಿಗಳು ಆರ್ಥಿಕವಾಗಿ, ಸಾಮಾಜಿಕವಾಗಿ ದಿವಾಳಿಯಾಗಿದ್ದು, ಪ್ರತಿದಿನ ಮದ್ಯಸೇವನೆ ಮಾಡಲು ಹಣ ಬೇಕಾಗುತ್ತದೆ. ಈ ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತು ಸಂಸಾರಕ್ಕೆ ಉಪಯೋಗಿಸಿದರೆ ಉತ್ತಮ ಜೀವನ ನಡೆಸಬಹುದು, ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಮದ್ಯಸೇವನೆ ಮಾಡುವುದರಿಂದ ಹಲವಾರು ಕಾಯಿಲೆಗಳಿಗೆ ತುತ್ತಾಗಿ ಸಾವು ಸಂಭವಿಸಬಹುದು, ಮೊದಲು ಮದ್ಯ ಸೇವನೆ ಮಾಡುತ್ತಿದ್ದರೆ ತಕ್ಷಣ ನಿಲ್ಲಿಸಬೇಕು ಎಂದು ಹೇಳಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿರ್ದೇಶಕ ವಿಜಯಕುಮಾರ್ ನಾಗವಾಳ ಮಾತನಾಡಿ, ಪ್ರತಿವರ್ಷವೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, ಸಂಘ–ಸಂಸ್ಥೆಗಳ ಜೊತೆಗೂಡಿ ಮದ್ಯ ವರ್ಜನ ಶಿಬಿರಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ತಾಲೂಕಿನ ಮದ್ಯವ್ಯಸನಿಗಳ ಮನಃಪರಿವರ್ತನೆ ಮಾಡಿ ಅವರ ಕುಟುಂಬ, ಜೀವನವನ್ನು ರೂಪಿಸಿಕೊಳ್ಳಲು ಅನುಕೂಲವಾಗುವಂತಹ ಕಾರ್ಯಕ್ರಮ ಇದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಪಿಎಸ್‌ಐ ಗೋಪಾಲಕೃಷ್ಣ, ಮಕ್ಕಳ ಮನೆ ಸೋಮಶೇಖರ್, ಮುಖಂಡರಾದ ಅಳಗಂಚಿ ಶಿವಯ್ಯ, ಜಗದೀಶ್, ಚಿಕ್ಕಮಾದಪ್ಪ, ಧರ್ಮರಾಜ್, ಎಸ್.ಎ.ಎಲ್. ಮೂರ್ತಿ, ಗಟ್ಟವಾಡಿ ನಾಗರಾಜಪ್ಪ ಪ್ರತಿಮಾ, ಮಂಜೇಶ್, ವರದರಾಜು, ಮಣಿಕಂಠ, ಕಿರಣ್, ಕ್ಷಮಾ, ಧನಲಕ್ಷ್ಮಿ ಉಪಸ್ಥಿತರಿದ್ದರು.

ನೂತನ ಶಾಲಾ ಕೊಠಡಿ ಉದ್ಘಾಟನೆ


ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ತಾಂಡವಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಅಡಕನಹಳ್ಳಿ ಹುಂಡಿ ಗ್ರಾಮದಲ್ಲಿ ಕಂಪನಿಯ ಸಿಎಸ್‌ಆರ್ ನಿಧಿಯಿಂದ ಸುಮಾರು 50 ಲಕ್ಷದಲ್ಲಿ ಶಾಲಾ ಕೊಠಡಿ ಹಾಗೂ ಭೋಜನ ಕೊಠಡಿ ಸೇರಿದಂತೆ ಶಾಲೆಯ ಸಮಗ್ರ ಅಭಿವೃದ್ಧಿಪಡಿಸಲಾಗಿದ್ದು, ನೂತನ ಶಾಲಾ ಕೊಠಡಿಗಳನ್ನು ಕಂಪೆನಿ ಅಖಿಲೇಶ್ ಯಾದವ್, ಗ್ರಾಮ ಪಂಚಾಯತಿ ಅಧ್ಯಕ್ಷೆ ನಾಗಮ್ಮ, ಉಪಾಧ್ಯಕ್ಷ ಬಿ. ಶಿವಣ್ಣ ಉದ್ಘಾಟಿಸಿದರು.

ಬಸ್ಸು ಡಿಕ್ಕಿ: ಪಾದಚಾರಿ ಸಾವು

ಹುಣಸೂರು, ಡಿ.18– ಬಸ್ಸೊಂದು ಡಿಕ್ಕಿ ಹೊಡೆದ ಪರಿಣಾಮ ಜಮೀನಿನಿಂದ ಮನೆಗೆ ಹಿಂದಿರುಗುತ್ತಿದ್ದ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ.

ತಾಲೂಕಿನ ಬಿಳಿಕೆರೆ ಹೋಬಳಿಯ ಕುಪ್ಪೆಗಾಲ ಘಟ್ಟ ಗ್ರಾಮದ ನಿವಾಸಿ ವೆಂಕಟೇಗೌಡರ ಪುತ್ರ ಮಂಜುನಾಥ್ (48) ಮೃತ ದುರ್ದೈವಿ. ಸಂಜೆ ಜಮೀನಿನಿಂದ ಮನೆಗೆ ಹಿಂತಿರುತ್ತಿದ್ದ ವೇಳೆ ಹುಣಸೂರಿನಿಂದ ತಮಿಳುನಾಡಿಗೆ ತೆರಳುತ್ತಿದ್ದ ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಈ ದುರಂತ ಸಂಭವಿಸಿದೆ. ಈ ಸಂಬಂಧಪಟ್ಟ ಬಿಳಿಕೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಡಿ.24ರಂದು ವಾಟಾಳು ಶ್ರೀಗಳ 76ನೆಯ ವರ್ಧಂತಿ

ತಿ.ನರಸೀಪುರ, ಡಿ.18– ವಾಟಾಳು ಶ್ರೀ ಸೂರ್ಯ ಸಿಂಹಾಸನ ಮಠದ ಪೂಜ್ಯ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ 76ನೆಯ ವರ್ಧಂತಿಯನ್ನು (ಹುಟ್ಟುಹಬ್ಬ) ಸಡಗರ, ಸಂಭ್ರಮ ಹಾಗೂ ವಿಜೃಂಭಣೆಯಿಂದ ವಾಟಾಳಿನಲ್ಲಿ ಡಿ.24ರಂದು ಆಚರಿಸಲಾಗುವುದು.



ಪ್ರಾತಃಕಾಲ ಶ್ರೀಮಠದ ಶ್ರೀ ಬಸವಲಿಂಗ ಸ್ವಾಮಿಗಳವರ ಗದ್ದುಗೆ ಹಾಗೂ ಇತರ ಗುರುಗಳ ಗದ್ದುಗೆಗಳಲ್ಲಿ ವಿಶೇಷಪೂಜೆ ನೆರವೇರುತ್ತದೆ. ಬೆಳಗ್ಗೆ 8 ಗಂಟೆಗೆ ಶ್ರೀಗಳವರ ಪಾದಪೂಜೆ ಏರ್ಪಡಿಸಿದೆ. 9 ಗಂಟೆಗೆ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಾಲಂಕೃತ ಸಾರೋಟಿನಲ್ಲಿ ಮಂಗಳವಾದ್ಯ ಹಾಗೂ ಜನಪದ ಕಲಾತಂಡಗಳೊಂದಿಗೆ ಮೆರವಣಿಗೆ ಏರ್ಪಡಿಸಲಾಗಿದೆ. ಬೆಳಗ್ಗೆ ಮತ್ತು ಮಧ್ಯಾಹ್ನ ಭಕ್ತಾದಿಗಳು ಮತ್ತು ಸಾರ್ವಜನಿಕರಿಗೆ ಪ್ರಸಾದದ ವ್ಯವಸ್ಥೆಯಿರುತ್ತದೆ. ಪೂಜ್ಯ ಮಠಾಧೀಶರುಗಳು, ಭಕ್ತಾದಿಗಳು ಹಾಗೂ ಸಾರ್ವಜನಿಕರು ಈ ಎಲ್ಲ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀಗಳಿಗೆ ಹುಟ್ಟುಹಬ್ಬದ ಶುಭ ಹಾರೈಸಬೇಕಾಗಿ ಕೋರಿದೆ.

ಗಿಡಮೂಲಕೆ ಔಷಧಿ ಮಾಡುವ ನೆಪದಲ್ಲಿ

ವನ್ಯಜೀವಿಗಳ ದೇಹದ ಭಾಗಗಳನ್ನು ಮಾರಾಟ ಮಾಡುತ್ತಿದ್ದ ಮಹಾರಾಷ್ಟ್ರದ ವ್ಯಕ್ತಿಯ ಬಂಧನ

ವನ್ಯಜೀವಿಗಳ ದೇಹದ ಭಾಗ ವಶಕ್ಕೆ, ಆರೋಪಿ ಜೈಲಿಗೆ

ಹೆಚ್.ಡಿ.ಕೋಟೆ, ಡಿ.18– ವನ್ಯಜೀವಿಗಳ ದೇಹದ ಭಾಗಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಮಹಾರಾಷ್ಟ್ರದ ವ್ಯಕ್ತಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ.

ಹೆಚ್.ಡಿ.ಕೋಟೆ ಹ್ಯಾಂಡ್‌ಪೋಸ್ಟ್‌ಗೆ ತೆರಳುವ ಮುಖ್ಯರಸ್ತೆಯ ಅಗ್ನಿಶಾಮಕ ಠಾಣೆಯ ಬಳಿ ಮಹಾರಾಷ್ಟ್ರದ ಬಚಪನ್‌ಸಿಂಗ್ ಹಿರಾಸಿಂಗ್ ಚಿತೊಡಿಯಾ ಠಾಕೂರ್ ಬಿನ್ ಹಿರಾಸಿಂಗ್ ಚಿಸೊಡಿಯ ಠಾಕೂರ್ ಎಂಬಾತನನ್ನು ಬಂಧಿಸಿ ವನ್ಯಜೀವಿ ದೇಹದ ಭಾಗಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಳೆದ ನಾಲ್ಕೈದು ತಿಂಗಳಿಂದ ಹ್ಯಾಂಡ್‌ಪೋಸ್ಟ್ ಬಳಿ ಈತ ಗಿಡಮೂಲಿಕೆ ಔಷಧಿಗಳನ್ನು ಮಾರಾಟ ಮಾಡುವ ಟೆಂಟ್ ಹಾಕಿಕೊಂಡು ಔಷಧಿ ನೀಡುವ ನೆಪದಲ್ಲಿ, ವನ್ಯಜೀವಿಗಳಾದ ಉಡ (Indian Monitor lizard (Varanus bengalensis) 5 (ಹಾಥ್ ಜೋಡ) ಮತ್ತು ರಾಷ್ಟ್ರೀಯ ಪಕ್ಷಿ ನವಿಲಿನ ತಲೆಯ ಮೇಲೆ ಇರುವ ಜುಟ್ಟುಗಳು cristatus (Indian peafowl - Pavo cristatus) ಭಾಗಗಳ ವನ್ಯಜೀವಿ ಟ್ರೋಫಿಗಳನ್ನು ಮಾರಾಟ ಮಾಡುತ್ತಿದ್ದ.

ಈ ಬಗ್ಗೆ ಖಚಿತ ಮಾಹಿತಿ ತಿಳಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ನಿರ್ದೇಶಕರ ನಿರ್ದೇಶನದ ಮೇರೆಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ವಿಶೇಷ ಹುಲಿ ಸಂರಕ್ಷಣಾ ದಳ, ಹ್ಯಾಂಡ್‌ಪೋಸ್ಟ್ ಅವರ ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿಗಳು, ವಿಶೇಷ ಹುಲಿ ಸಂರಕ್ಷಣಾ ದಳ, ಘಟೂನ್–02. ವಿಶೇಷ ಹುಲಿ ಸಂರಕ್ಷಣಾ ದಳದ ಸಿಬ್ಬಂದಿಗಳೊಂದಿಗೆ ಕಾರ್ಯಾಚರಣೆ ನಡೆಸಿ ಮಾಲುಗಳನ್ನು ವಶಪಡಿಸಿಕೊಂಡು ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.


ವನ್ಯಜೀವಿಗಳ ಬಿಡಿಭಾಗಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿರುವುದು.

ಕಾರ್ಯಾಚರಣೆಯಲ್ಲಿ ವಿಶೇಷ ಹುಲಿ ಸಂರಕ್ಷಣಾ ದಳ, ಹ್ಯಾಂಡ್‌ಪೋಸ್ಟ್‌ನ ನವೀನ್ ಕುಮಾರ್, ಅಶೋಕ ಚಿಕ್ಕಗಡೆ, ಡಿಆರ್‌ಎಫ್‌ಗಳಾದ ಸುರೇಶ್ ಪೂಜಾರಿ, ಹನುಮಂತು, ರಾಜೀವ್, ಶಿವನಗೌಡ, ರಾಮಾಂಜನೇಯಲು, ಗಸ್ತು ವನ ಪಾಲಕ ಉಮೇಶ್, ನಾಗೇಂದ್ರ ಬೋಳ, ಬಿ. ಸಿ. ಕಾಳ, ಕಚೇರಿ ಸಿಬ್ಬಂದಿ ಸಂಪತ್ ಕುಮಾರ್ ಹಾಗೂ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಚಿಕಿತ್ಸೆ ಪಡೆಯಲು ವಿದೇಶಕ್ಕೆ ಹೊರಟ ಶಿವಣ್ಣ

ಬೆಂಗಳೂರು, ಡಿ.18– ಅನಾರೋಗ್ಯ ಉಂಟಾದ ಕಾರಣದಿಂದ ನಟ ಶಿವರಾಜ್ ಕುಮಾರ್ ಇಂದು(ಡಿ.18) ವಿದೇಶಕ್ಕೆ ಪ್ರಯಾಣ ಬೆಳೆಸಿದ್ದಾರೆ. ಅದಕ್ಕೂ ಮುನ್ನ ಅವರನ್ನು ಸುದೀಪ್ ಮುಂತಾದವರು ಭೇಟಿ ಮಾಡಿದ್ದಾರೆ. ಮನೆಯಿಂದ ವಿಮಾನ ನಿಲ್ದಾಣಕ್ಕೆ ತೆರಳುವಾಗ ಶಿವರಾಜ್‌ಕುಮಾರ್ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ಅನಾರೋಗ್ಯ ಮತ್ತು ಚಿಕಿತ್ಸೆಯ ಬಗ್ಗೆ ಮಾತನಾಡುವಾಗ ಅವರು ಭಾವುಕರಾದರು.



ಎಲ್ಲರಿಗೂ ಇರುವಂಥದ್ದೇ. ನಾವು ಕೂಡ ಸ್ವಲ್ಪ ಎಮೋಷನಲ್ ಆಗುತ್ತೇವೆ. ಅದು ಸಹಜ. ಇಲ್ಲಿ ಪರೀಕ್ಷೆ ಮಾಡಿಸಿದಾಗ ಎಲ್ಲ ಲಕ್ಷಣಗಳು ಚೆನ್ನಾಗಿವೆ. ಆದರೂ ಕೂಡ ಒಂದು ಆತಂಕ ಇದ್ದೇ ಇರುತ್ತದೆ. ಮನೆಯಿಂದ ಹೋಗುತ್ತಿದ್ದೇವಲ್ಲ. ತಂಗಿ ಹಾಗೂ ಸಂಬಂಧಿಕರನ್ನೆಲ್ಲ ನೋಡುವಾಗ ಸ್ವಲ್ಪ ಎಮೋಷನಲ್ ಆಯಿತು. ಅಭಿಮಾನಿಗಳು ಕೂಡ ಇದ್ದಾರೆ. ಸ್ವಲ್ಪ ದುಃಖ ಆಗಿದೆ ಹೊರತೂ ಇನ್ನೇನೂ ಇಲ್ಲ ಎಂದು ಶಿವರಾಜ್‌ಕುಮಾರ್ ಹೇಳಿದ್ದಾರೆ.

ನಾನು ಆತ್ಮವಿಶ್ವಾಸದಿಂದ ಇದ್ದೇನೆ. ಡಿ. 24ರಂದು ಸರ್ಜರಿ ನಡೆಯುತ್ತದೆ. ಅದರ ಬಗ್ಗೆ ಏನೂ ಯೋಚನೆ ಇಲ್ಲ. ಕಡಿಮೆ ಅವಧಿ ಆದರೆ ಪರವಾಗಿಲ್ಲ. ಆದರೆ 35 ದಿನ ಮನೆಯಿಂದ, ಭಾರತದಿಂದ ಹೊರಗೆ ಇರುತ್ತೇನೆ ಎಂಬ ನೋವು ಇರುತ್ತದೆ. ಎಲ್ಲರ ಹಾರೈಕೆ ಇದೆ. ಅಭಿಮಾನಿಗಳು, ಮಾಧ್ಯಮದವರು ಕಾಳಜಿ ತೋರಿಸಿದ್ದಾರೆ. ಆರೋಗ್ಯ ಸಮಸ್ಯೆ ಇದೆ ಎಂಬುದು ಗೊತ್ತಿದ್ದರೂ ಯಾರೂ ಅದನ್ನು ವೈಭವೀಕರಿಸಿಲ್ಲ. ಅದು ನನಗೆ ಖುಷಿ ಕೊಟ್ಟಿದೆ. ಅಷ್ಟು ಪ್ರೀತಿ ಮತ್ತು ಗೌರವ ನನ್ನ ಮೇಲೆ ಇಟ್ಟಿದ್ದಾರೆ ಎಂದಿದ್ದಾರೆ ಶಿವರಾಜ್‌ಕುಮಾರ್.

ಶಿವರಾಜ್‌ಕುಮಾರ್ ಅವರ ಕೈಯಲ್ಲಿ ಹಲವು ಸಿನಿಮಾಗಳು ಇವೆ. ಆದರೆ ಅನಾರೋಗ್ಯ ಉಂಟಾಗಿರುವುದರಿಂದ ಅವರು ಸದ್ಯಕ್ಕೆ ಸಿನಿಮಾ ಕೆಲಸಗಳಿಗೆ ಬ್ರೇಕ್ ನೀಡಿದ್ದಾರೆ. ದೇವರಿಗೆ ಪೂಜೆ ಮಾಡಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಶಿವಣ್ಣ ಬೇಗ ಗುಣಮುಖರಾಗಿ ಬರಲಿ ಎಂದು ಅಭಿಮಾನಿಗಳು ಪ್ರಾರ್ಥಿಸಿದ್ದಾರೆ.

ಈದ್ಗಾ ಮಸೀದಿಯ ಮಳಿಗೆಗಳ ಕಟ್ಟಡ ಅಭಿವೃದ್ಧಿಗೆ ಮಾಜಿ ಶಾಸಕ ಮಂಜುನಾಥ್‌ರಿಂದ ಸಹಾಯಧನ

ಹುಣಸೂರು, ಡಿ.18– ನಗರದ ಗೋಕುಲ ರಸ್ತೆಯಲ್ಲಿರುವ ಈದ್ಗಾ ಮಸೀದಿಗೆ ಸೇರಿದ ನೂತನ ಮಳಿಗೆಗಳ ಕಟ್ಟಡ ಅಭಿವೃದ್ಧಿಗಾಗಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ವೈಯಕ್ತಿಕವಾಗಿ 5 ಲಕ್ಷ ರೂ.ಗಳ ಸಹಾಯಧನ ನೀಡಿದರು.


ಮಾಜಿ ಶಾಸಕ ಮಂಜುನಾಥ್ ಸಹಾಯಧನ ನೀಡುತ್ತಿರುವುದು.

ಮಸೀದಿಯ ಸಮಿತಿಯ ಸದಸ್ಯರಿಗೆ ಹಾಗೂ ಮುಸ್ಲಿಂ ಸಮುದಾಯದ ಮುಖಂಡರಿಗೆ ಸಹಾಯಧನ ನೀಡಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಶಾಸಕನಾಗಿದ್ದಾಗ ಈ ಕಟ್ಟಡದ ಅಭಿವೃದ್ಧಿಗಾಗಿ ಚಾಲನೆ ನೀಡಿದ್ದೆ. ಅಂದಿನ ದಿನದಲ್ಲಿ ನಾನು ಕೂಡ ಸಮುದಾಯದ ಮುಖಂಡರ ಸಮ್ಮುಖದಲ್ಲಿ ಸಹಾಯ ನೀಡುತ್ತೇನೆ ಎಂದು ಭರವಸೆ ನೀಡಿದ್ದೆ. ಕೊಟ್ಟ ಮಾತಿನಂತೆ ಇಂದು ನಾನು ನಡೆದುಕೊಂಡಿದ್ದೇನೆ ಎಂದು ತಿಳಿಸಿದರು. ಕಟ್ಟಡದ ಕಾಮಗಾರಿ ಪೂರ್ಣವಾಗಲು ಸರ್ಕಾರದ ಅನುದಾನ ಕೊಡಿಸುವುದರಲ್ಲಿ ನಾನು ಕೂಡ ಪ್ರಯತ್ನ ಮಾಡುತ್ತೇನೆ. ನಿಮ್ಮೆಲ್ಲರ ಸಹಕಾರ, ಪ್ರೀತಿ–ವಿಶ್ವಾಸ, ಆಶೀರ್ವಾದ ಸದಾ ಹೀಗೆ ಇರಲಿ ಎಂದು ನಾನು ಆಶಿಸುತ್ತೇನೆ ಎಂದು ತಿಳಿಸಿದರು.

ಹುಣಸೂರು ಬಳಿ ಬೋನಿಗೆ ಬಿದ್ದ ಚಿರತೆ

ಹುಣಸೂರು, ಡಿ.18– ರೈತರಿಗೆ ಉಪಟಳ ನೀಡುತ್ತಿದ್ದ ಗಂಡು ಚಿರತೆಯೊಂದು ಕೊನೆಗೂ ಬೋನಿಗೆ ಬಿದ್ದಿದೆ.

ಗಾವಡಗೆರೆ ಗ್ರಾಮದ ಸಣ್ಣಸ್ವಾಮಿ ನಾಯಕ ಅವರ ಜಮೀನಿನಲ್ಲಿ ನಾಯಿ ಕಟ್ಟಿ ಬೋನನ್ನು ಇರಿಸಲಾಗಿತ್ತು. ಆಹಾರ ಅರಸಿ ಬಂದ ಚಿರತೆಯು ನಾಯಿ ಆಸೆಗೆ ಬೋನಿನಲ್ಲಿ ಸೆರೆಯಾಗಿದೆ. ಮಾಹಿತಿ ತಿಳಿದ ಅರಣ್ಯಾಧಿಕಾರಿಗಳು ಸ್ಥಳಕ್ಕಾಗಮಿಸಿ ಚಿರತೆಯನ್ನು ಬೇರೆಡೆಗೆ ರವಾನಿಸಿದ್ದಾರೆ. ಸೆರೆಯಾದ ಚಿರತೆಗೆ ಸುಮಾರು 4 ವರ್ಷ ಇರಬಹುದು ಎಂದು ಅಂದಾಜಿಸಲಾಗಿದೆ.



ನಿಟ್ಟುಸಿರು ಬಿಟ್ಟ ರೈತರು: ಗಾವಡಗೆರೆ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಾದ ತೊಂಡಾಳು, ಉಂಡವಾಡಿ, ಹುಲ್ಯಾಳು, ಮುಳ್ಳೂರು ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಚಿರತೆ ಜಾನುವಾರುಗಳ ಮೇಲೆ ದಾಳಿ ನಡೆಸಿ ಕೊಂದು ತಿನ್ನುತ್ತಿತ್ತು. ಇದರಿಂದ ರೈತರು ಜಮೀನುಗಳಿಗೆ ಹೋಗಲು ಹಿಂದೇಟು ಹಾಕುವಂತಾಗಿತ್ತು. ಇದರಿಂದ ಬೇಸತ್ತಿದ್ದ ರೈತರ ಮನವಿ ಮೇರೆಗೆ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಚಿರತೆ ಸೆರೆಯಾಗಿದೆ. ಇದರಿಂದ ಈ ಭಾಗದ ರೈತರು ನಿಟ್ಟುಸಿರು ಬಿಡುವಂತಾಗಿದೆ. ಇದೇ ವೇಳೆ ವಲಯ ಅರಣ್ಯ ಅಧಿಕಾರಿಗಳಾದ ಆರ್‌ಎಫ್‌ಓ ನಂದಕುಮಾರ್ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಸದಸ್ಯತ್ವ ಅಭಿಯಾನ ಮಾಡಿದರೆ ಸಾಲದು, ತಳಮಟ್ಟದಿಂದ ಅಧಿಕಾರ ಹಿಡಿಯಬೇಕು

ಬಿಜೆಪಿ ರಾಷ್ಟ್ರೀಯ ಚುನಾವಣಾ ಸಹ ಉಸ್ತುವಾರಿ, ಮಾಜಿ ಸಚಿವ ಪೊನ್ನು ರಾಧಾಕೃಷ್ಣನ್ ಅಭಿಮತ

ಪಿರಿಯಾಪಟ್ಟಣ, ಡಿ.18– ನಾನು ಹೆಚ್ಚು ಸದಸ್ಯರಿಗೆ ಸದಸ್ಯತ್ವ ಕೊಡಿಸಿದ್ದೇನೆ ಎಂದು ವಾದ ಮಾಡಿ ಸುಮ್ಮನೆ ಕುಳಿತರೆ ಸಾಲದು. ಇದರಿಂದ ದೇಶ ಹಾಗೂ ಪಕ್ಷಕ್ಕೆ ಯಾವುದೇ ಲಾಭವಾಗುವುದಿಲ್ಲ. ಬದಲಿಗೆ ಗ್ರಾಮ ಪಂಚಾಯಿತಿಯಿಂದ ಅಧಿಕಾರ ಹಿಡಿಯುವ ಕಾರ್ಯತಂತ್ರ ಮಾಡಬೇಕು. ಆಗ ಮಾತ್ರ ಸದೃಢ ರಾಷ್ಟ್ರ ಮಾಡಲು ಸಾಧ್ಯ ಎಂದು ರಾಷ್ಟ್ರೀಯ ಬಿಜೆಪಿ ಚುನಾವಣಾ ಸಹ ಉಸ್ತುವಾರಿ ಹಾಗೂ ಮಾಜಿ ಸಚಿವ ಪೊನ್ನು ರಾಧಾಕೃಷ್ಣನ್ ತಿಳಿಸಿದರು.


ಸಂಘಟನಾ ಪರ್ವ ಸಮಾರಂಭದಲ್ಲಿ ಮಾಜಿ ಸಚಿವ ಪೊನ್ನು ರಾಧಾಕೃಷ್ಣ ಮಾತನಾಡಿದರು.

ಬಿಜೆಪಿ ಕಚೇರಿಯಲ್ಲಿ ಪಕ್ಷದ ತಾಲೂಕು ಸಂಘಟನಾ ಪರ್ವ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ನೀವು ಕೇಂದ್ರದಲ್ಲಿ ಮೋದಿಗೆ ಬೆಂಬಲ ನೀಡಿದರೆ ಕೇಂದ್ರದಲ್ಲಿ ಮಾತ್ರ ಮೋದಿ ಸರ್ಕಾರ ಬಂದರೆ ಸಾಲುವುದಿಲ್ಲ. ನೀವು ಕೆಳಹಂತದಲ್ಲಿ ಅಧಿಕಾರ ಪಡೆಯಬೇಕು. ಆಗ ಮಾತ್ರ ನಿಮ್ಮ ಸದೃಢ ಭಾರತದ ಕನಸು ನನಸಾಗುತ್ತದೆ ಎಂದರು.

ನೀವು ಬಿಜೆಪಿ ಪಕ್ಷ ಸೇರಲು ಕಾರಣವೇನು ಎಂದು ಕಾರ್ಯಕರ್ತರಿಗೆ ಪ್ರಶ್ನೆ ಹಾಕಿದ ಪೊನ್ನು ರಾಧಾಕೃಷ್ಣರವರಿಗೆ ಕಾರ್ಯಕರ್ತರು ನಾವು ಬಿಜೆಪಿ ಬೆಂಬಲಿಸಲು ಹಿಂದೂ ರಾಷ್ಟ್ರದ ಕನಸು, ಹಿಂದುತ್ವವನ್ನು ಉಳಿಸಲು, ಮತಾಂದತೆಯನ್ನು ತಡೆಯಲು, ಉಗ್ರ ಚಟುವಟಿಕೆಯನ್ನು ತಡೆಯಲು ಮೋದಿಯನ್ನು ಬೆಂಬಲಿಸಲು ಎಂಬಿತ್ಯಾದಿಯಾಗಿ ಉತ್ತರಿಸಿದರು. ನಂತರ ಪ್ರತಿಕ್ರಿಯೆ ವ್ಯಕ್ತಪಡಿಸಿದ ಅವರು, ತಾಲೂಕಿನಲ್ಲಿ ಎಷ್ಟು ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಸ್ಥಾನಗಳಿವೆ ಇಲ್ಲಿ. ಎಷ್ಟು ಬಿಜೆಪಿ ಪಕ್ಷದ ಜನಪ್ರತಿನಿಧಿಗಳು ಹಾಜರಿದ್ದೀರಿ ಎಂದು ಮರು ಪ್ರಶ್ನೆ ಹಾಕಿದರು. ಸಮಾರಂಭದಲ್ಲಿ ಕೇವಲ ಇಬ್ಬರು ಗ್ರಾಮ ಪಂಚಾಯತಿ ಜನಪ್ರತಿನಿಧಿಗಳು ಹಾಜರಿದ್ದನ್ನು ಕಂಡು ಆಶ್ಚರ್ಯ ಚಕಿತರಾದ ಅವರು ತಾಲೂಕಿನಲ್ಲಿ ನೀವು 11300 ಸದಸ್ಯರುಗಳನ್ನು ಮಾಡಿದ್ದೀರಿ. ಸಂತೋಷ ಆದರೆ ನೀವು ತಾಲೂಕಿನಲ್ಲಿ ಬೆರಳೆಣಿಕೆಯಷ್ಟು ಅಧಿಕಾರ ಹೊಂದಿದ್ದರೆ ಸಾಲದು ಮುಂದಿನ ಹೊಸ ವರ್ಷದಲ್ಲಿ ಗ್ರಾಮ ಪಂಚಾಯಿತಿ ತಾಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಚುನಾವಣೆಗಳು ಬರುತ್ತಿವೆ. ನೀವು ಯಾವ ರೀತಿ ಚುನಾವಣೆಯನ್ನು ಎದುರಿಸಲು ಸಿದ್ಧರಿದ್ದೀರಿ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಿ ಎಂದರು.

ಸಮಾರಂಭದಲ್ಲಿ ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ಸಚ್ಚಿದಾನಂದ ಮೂರ್ತಿ, ತಾಲೂಕು ಬಿಜೆಪಿ ಅಧ್ಯಕ್ಷ ರಾಜೇಂದ್ರ ಮಾತನಾಡಿ, ಪಕ್ಷಕ್ಕೆ ಸಂಘಟನೆ ಯಾವ ರೀತಿ ಸಹಕಾರಿ ಹಾಗೂ ಸಕ್ರಿಯ ಸದಸ್ಯರನ್ನು ಮಾಡುವ ಕಾರ್ಯತಂತ್ರದ ಬಗ್ಗೆ ವಿವರಿಸಿದರು. ಜಿಲ್ಲಾ ಕಾರ್ಯದರ್ಶಿ ಕಿರಣ್ ಜಯರಾಮೇಗೌಡ, ಸಹ ಚುನಾವಣಾ ಅಧಿಕಾರಿ ಡಾ.ನವೀನ್, ಮುಖಂಡರುಗಳಾದ ಚಂದ್ರಶೇಖರ್, ಪಿ.ಜೆ. ರವಿ, ಲೋಕಪಾಲಯ್ಯ, ನಳಿನಿ ಗೌಡ, ಎಂ.ಎಂ.ರಾಜೇಗೌಡ, ಟಿ.ರಮೇಶ್, ಮೀನಾಕ್ಷಿ ಸೇರಿದಂತೆ ನೂರಾರು ಕಾರ್ಯಕರ್ತರು ಹಾಜರಿದ್ದರು.

ರಿಯಲ್ ಎಸ್ಟೇಟ್ ಲಾಬಿಗೆ ಮಣಿದಿರುವ ನರಸೀಪುರ ಪುರಸಭಾ ಅಧಿಕಾರಿಗಳು

ವಿಶೇಷ ಸಭೆ ಕರೆದು ಬಂಗಾರಪ್ಪ ಬಡಾವಣೆಯಲ್ಲಿ ನಿವೇಶನ ಹಂಚಲು ಅನುಮೋದನೆ

ತಿ.ನರಸೀಪುರ, ಡಿ.18– ರಿಯಲ್ ಎಸ್ಟೇಟ್ ಲಾಬಿಗೆ ಮಣಿದಿರುವ ಪುರಸಭೆಯ ಅಧಿಕಾರಿಗಳು ವಿಶೇಷ ಸಭೆ ಕರೆದು ಆಲಗೂಡು ಗ್ರಾಮದ ಬಂಗಾರಪ್ಪ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಿ, ಖಾತೆ ಮಾಡಿಕೊಡಲು ವಿಶೇಷ ಅನುಮೋದನೆಯನ್ನು ಪಡೆದುಕೊಂಡಿದ್ದಾರೆ ಎಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಆರೋಪಿಸಿದ್ದಾರೆ.


ಪತ್ರಿಕಾಗೋಷ್ಠಿಯಲ್ಲಿ ಆಲಗೂಡು ಶಿವಕುಮಾರ್ ಮಾತನಾಡಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕನ್ನು ಗುಡಿಸಲು ಮುಕ್ತಗೊಳಿಸಬೇಕು, ಸೂರಿಲ್ಲದವರಿಗೆ ಸೂರು ಒದಗಿಸಬೇಕು ಎಂದು ಅಂದು ಮುಖ್ಯಮಂತ್ರಿಯಾಗಿದ್ದ ಬಂಗಾರಪ್ಪ ಅವರು ಆಲಗೂಡು ಗ್ರಾಮದ ಬಳಿ ಬಡವರಿಗೆ ಮನೆಗಳನ್ನು ಕಟ್ಟಿಕೊಟ್ಟಿದ್ದರು. ಆ ನಿವೇಶನ ಇನ್ನೂ ಗ್ರಾಪಂ, ಪಪಂ ಮತ್ತು ಪುರಸಭೆಗಾಗಲಿ ಹಸ್ತಾಂತರವೇ ಆಗಿಲ್ಲ. ಖರಾಬು ಅಂತಾನೆ ಪಹಣಿಯಲ್ಲಿ ನಮೂದಾಗಿದ್ದರೂ ಅಧಿಕಾರಿಗಳು ಹಾಗೂ ಪುರಸಭೆಯ ಸದಸ್ಯರಿಗೆ ವಿಶೇಷ ಸಭೆಯನ್ನು ಕರೆದು ಅನುಮೋದನೆ ಪಡೆಯುವ ಔಚಿತ್ಯವೇನಿತ್ತು ಎಂದು ಪ್ರಶ್ನಿಸಿದರು.

ಹಲವು ದಶಕಗಳಿಂದ ಖಾಸಗಿ ಬಯಲು ಕೊಳಚೆ ಪ್ರದೇಶದಲ್ಲಿ ಜೋಪಡಿಗಳನ್ನು ಕಟ್ಟಿಕೊಂಡು ಜೀವನ ಮಾಡುತ್ತಿರುವ ಪರಿಶಿಷ್ಟ ಜಾತಿಯ ಕೊರಚರು ನಿವೇಶನಕ್ಕಾಗಿ ಪುರಸಭೆಗೆ ಅಂಗಲಾಚುತ್ತಿದ್ದಾರೆ. ಗೋಪಾಲಪುರದ ದಲಿತರು ನಿವೇಶನವನ್ನು ಹಂಚಿಕೆ ಮಾಡಿ ಎಂದು ಅಲವತ್ತುಕೊಳ್ಳುತ್ತಿದ್ದಾರೆ. ಆಲಗೂಡು ಗ್ರಾಮದ ವಾಲ್ಮೀಕಿ ಬಡಾವಣೆಯ ನಿವಾಸಿಗಳು ವಾಸವಿರುವ ಸ್ಥಳದ ದಾಖಲೆಗಳನ್ನು ಮಾಡಿಕೊಡಿ ಎಂದು ಅಲೆಯುತ್ತಿದ್ದಾರೆ. ಇಂತಹ ಗಂಭೀರ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಕನಿಷ್ಠ ಕಾಳಜಿ ವಹಿಸದ ಪುರಸಭೆಯ ಆಡಳಿತ ಜನರು ವಾಸವೇ ಇಲ್ಲದ ಬಂಗಾರಪ್ಪ ಬಡಾವಣೆಯಲ್ಲಿರುವ ನಿವೇಶನವನ್ನು ಹಂಚಿ, ಖಾತೆ ಮಾಡುವ ನಿರ್ಣಯದ ನೆಪದಲ್ಲಿ ಭೂಮಾಫಿಯ ಹಾಗೂ ರಿಯಲ್ ಎಸ್ಟೇಟ್ ಏಜೆಂಟ್‌ರ ಜೊತೆ ಭ್ರಷ್ಟಾಚಾರವೆಸಗಲು ಮುಂದಾಗಿದ್ದಾರೆ ಎಂದು ದೂರಿದರು.

ಈ ಕೂಡಲೇ ಇದನ್ನು ಕೈಬಿಡಬೇಕು. ಇಲ್ಲದಿದ್ದರೆ ಪುರಸಭೆ ಮುಂಭಾಗ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ನಾಗರಾಜಮೂರ್ತಿ, ಶಾಂತಕುಮಾರ್, ದಾವಣಗೆರೆ ಕಾಲೋನಿಯ ರಾಜು, ವೆಂಕಟೇಶ್, ಗಾಳಿಯಪ್ಪ ಹಾಗೂ ಗಂಗಾ ಇದ್ದರು.

ಮೈಸೂರು ಮಿತ್ರ

ಅನುದಾನ ಸದ್ಬಳಕೆ ಆದರೆ ಮಾತ್ರ ಉತ್ತರ ಕರ್ನಾಟಕದ ಅಭಿವೃದ್ಧಿ ಸಾಧ್ಯ

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಅಭಿಮತ

ಬೆಳಗಾವಿ(ಸುವರ್ಣ ವಿಧಾನಸೌದ), ಡಿ.18– ಉತ್ತರ ಕರ್ನಾಟಕಕ್ಕೆ ಹಂಚಿಕೆಯಾದ ಅನುದಾನ ಸದ್ಬಳಕೆ ಆದರೆ ಮಾತ್ರ ಉತ್ತರ ಕರ್ನಾಟಕದ ಅಭಿವೃದ್ಧಿ ಸಾಧ್ಯ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಪಾಲ್ಗೊಂಡು ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಉತ್ತರ ಕರ್ನಾಟಕ ಐತಿಹಾಸಿಕವಾಗಿ ಹಿಂದೆ ಉಳಿದಿದೆ. ಇದಕ್ಕೆ ಹಿಂದಿನ ಸರ್ಕಾರಗಳ ಉದಾಸೀನ ಭಾವನೆ ಕಾರಣವಾಗಿದೆ. ಅದೂ ಕೂಡ ಹೈದ್ರಾಬಾದ್–ಕರ್ನಾಟಕ, ಕಲ್ಯಾಣ ಕರ್ನಾಟಕ ಅತಿ ಹಿಂದುಳಿದ ಪ್ರದೇಶವಾಗಿದೆ ಎಂದರು.

1956ರಲ್ಲಿ ಕೇಂದ್ರ ಸರ್ಕಾರವು ಉತ್ತರ ಕರ್ನಾಟಕ ಅದರಲ್ಲೂ ಕಲ್ಯಾಣ ಕರ್ನಾಟಕ ಹಿಂದುಳಿದಿರುವುದನ್ನು ಮನಗಂಡು ಜಸ್ಟೀಸ್ ಫಜಲ್ ಅಲಿ ನೇತೃತ್ವದಲ್ಲಿ ಮೂವರು ನ್ಯಾಯಮೂರ್ತಿಗಳನ್ನೊಳಗೊಂಡ ಕಮಿಷನ್ ರಚನೆ ಮಾಡಿ ಸುಮಾರು 68 ವರ್ಷಗಳಾಗಿದೆ. ಈ ಕಮಿಷನ್ ಕಲ್ಯಾಣ ಕರ್ನಾಟಕ ವಿಶೇಷ ಸ್ಥಾನಮಾನ ಸಮಾನತೆಗೋಸ್ಕರ ವಿಶೇಷವಾದಂತಹ ಬಜೆಟ್ ಕೊಡಬೇಕೆಂದು ನಿರ್ದೇಶನ ನೀಡಿದೆ. ಆದರೆ ಅದು ಇದುವರೆವಿಗೂ ಜಾರಿಗೆ ಬರದೆ ಇರುವುದು ವಿಪರ್ಯಾಸ ಎಂದು ವಿಷಾದ ವ್ಯಕ್ತಪಡಿಸಿದರು.

2002ರಲ್ಲಿ ನಂಜುಂಡಪ್ಪ ವರದಿ ಜಾರಿಗೆ 22 ವರ್ಷಗಳಾಗಿವೆ. ನಂಜುಂಡಪ್ಪ ವರದಿಗೆ ಅನುಗುಣ ವಾಗಿ 18 ಹಿಂದುಳಿದ ಜಿಲ್ಲೆಗಳಾಗಿವೆ. ಪ್ರತಿ ವರ್ಷ 2000 ಕೋಟಿ ರೂ.ಗಳು ಬಜೆಟ್‌ನಲ್ಲಿ ತೆಗೆದಿರಿಸಿ, ಅದಕ್ಕೋಸ್ಕರ ಖರ್ಚು ಆಗಬೇಕು, ಅಭಿವೃದ್ಧಿಯಾಗಬೇಕೆಂದು ತಮ್ಮೆಲ್ಲರಿಗೂ ಕೂಡ ಗೊತ್ತಿರುವ ವಿಷಯ.

ಆದರೆ, ಕಳೆದ 22 ವರ್ಷಗಳಿಂದ 18 ಜಿಲ್ಲೆಗಳಲ್ಲಿ ಯಾವ ರೀತಿ ಅಭಿವೃದ್ಧಿಯಾಗಿದೆ, ಹಣ ಎಷ್ಟು ಬಿಡುಗಡೆಯಾಗಿದೆ, ಯಾವ ರೀತಿ ಖರ್ಚಾಗಿದೆ ಎಂಬುದರ ಬಗ್ಗೆ ಬೆಳಕು ಚೆಲ್ಲುವ ಕೆಲಸ ಆಗುತ್ತಿಲ್ಲ. ಆದ್ದರಿಂದ ಇದಕ್ಕಾಗಿ ಒಂದು ಸಮಿತಿಯನ್ನು ರಚನೆ ಮಾಡಬೇಕು. ಇದರಿಂದ ಎಷ್ಟು ತಾಲೂಕುಗಳು ಅಭಿವೃದ್ಧಿಯಾಗಿವೆ, ಯಾವ ಕಾರಣಕ್ಕಾಗಿ ಹಿಂದೆ ಉಳಿದಿವೆ ಎಂಬುದನ್ನು ಪತ್ತೆ ಮಾಡಿ, ಮುಂದೆ ಕೈಗೊಳ್ಳಬೇಕಾದ ಅಭಿವೃದ್ಧಿ ಕೆಲಸಗಳ ಬಗ್ಗೆ ಗಮನ ಹರಿಸುವ ಕೆಲಸವಾಗಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಿದರು.

ಅದೇ ರೀತಿ ಹೈದಾರಾಬಾದ್ ಕರ್ನಾಟಕಕ್ಕೆ 5000 ಕೋಟಿ ರೂ.ಗಳನ್ನು ಕೊಡುವುದಾಗಿ ಘೋಷಣೆ ಮಾಡಿದರು. ಈ ವರ್ಷ ಅನುದಾನ ಬಳಕೆಯಾಗದಿದ್ದರೆ, ಅದು ಮುಂದಿನ ವರ್ಷಕ್ಕೂ ಬಳಕೆಯಾಗಬೇಕು ಎಂದು ಇದ್ದರೂ ಅದೂ ಕೂಡ ಸರಿಯಾಗಿ ಆಗುತ್ತಿಲ್ಲ, ಈ ಬಗ್ಗೆ ಕೂಡ ಬೆಳಕು ಚೆಲ್ಲಬೇಕು ತಿಳಿಸಿದರು.

ಈ ಅನ್ಯಾಯವನ್ನು ಸರಿಪಡಿಸಬೇಕೆಂದು ಮತ್ತೊಮ್ಮೆ ಕೇಂದ್ರ ಸರ್ಕಾರ 371ಎ ಅನ್ನು ಜಾರಿಗೆ ತಂದು ವಿಶೇಷ ಸ್ಥಾನಮಾನವನ್ನು ಕೊಟ್ಟಿದೆ. ಆದರೆ 371ಎ ಕಾಗದದ ಮೇಲೆ ಮಾತ್ರ ಜಾರಿ ಆಗಿದೆ. ಅದು ಅಲ್ಪ–ಸ್ವಲ್ಪ ಅಭಿವೃದ್ಧಿಯಾಗಿರುವುದನ್ನು ಬಿಟ್ಟರೆ ಇನ್ನೂ ವಿಶೇಷವಾದಂತಹ ಅಭಿವೃದ್ಧಿಯಾಗಿಲ್ಲ. ವಿಶೇಷ ಅನುದಾನ ಮಾತ್ರ ಕೊಡುತ್ತಿದೆ. ಆದರೆ ಖರ್ಚು ಆಗುತ್ತಿಲ್ಲ, ಯಾಕೆ ಖರ್ಚು ಆಗುತ್ತಿಲ್ಲ, ಯಾಕೆ ಅಭಿವೃದ್ಧಿಯಾಗುತ್ತಿಲ್ಲ ಎಂಬುದರ ಬಗ್ಗೆ ಮಾಹಿತಿ ಕೊಡಬೇಕು. ಇದರ ಬಗ್ಗೆ ಜಾಗ್ರತೆ ವಹಿಸಬೇಕೆಂದು ಎಂದು ಸರ್ಕಾರಕ್ಕೆ ಚಾಟಿ ಬೀಸಿದರು.



ಶಾಸಕ ಜಿ.ಟಿ.ದೇವೇಗೌಡರು ಚಳಿಗಾಲದ ಅಧಿವೇಶನದಲ್ಲಿ ಮಾತನಾಡಿದರು.

ಅದರಲ್ಲೂ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಅಂದಾಜು ಸುಮಾರು 45000 ಗ್ರೂಪ್–'ಸಿ' ಮತ್ತು 'ಡಿ' ಹುದ್ದೆಗಳು ಖಾಲಿ ಇದ್ದು, ಅದನ್ನು ಭರ್ತಿ ಮಾಡಿದರೆ ಅಲ್ಲಿ ಯುವಕರಿಗೆ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ ಎಂದು ಸಲಹೆ ನೀಡಿದರು. ಮಹಾದಾಯಿ ಡ್ಯಾಂನಿಂದ ಕುಡಿಯುವ ನೀರಿನ ಬಹಳಷ್ಟು ಸಮಸ್ಯೆಗಳ ಪರಿಹಾರ ಆಗದೆ ಇರುವುದರಿಂದ ಅದನ್ನು ಕೂಡಲೇ ಕ್ರಮಕೈಗೊಳ್ಳಬೇಕೆಂದು ಮನವಿ ಮಾಡಿದರು.

ನಿಜಲಿಂಗಪ್ಪರವರ ಅವಧಿಯಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಗೆ ಶಂಕುಸ್ಥಾಪನೆ ಮಾಡಿ ಪ್ರಾರಂಭಗೊಂಡು ಇವತ್ತಿಗೆ ಸುಮಾರು 65–70 ವರ್ಷಗಳು ಆಗುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆಲಮಟ್ಟಿ ಜಲಾಶಯದ ಮಟ್ಟವನ್ನು 524 ಅಡಿ ನೀರು ತುಂಬಬೇಕೆಂದು ಹೇಳಿ ಹಿಂದೆ ಬಾಗಲಕೋಟೆ ಜಿಲ್ಲೆಯ ರೈತರ ಜಮೀನುಗಳು ಮುಳುಗಡೆಯಾಗಿದ್ದು, ಇದುವರೆವಿಗೂ ಭೂ ಪರಿಹಾರ ಕೊಟ್ಟಿಲ್ಲ. ಹಿಂದಿನ ಸರ್ಕಾರಗಳು ಆಗಲೇ ಪರಿಹಾರ ಕೊಟ್ಟು ಡ್ಯಾಂನಲ್ಲಿ 524 ಅಡಿ ನೀರನ್ನು ನಿಲ್ಲಿಸುವಂತಹ ಕೆಲಸ ಮಾಡಲಿಲ್ಲ ಎಂದ ಅವರು, ಈ ಭಾಗದಲ್ಲಿ ಫಲವತ್ತಾದ ಭೂಮಿ ಇದೆ. ಈ ಯೋಜನೆ ಪೂರ್ಣಗೊಳಿಸಿ, ದುಡಿಯುತಕ್ಕಂತಹ ರೈತರಿಗೆ ಸಹಾಯ ಮಾಡಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದರು.

ನಾನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ನಂಜುಂಡಪ್ಪ ವರದಿಯನ್ನು ಓದುವ ಸಂದರ್ಭದಲ್ಲಿ, ಇಲ್ಲಿ ಒಂದು ಕೋ–ಆಪರೇಟಿವ್ ಟ್ರೈನಿಂಗ್ ಸೆಂಟರ್ ಆಗಬೇಕೆಂದು ಹೇಳಿ ನಂಜುಂಡಪ್ಪ ವರದಿಯಲ್ಲಿತ್ತು. ಇದನ್ನು ಸರ್ಕಾರ ಮಾಡಬೇಕೆಂದಿತ್ತು. ಆದರೆ, ಮಹಾಮಂಡಳದ ವತಿಯಿಂದಲೇ 10 ಕೋಟಿ ರೂ.ಗಳು ಖರ್ಚು ಮಾಡಿ ಬೆಳಗಾವಿಯಲ್ಲಿ ಒಂದು ಕೋ–ಆಪರೇಟಿವ್ ಟ್ರೈನಿಂಗ್ ಸೆಂಟರ್‌ನ್ನು ಕಟ್ಟಿಸಲಾಗಿದೆ. ಅದರಲ್ಲಿ ಯೂನಿಯನ್ ಬಿಲ್ಡಿಂಗ್ ಕೂಡ ಕಟ್ಟಿಸಲಾಗಿದೆ. ಅಲ್ಲಿ ಸಹಕಾರ ಶಿಕ್ಷಣ, ಪ್ರಚಾರ, ತರಬೇತಿ ಕೂಡ ಮಹಾಮಂಡಳದ ವತಿಯಿಂದ ನಂಜುಂಡಪ್ಪ ವರದಿಯಲ್ಲಿ ಇದ್ದಂತಹ ಒಂದು ಯೋಜನೆಯನ್ನು ಜಾರಿಗೆ ತಂದ ಖುಷಿ ನನಗಿದೆ ಎಂದು ಸಂತೋಷ ವ್ಯಕ್ತಪಡಿಸಿದರು..

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮುತ್ತು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಿಸ್ ಯು (ತ)	4 ಪ್ರದರ್ಶನಗಳು
ಸಂಗಂ	
ಪುಷ್ಪ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪುಷ್ಪ–2 (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪುಷ್ಪಾ 2 (ಕ): ಬೆ.10ಕ್ಕೆ, ಮ.1.55ಕ್ಕೆ, ಪುಷ್ಪಾ 2 (ಹಿಂ): ಸಂ.5.50ಕ್ಕೆ, ರುಧೀರಂ (ಮ): ರಾ.9.50ಕ್ಕೆ.
ಸ್ಕ್ರೀನ್ 2	ಸೌಧುಕವ್ವಂ (ತ): ಬೆ.11.05ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಮೋನಾ 2 (3ಡಿ)(ಇಂ): ಸಂ.4.40ಕ್ಕೆ, ಮಿಸ್ ಯು (ತ): ರಾ.7ಕ್ಕೆ, ಪುಷ್ಪಾ 2 (ಕ): ರಾ.9.40ಕ್ಕೆ.
ಸ್ಕ್ರೀನ್ 3	ದಿ ಲಾರ್ಡ್ ಆಫ್ ದಿ ರಿಂಗ್ಸ್ (ಇಂ): ಬೆ.11.10ಕ್ಕೆ, ರಾ.9.55ಕ್ಕೆ, ಮೋನಾ 2 (3ಡಿ)(ಇಂ): ಮ.1.55ಕ್ಕೆ, ಹರಿದಾಸರ ದಿನಚರಿ (ಕ): ಸಂ.4ಕ್ಕೆ, ಪುಷ್ಪಾ 2 (ಕ): ಸಂ.6.05ಕ್ಕೆ.
ಸ್ಕ್ರೀನ್ 4	ಮೋನಾ 2(3ಡಿ)(ಇಂ): ಬೆ.11.55ಕ್ಕೆ, ಪುಷ್ಪಾ 2 (ತೆ): ಮ.2.10ಕ್ಕೆ, ಸಂ.6ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪ್ರೊ.ಕೆ.ವಿ.ನಾರಾಯಣಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ನವದೆಹಲಿ, ಡಿ.18– ಮೂಲತಃ ಪಿರಿಯಾಪಟ್ಟಣ ತಾಲೂಕು ಕಂಪಲಾಪುರ ಗ್ರಾಮದವರಾದ ಹಿರಿಯ ಭಾಷಾ ವಿದ್ವಾಂಸ ಹಾಗೂ ಸಂಶೋಧಕ ಪ್ರೊ.ಕೆ.ವಿ.



ನಾರಾಯಣ ಅವರ 'ನುಡಿಗಳ ಅಳಿವು' ಕೃತಿಯು ಕೇಂದ್ರ ಸಾಹಿತ್ಯ ಅಕಾಡೆಮಿಯ 2024ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿದೆ. ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮಾಧವ್ ಕೌಶಿಕ್ ಅವರು ಬುಧವಾರ ಇಲ್ಲಿ ಪತ್ರಿಕಾಗೋಷ್ಠಿ ನಡೆಸಿ 21 ಭಾಷೆಗಳ ಪ್ರಶಸ್ತಿ ಪುರಸ್ಕೃತರ ಹೆಸರನ್ನು ಪ್ರಕಟಿಸಿದರು. ಪ್ರಶಸ್ತಿಯು ಲಕ್ಷ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ನವದೆಹಲಿಯಲ್ಲಿ ಮಾರ್ಚ್ 8ರಂದು ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಕನ್ನಡ ವಿಭಾಗಕ್ಕೆ ವಿದ್ವಾಂಸ ಓ.ಎಲ್.ನಾಗಭೂಷಣಸ್ವಾಮಿ, ಹಳೆಮನೆ ರಾಜಶೇಖರ್ ಹಾಗೂ ಸರಜೂ ಕಾಟ್ಕರ್ ಜ್ಯೂರಿಗಳಾಗಿದ್ದರು. ಪ್ರೊ. ಕೆ.ವಿ. ನಾರಾಯಣ ಅವರು ಮೂಲತಃ ಪಿರಿಯಾಪಟ್ಟಣದ ಕಂಪಲಾಪುರದವರು. ಆರಂಭಿಕ ಶಿಕ್ಷಣವನ್ನು ತಮ್ಮ ಊರಿನಲ್ಲಿ ಪಡೆದು, ಉನ್ನತ ಶಿಕ್ಷಣಕ್ಕಾಗಿ ಬೆಂಗಳೂರಿನತ್ತ ಮುಖ ಮಾಡಿದರು.

ಬೋಧಿಸಿದ್ದು ಸಾಹಿತ್ಯ, ಸಾಹಿತ್ಯ ಮೀಮಾಂಸೆ ಮತ್ತು ಭಾಷಾವಿಜ್ಞಾನವನ್ನು, ವಿಜ್ಞಾನದ ತಾತ್ವಿಕತೆಯನ್ನು ಇರಿಸಿಕೊಂಡೇ ಕೆವಿಎನ್ ಬೆಳೆದದ್ದು ಸಾಹಿತ್ಯ ವಿಮರ್ಶಕರಾಗಿ, ಭಾಷಾ ವಿಜ್ಞಾನಿಯಾಗಿ, ಕನ್ನಡ ಸಂಸ್ಕೃತಿಯ ಚಿಂತಕರಾಗಿ. ತಿಳಿವಳಿಕೆ ಮತ್ತು ನಡುವಳಿಕೆ ಎರಡರಲ್ಲೂ ಸರಳವಾಗಿರುವ ಕೆವಿಎನ್, 1993ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದ ಶುರುವಿನಲ್ಲೇ ರಿಜಿಸ್ಟ್ರಾರ್ ಆಗಿ ಕಾರ್ಯ ನಿರ್ವಹಿಸಿದರು. ಕನ್ನಡ ವಿಶ್ವ ವಿದ್ಯಾಲಯವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ಬಳಿಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಪ್ರೊ. ಕೆವಿ ನಾರಾಯಣ ಅವರನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಭಿನಂದಿಸಿದ್ದಾರೆ.

ರಂಗಭೂಮಿ ಸ್ಪಷ್ಟ ಆಲೋಚನೆಯ ಮನಸ್ಥಿತಿ ಮೂಡಿಸಲಿದೆ

ರಂಗ ತರಬೇತಿ ಶಿಬಿರ ಉದ್ಘಾಟಿಸಿದ ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ ಅಭಿಮತ



ರಂಗ ತರಬೇತಿ ಶಿಬಿರ ಉದ್ಘಾಟಿಸಿ, ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ ಮಾತನಾಡಿದರು.

ಮೈಸೂರು, ಡಿ.18(ಪಿಎಂ)– ಶಿಸ್ತಿನಿಂದ ತೊಡಗಿಸಿಕೊಂಡರೆ ರಂಗಭೂಮಿಯಿಂದ ಸ್ಪಷ್ಟ ಆಲೋಚನೆಯ ಮನಸ್ಥಿತಿ ಮೂಡಲಿದೆ ಎಂದು ಚಿಂತಕ ಹಾಗೂ ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣ ರಂಗತಾಲೀಮು ಕೊಠಡಿಯಲ್ಲಿ ಬುಧವಾರ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿರುವ 25 ದಿನಗಳ ಉಚಿತ ರಂಗ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಈ 25 ದಿನಗಳ ಕಾಲದ ರಂಗ ಶಿಬಿರದಿಂದ ನಿಮ್ಮ ಮನಸ್ಸಿನಲ್ಲಿ ಹೊಸ ಬೆಳಕು ಹಾಗೂ ನವ ಚೈತನ್ಯ ಮೂಡಲಿ ಎಂದು ಆಶಿಸಿದರು. ಪ್ರಶ್ನೆ ಮಾಡುವ ಪ್ರವೃತ್ತಿ ಬೆಳೆಸಿಕೊಳ್ಳಿ. ಗೂಗಲ್ ಸೇರಿದಂತೆ ಅಂತರ್ಜಾಲದಲ್ಲಿ ಕೇವಲ ಮಾಹಿತಿಯಷ್ಟೇ ದೊರೆಯಲಿದ್ದು, ಅದರಿಂದ ನೈಜವಾದ ಜ್ಞಾನ ಸಂಪಾದಿಸಲು ಸಾಧ್ಯವಿಲ್ಲ. ಹಿರಿಯರ ಅನುಭವಗಳನ್ನು ತಿಳಿದುಕೊಳ್ಳಿ, ದೇಶದ ಸಂವಿಧಾನವನ್ನು ಓದಿ ಎಂದು ಸಲಹೆ ನೀಡಿದರು.

ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ಮಾತನಾಡಿ, ನಮ್ಮ ಸ್ಥಳೀಯ ರಂಗಭೂಮಿಗೆ ಸಂಬಂಧಿಸಿದಂತೆ ವೃತ್ತಿ ರಂಗಭೂಮಿಯಲ್ಲಿ ಹಿಂದೆ ಯಾವುದೇ ರೀತಿಯ ಪಠ್ಯ ಇರಲಿಲ್ಲ. ನಿರ್ದೇಶಕರು ಇರುತ್ತಿದ್ದರು. ಅವರು ಪಾತ್ರಧಾರಿಗಳಿಗೆ ಸಂಭಾಷಣೆ ಸೇರಿದಂತೆ ಅಭಿನಯದ ಬಗ್ಗೆ ಹೇಳಿಕೊಡುತ್ತಿದ್ದರು. ಇಂತಹ ಸನ್ನಿವೇಶದಲ್ಲಿ ಗುಬ್ಬಿ ಕಂಪನಿ ರಂಗಭೂಮಿಯಲ್ಲಿ ಹೊಸ ಪ್ರಯೋಗಗಳ ಮೂಲಕ ಸಂಚಲನ ಉಂಟು ಮಾಡಿತು. ಹೀಗಾಗಿ ಕಲಾಭಿಮಾನಿಗಳು ಹೆಚ್ಚಿನ ಪ್ರಮಾಣದಲ್ಲಿ ಗುಬ್ಬಿ ಕಂಪನಿ ನಾಟಕಗಳಿಗೆ ಮಾರು ಹೋಗುತ್ತಿದ್ದರು ಎಂದು ತಿಳಿಸಿದರು.

27 ಮಂದಿ ಶಿಬಿರದಲ್ಲಿ ಪಾಲ್ಗೊಂಡಿದ್ದು, ಇದೇ ರಂಗತಾಲೀಮು ಕೊಠಡಿಯಲ್ಲಿ ತರಬೇತಿ ನಡೆಯಲಿದೆ. ಶಿಬಿರದ ನಿರ್ದೇಶಕ ಕೃಷ್ಣಜನಮನ, ಟ್ರಸ್ಟ್‌ನ ಕಾರ್ಯದರ್ಶಿ ಡಾ. ಬಿ.ಎಸ್.ದಿನಮಣಿ ಮತ್ತಿತರರು ಹಾಜರಿದ್ದರು.

ವಕ್ಫ್ ಜಮೀನಿನಲ್ಲಿರುವ ದೇವಾಲಯ ತೆರವುಗೊಳಿಸಲ್ಲ; ಸಿಎಂ ಹೇಳಿಕೆಯಿಂದ ತೃಪ್ತರಾಗದ ಬಿಜೆಪಿ ಸಭಾತ್ಯಾಗ

ಬೆಳಗಾವಿ: ವಕ್ಫ್ ಆಸ್ತಿ ವಿವಾದ ವಿಧಾನಸಭೆಯಲ್ಲಿಂದು ಆಡಳಿತಾರೂಢ ಕಾಂಗ್ರೆಸ್ ಹಾಗೂ ಬಿಜೆಪಿ ನಡುವಣ ಭಾರಿ ಜಟಾಪಟಿಗೆ ಕಾರಣವಾಯಿತು. ರೈತರು, ದೇವಾಲಯಗಳು, ಮಠಗಳು ಸೇರಿದಂತೆ ಇನ್ನಿತರಿಗೆ ವಕ್ಫ್ ಮಂಡಳಿಯಿಂದ ನೀಡಿರುವ ನೋಟಿಸ್ ಕುರಿತು ಬಿಜೆಪಿ ಸರ್ಕಾರ ಹಾಗೂ ವಕ್ಫ್ ಖಾತೆ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಮುಗಿಬಿದ್ದಿತು. ಬಿಜೆಪಿ ಆರೋಪ ಕುರಿತು ಪ್ರತಿಕ್ರಿಯಿಸಿದ ವಕ್ಫ್ ಖಾತೆ ಸಚಿವ ಜಮೀರ್ ಅಹ್ಮದ್ ಖಾನ್, ಒಂದು ವೇಳೆ ರೈತರು ಹಾಗೂ ದೇವಾಲಯಗಳಿಗೆ ನೋಟಿಸ್ ನೀಡಿದ್ದರೆ ಅವುಗಳನ್ನು ಹಿಂಪಡೆಯುವುದಾಗಿ ಸದನಕ್ಕೆ ಭರವಸೆ ನೀಡಿದರು.

ಜಮೀರ್ ಅಹ್ಮದ್ ಖಾನ್ ಅವರ ಮಾತನ್ನೇ ಪುನರುಚ್ಚರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಳುಮೆ ಮಾಡುತ್ತಿರುವ ಭೂಮಿಯಿಂದ ಯಾವುದೇ ರೈತರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಸದನಕ್ಕೆ ತಿಳಿಸಿದರು. ಕೇವಲ ನೋಟಿಸ್ ಹಿಂಪಡೆದರೆ ಸಾಲದು, ಸರ್ಕಾರಿ ದಾಖಲೆಗಳಲ್ಲಿ ವಕ್ಫ್ ಎಂದು ನಮೂದಿಸಿರುವುದನ್ನು ತೆಗೆದುಹಾಕಬೇಕು ಎಂದು ಬಿಜೆಪಿ ನಾಯಕ ಅರಗ ಜ್ಞಾನೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಪ್ರತಿಪಕ್ಷ ಬಿಜೆಪಿ ನಾಯಕ ಆರ್.ಅಶೋಕ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ 110 ಕುರುಬ ಕುಟುಂಬಗಳಿಗೂ ನೋಟಿಸ್ ನೀಡಲಾಗಿದೆ. ಇವುಗಳ ತೆರವಿಗೆ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಇಂತಹ ನೋಟಿಸ್ ಗಳಿಂದ ಜನರು ಸಂಕಷ್ಟ ಎದುರಿಸುತ್ತಿರುವ ನೂರಾರು ನಿದರ್ಶನಗಳಿವೆ ಎಂದು ಹೇಳಿದರು. 2014ರಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ವಕ್ಫ್ ಆಸ್ತಿ ಒತ್ತುವರಿ ತೆರವುಗೊಳಿಸುವುದಾಗಿ ನೀಡಿದ್ದ ಭರವಸೆಯನ್ನು ಸಚಿವ ಜಮೀರ್ ಅಹ್ಮದ್ ಖಾನ್ ನೆನಪಿಸಿದರು. ರಾಜ್ಯದಲ್ಲಿ 1.10 ಲಕ್ಷ ಎಕರೆ ವಕ್ಫ್ ಆಸ್ತಿಗಳಿದ್ದು, ಇನಾಂ ನಿರ್ಮೂಲನೆ ಕಾಯ್ದೆ ಹಾಗೂ ಒತ್ತುವರಿಯಂತಹ ವಿವಿಧ ಕಾರಣಗಳಿಂದ ಈಗ ಕೇವಲ 20,000 ಎಕರೆಗೆ ಇಳಿದಿದ್ದು, ವಕ್ಫ್ ಆಸ್ತಿಗಳನ್ನು ಉಳಿಸುವುದು ಅಗತ್ಯವಾಗಿದೆ. ವಕ್ಫ್ ಆಸ್ತಿ ಉಳಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಅದಕ್ಕೆ ಕೇಂದ್ರದ ಕಾನೂನು ಇರುವುದರಿಂದ ನೋಟಿಸ್ ನೀಡಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.


ಸುಧಾರಾಣಿ, ರಾಜೇಂದ್ರ ಸಿಂಗ್ ಬಾಬು ಸೇರಿದಂತೆ ನಾಲ್ವರಿಗೆ ಬರಗೂರು ಪ್ರಶಸ್ತಿ

ಬೆಂಗಳೂರು, ಡಿ. 18– ನಾಡೋಜ ಡಾ. ಬರಗೂರು ಪ್ರತಿಷ್ಠಾನ ನೀಡುವ 'ಬರಗೂರು ಪ್ರಶಸ್ತಿ'ಗೆ ವಿಮರ್ಶಕ ಬಸವರಾಜ ಕಲ್ಗುಡಿ, ನಟಿ ಸುಧಾರಾಣಿ ಸೇರಿ ನಾಲ್ವರು ಆಯ್ಕೆಯಾಗಿದ್ದಾರೆ.

ಪ್ರತಿಷ್ಠಾನವು 2023 ಮತ್ತು 2024ನೇ ಸಾಲಿನ ಪ್ರಶಸ್ತಿ ಪ್ರಕಟಿಸಿದೆ. ಚಲನಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಹಾಗೂ ಸಾಹಿತಿ ಕರೀಗೌಡ ಬೀಚನಹಳ್ಳಿ ಅವರೂ ಆಯ್ಕೆಯಾಗಿದ್ದಾರೆ. ಸೃಜನಶೀಲ ಕ್ಷೇತ್ರಗಳಾದ ಸಾಹಿತ್ಯ ಮತ್ತು ಸಿನಿಮಾದಲ್ಲಿ ಸಾಧನೆ ಮಾಡಿದ ತಲಾ ಒಬ್ಬರಿಗೆ ಪ್ರತಿ ವರ್ಷ ಈ ಪ್ರಶಸ್ತಿ ನೀಡಲಾಗುತ್ತಿದೆ.



ಸುಧಾರಾಣಿ



ರಾಜೇಂದ್ರ ಸಿಂಗ್ ಬಾಬು

ಪ್ರಶಸ್ತಿ ಪ್ರದಾನ ಸಮಾರಂಭವು ಇದೇ 23ರಂದು ಸಂಜೆ 5 ಗಂಟೆಗೆ ಇಲ್ಲಿನ ಸರ್ಕಾರಿ ಕಲಾ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ನಡೆಯಲಿದೆ. ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಎ.ವಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಕಾನೂನು ಕಾರ್ಯಾಗಾರ

ಮೈಸೂರು,ಡಿ.18(ಪಿಎಂ)– ಮೈಸೂರು ನಗರ ಪೊಲೀಸ್, ಮೇಟಗಳ್ಳಿ ಪೊಲೀಸ್ ಠಾಣೆ ವತಿಯಿಂದ ಅಪರಾಧ ತಡೆ ಮಾಸಾಚರಣೆ 2024ರ ಪ್ರಯುಕ್ತ ಡಿ.19ರಂದು ಮಹಿಳೆಯರ ವಿರುದ್ಧದ ಅಪರಾಧಗಳ ಕುರಿತು ಕಾನೂನು ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಕೆಆರ್‌ಎಸ್ ರಸ್ತೆಯ ಜಿಎಸ್‌ಎಸ್‌ಎಸ್ ಕಾಲೇಜಿನ ಎಂ.ಗೋವಿಂದ ರಾವ್ ಮೆಮೋರಿಯಲ್ ಹಾಲ್‌ನಲ್ಲಿ ಮಧ್ಯಾಹ್ನ 3ಕ್ಕೆ ಕಾರ್ಯಾಗಾರ ನಡೆಯಲಿದೆ.

ರಿಯಲ್‌ಮಿ 14X 5ಜಿ ; ಭಾರತದ ಮೊದಲ 15 ಸಾವಿರ ರೂ. ಒಳಗಿನ ಐಪಿ69 ಸ್ಮಾರ್ಟ್‌ಫೋನ್ ಬಿಡುಗಡೆ

ಮೈಸೂರು, ಡಿ.18(ಪಿಎಂ)– ರಿಯಲ್‌ಮಿ ತನ್ನ ಬಹುನಿರೀಕ್ಷಿತ ಬಜೆಟ್ ಸ್ನೇಹಿ ಸ್ಮಾರ್ಟ್‌ಫೋನ್, ರಿಯಲ್‌ಮಿ 14X 5ಜಿ ಅನ್ನು ಬುಧವಾರ



ಬಿಡುಗಡೆ ಮಾಡಿದೆ. ಇದು ಭಾರತದ ಮಧ್ಯಮ ಶ್ರೇಣಿ ವಿಭಾಗದಲ್ಲಿ ಚೊಚ್ಚಲ ಪ್ರವೇಶ ಪಡೆದಿದೆ.

ಈ ಸಾಧನವು ಹಲವಾರು ಗ್ರೌಂಡ್ ಬ್ರೇಕಿಂಗ್ ವೈಶಿಷ್ಟ್ಯಗಳನ್ನು ಹೊಂದಿದೆ. ಧೂಳು ಮತ್ತು ನೀರಿನ ಪ್ರತಿರೋಧ ಸಹ ಒಳಗೊಂಡಿದ್ದು, ದೀರ್ಘ ಬಾಳಿಕೆ ಬಯಸುವ ಗ್ರಾಹಕರಿಗೆ ಇದನ್ನು ಸೂಕ್ತವಾಗಿ ವಿನ್ಯಾಸಗೊಳಿಸಲಾಗಿದೆ.

ಇನ್ನು ಹೆಚ್ಚುವರಿಯಾಗಿ ಮಿಲಿಟರಿ ಗ್ರೇಡ್ ಶಾಕ್ ರೆಸಿಸ್ಟನ್ಸ್ ಸಹ ಹೊಂದಿದೆ. 6000mAh ಬ್ಯಾಟರಿ ಮತ್ತು 45W ಸೂಪರ್ VOOC ವೇಗದ ಚಾರ್ಜಿಂಗ್ ಸಾಮರ್ಥ್ಯ ಒಳಗೊಂಡಿದೆ. ಕ್ರಿಸ್ಟಲ್ ಬ್ಲ್ಯಾಕ್, ಗೋಲ್ಡನ್ ಗ್ಲೋ ಮತ್ತು ಜ್ಯುವೆಲ್ ರೆಡ್ ಎಂಬ ಮೂರು ಆಕರ್ಷಕ ಬಣ್ಣಗಳಲ್ಲಿ ಇದು ಲಭ್ಯವಿದೆ.

6ಜಿಬಿ+128ಜಿಬಿ ಮತ್ತು 8ಜಿಬಿ+ 128 ಜಿಬಿ ವಿಧದಲ್ಲಿ ಸದರಿ ಸಾಧನವು ದೊರೆಯಲಿದೆ. ಇದರ ಬೆಲೆಯು 15 ಸಾವಿರ ರೂ. ಆಗಿದ್ದು, ಇದರ ಖರೀದಿಗಾಗಿ realme.com ಗೆ ಭೇಟಿ ನೀಡಬಹುದು. ಜೊತೆಗೆ ಮೇನ್‌ಲೈನ್‌ನ ರಿಯಲ್‌ಮಿ ರೀಟೇಲ್ ಮಳಿಗೆಗಳಿಗೂ ಭೇಟಿ ನೀಡಬಹುದು. ಡಿ.22ರವರೆಗೆ ಇದರ ಮಾರಾಟವು ನಡೆಯಲಿದ್ದು, ಬ್ಯಾಂಕ್ ಕೊಡುಗೆಗಳು, ಕ್ರೆಡಿಟ್ ಕಾರ್ಡ್ ಇಎಂಐ ಆಯ್ಕೆ ಜೊತೆಗೆ ಸಾವಿರ ರೂ.ವರೆಗೆ ರಿಯಾಯಿತಿಯ ಪ್ರಯೋಜನ ಪಡೆಯಬಹುದಾಗಿದೆ. ಗ್ರಾಹಕರು ವಿಸ್ತೃತ ಒಂದು ವರ್ಷದ ವಾರಂಟಿ ಸಹ ಪಡೆಯಬಹುದು. ಈ ಮೊಬೈಲ್ ಸಾಧನವು ಮೀಡಿಯಾ ಟೆಕ್ ಡೈಮೆನ್ಸಿಟಿ 6,300 ಸೆಟ್‌ನಿಂದ ಚಾಲನೆಯಾಗಲಿದ್ದು, ಇದು ಸುಗಮ ಕಾರ್ಯಕ್ಷಮತೆ ಹಾಗೂ ತಡೆರಹಿತ 5ಜಿ ಸಂಪರ್ಕವನ್ನು ನೀಡುತ್ತದೆ.

ದ್ರಾವಿಡ ಭಾಷಾ ಕುಟುಂಬದಲ್ಲಿ ಕನ್ನಡ, ತೆಲುಗು ಸೋದರ ಭಾಷೆ

ಮುಕ್ತ ವಿವಿ ತೆಲುಗು ಅಧ್ಯಯನ ಕೇಂದ್ರದ ಡೀನ್ ಪ್ರೊ.ರಾಮನಾಥಂ ನಾಯುಡು ಅಭಿಮತ



'ಶಾಸ್ತ್ರೀಯ ಕನ್ನಡ– ತೆಲುಗು ಸಾಂಸ್ಕೃತಿಕ ಬಾಂಧವ್ಯ' ಎರಡು ದಿನಗಳ ವಿಚಾರ ಸಂಕಿರಣಕ್ಕೆ ಚಾಲನೆ ದೊರಕಿತು.

ಮೈಸೂರು,ಡಿ.19(ಎಸ್‌ಪಿಎನ್)– ದ್ರಾವಿಡ ಭಾಷಾ ಕುಟುಂಬದಲ್ಲಿ ತೆಲುಗು–ಕನ್ನಡ ಸೋದರ ಭಾಷೆಗಳು. ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಅವಿನಾಭಾವ ಸಂಬಂಧ ಹೊಂದಿವೆ ಎಂದು ಮುಕ್ತ ವಿವಿ ತೆಲುಗು ಅಧ್ಯಯನ ಕೇಂದ್ರದ ಡೀನ್ ಪ್ರೊ.ರಾಮನಾಥಂ ನಾಯುಡು ಅಭಿಪ್ರಾಯಪಟ್ಟರು.

ಮೈಸೂರು ಕರ್ನಾಟಕ ರಾಜ್ಯ ಮುಕ್ತ ವಿವಿ ಆವರಣದ ಬಿಓಎಂ ಸಭಾಂಗಣದಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ ಮತ್ತು ಮುಕ್ತ ವಿವಿ ತೆಲುಗು ಅಧ್ಯಯನ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಿದ್ದ 'ಶಾಸ್ತ್ರೀಯ ಕನ್ನಡ–ತೆಲುಗು ಸಾಂಸ್ಕೃತಿಕ ಬಾಂಧವ್ಯ' ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮುಂದುವರೆದು ದ್ರಾವಿಡ ಭಾಷಾ ಕುಟುಂಬದಲ್ಲಿ ತೆಲುಗು–ಕನ್ನಡ ಸೋದರ ಭಾಷೆಗಳು. ಈ ಭಾಷೆಗಳ ಲಿಪಿ ಒಂದೇ ಮೂಲದಿಂದ ಬಂದವು. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಪರಸ್ಪರ ಅವಿನಾಭಾವ ಸಂಬಂಧವನ್ನು ಹೊಂದಿವೆ ಮತ್ತು ಈ ಬಾಂಧವ್ಯ ರಾಜವಂಶಗಳ ಕಾಲದಿಂದಲೂ ಇದೆ. ಈ ಎರಡೂ ಭಾಷೆಗಳು ಒಂದೇ ಗಿಡದ ಎರಡು ಹೂಗಳು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ತೆಲುಗು–ಕನ್ನಡ ಸಾಹಿತ್ಯ ಭಾಷಿಕ ಸಾಂಸ್ಕೃತಿಕ ನೆಲೆಯಲ್ಲಿ ಶತಮಾನಗಳ ಸಂಬಂಧವನ್ನು ಹೊಂದಿವೆ. ಇವೆರಡು ಭಾಷಾ ವಿದ್ವಾಂಸ ಒಟ್ಟಿಗೆ ಸಂಶೋಧನೆಗಳಲ್ಲಿ ತೊಡಗಿಸಿಕೊಂಡರೆ ಹಲವು ಐತಿಹಾಸಿಕ ಸತ್ಯಗಳು ಹೊರಬರಲಿವೆ ಎಂದರು.

ಬಹುಭಾಷಾ ವಿದ್ವಾಂಸ ಪ್ರೊ.ಆರ್ವಿಯಸ್ ಸುಂದರಂ ಮಾತನಾಡಿ, ಕನ್ನಡ–ತೆಲುಗು ಭಾಷೆ ಸಾಹಿತ್ಯ ಮಾತ್ರ ದ್ರಾವಿಡವೇ ಹೊರತು, ಇದನ್ನು ಮಾತನಾಡುವ ಜನರು ದ್ರಾವಿಡರಲ್ಲ. ಚಾಂದ್ರಮಾನ ಕ್ಯಾಲೆಂಡರ್ ಅನ್ನು ಕನ್ನಡ–ತೆಲುಗು ಭಾಷಿಕರು ಅನುಸರಿಸಿದರೆ, ತಮಿಳಿಗರು ಸೌರಮಾನ ಕ್ಯಾಲೆಂಡರ್ ವರ್ಷದ ಆರಂಭವೆಂದು ನಂಬುತ್ತಾರೆ ಎಂದು ಉಲ್ಲೇಖಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನ ನಿರ್ದೇಶಕ ಪ್ರೊ.ಎನ್.ಎಂ. ತಳವಾರ್, ವಿಚಾರ ಸಂಕಿರಣದ ಸಂಚಾಲಕರಾದ ಡಾ.ರಾಧಾಮಣಿ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಡಿ.25, ಮಾಜಿ ಪ್ರಧಾನಿ ವಾಜಪೇಯಿ ಹುಟ್ಟುಹಬ್ಬ

ಪ್ರತಿ ಬೂತ್ ಅಧ್ಯಕ್ಷರು, ಸದಸ್ಯರು ಮನೆ ಮೇಲೆ ಬಿಜೆಪಿ ಧ್ವಜ ಹಾರಿಸಬೇಕು

- ಕೇಂದ್ರ ಮಾಜಿ ಸಚಿವ ಪೊನ್ನು ರಾಧಾಕೃಷ್ಣನ್ ಸಲಹೆ
- ಮೈಸೂರು ಬಿಜೆಪಿ ಕಚೇರಿಯಲ್ಲಿ ಸಂಘಟನಾ ಪರ್ವ–2024 ಸಭೆ



ಬಿಜೆಪಿ ನಗರ ಮತ್ತು ಗ್ರಾಮಾಂತರ ಕಚೇರಿಯಲ್ಲಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ಸಂಘಟನಾ ಪರ್ವ–2024ರ ಕಾರ್ಯಕರ್ತರ ಸಭೆಯಲ್ಲಿ ರಾಷ್ಟ್ರೀಯ ಚುನಾವಣಾ ಸಹ ಉಸ್ತುವಾರಿ ಪೊನ್ನು ರಾಧಾಕೃಷ್ಣನ್ ಮಾತನಾಡುತ್ತಿರುವುದು.

ಮೈಸೂರು, ಡಿ.18(ಎಸ್‌ಪಿಎನ್)– ಭಾರತ ರತ್ನ, ಮಾಜಿ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಹುಟ್ಟುಹಬ್ಬದ ದಿನ(ಡಿ.25ರಂದು)ದಂದು ನಗರ ಮತ್ತು ಜಿಲ್ಲೆಯ ಎಲ್ಲಾ ಬೂತ್ ಅಧ್ಯಕ್ಷ, ಸದಸ್ಯರ ಮನೆ ಮೇಲೆ ಬಿಜೆಪಿ ಧ್ವಜ ಹಾರಿಸಬೇಕು ಎಂದು ಕೇಂದ್ರ ಮಾಜಿ ಸಚಿವ ಪೊನ್ನು ರಾಧಾಕೃಷ್ಣನ್ ತಿಳಿಸಿದರು.

ಮೈಸೂರು ಚಾಮರಾಜಪುರಂನ ಬಿಜೆಪಿ ನಗರ ಮತ್ತು ಗ್ರಾಮಾಂತರ ಕಚೇರಿಯಲ್ಲಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ಸಂಘಟನಾ ಪರ್ವ–2024ರ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಅಟಲ್ ಬಿಹಾರಿ ವಾಜಪೇಯಿ ಅವರ ಹುಟ್ಟುಹಬ್ಬದೊಳಗಾಗಿ 1,778 ಬೂತ್‌ಗಳಲ್ಲೂ ಅಧ್ಯಕ್ಷರು, ಸದಸ್ಯರ ಚುನಾವಣೆ ಪ್ರಕ್ರಿಯೆ ಮುಗಿಸಿ, ಡಿ.25ರಂದು ಎಲ್ಲಾ ಬೂತ್ ಅಧ್ಯಕ್ಷರು, ಸದಸ್ಯರ ಮನೆ ಮೇಲೆ ಬಿಜೆಪಿ ಧ್ವಜ ಹಾರಿಸಬೇಕು ಎಂದು ಕಾರ್ಯಕರ್ತರಿಗೆ ಸೂಚನೆ ನೀಡಿದರು.

ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಕೃಷ್ಣರಾಜ, ಚಾಮರಾಜ, ನರಸಿಂಹರಾಜ, ಚಾಮುಂಡೇಶ್ವರಿ, ತಿ.ನರಸೀಪುರ, ವರುಣ, ಪಿರಿಯಾಪಟ್ಟಣ, ಕೆ.ಆರ್.ನಗರ, ಹುಣಸೂರು ಹಾಗೂ ನಂಜನಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೂತ್ ಮಟ್ಟದ ಸಮಿತಿ ರಚಿಸಿ, ಆ ಬೂತ್ ಸದಸ್ಯರು ಮುಂಬರುವ ಚುನಾವಣೆಗಳಲ್ಲಿ ಸಕ್ರಿಯವಾಗಿರುವಂತೆ ಜಿಲ್ಲಾ ಪ್ರಮುಖರು ಗಮನ ನೀಡಬೇಕು ಎಂದು ಸಲಹೆ ನೀಡಿದರು. ಅಲ್ಲದೆ ಜಿಲ್ಲೆಯ ವಿವಿಧ ಕ್ಷೇತ್ರವಾರು ಬೂತ್ ಮಟ್ಟದ ಸಂಘಟನೆ ಪೂರ್ಣ ಪ್ರಮಾಣದಲ್ಲಿ ಸಂಘಟನೆಯಾಗಿಲ್ಲ. ಇಲ್ಲಿಯವರೆಗೆ 350 ಬೂತ್‌ಗಳಲ್ಲಿ ಮಾತ್ರ ಅಧ್ಯಕ್ಷರು, ಸದಸ್ಯರ ನೇಮಕಾತಿ ಪ್ರಕ್ರಿಯೆ ಮುಗಿದಿದೆ. ಉಳಿದ 1,458 ಬೂತ್‌ಗಳಲ್ಲಿ ಕೇಂದ್ರ ಸಮಿತಿ ನೀಡಿರುವ ಸಮಯದೊಳಗೆ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಒಂದು ಬೂತ್ ನಲ್ಲಿ 12ರಿಂದ 15ಮಂದಿ ಸದಸ್ಯರ ನೇಮಕ ಕಡ್ಡಾಯ ಎಂದು ತಿಳಿಸಿದರು.

ಬೂತ್‌ಮಟ್ಟದಲ್ಲಿ ಪಕ್ಷ ಸದೃಢಗೊಳ್ಳದಿದ್ದರೆ, ಮುಂಬರುವ ಸ್ಥಳೀಯ ಚುನಾವಣೆಗಳಲ್ಲಿ ಅಭ್ಯರ್ಥಿಗಳ ಗೆಲುವು ಸಾಧ್ಯವಿಲ್ಲ. ಹಾಗಾಗಿ ಬೂತ್‌ಮಟ್ಟದಲ್ಲಿ ಪಕ್ಷ ಪರಿಣಾಮಕಾರಿಯಾಗಿ ಸಂಘಟಿಸಲು ಜಿಲ್ಲಾ ಮತ್ತು ತಾಲೂಕು ಪ್ರಮುಖರು ಹೆಚ್ಚಿನ ಆದ್ಯತೆ ನೀಡಬೇಕು. ಬೂತ್ ಮಟ್ಟದಲ್ಲಿ ನೇಮಕಗೊಂಡ ಸಮಿತಿ ಸದಸ್ಯರ ಪೂರ್ಣ ಮಾಹಿತಿಯನ್ನು ಪಕ್ಷದ ವೆಬ್ ಲಿಂಕ್ ಮೂಲಕ ಮಾಹಿತಿ ಅಪ್‌ಡೇಟ್ ಮಾಡಬೇಕು ಎಂದು ಸೂಚಿಸಿದರು.

ಕೈಪಿಡಿ ಸಲ್ಲಿಕೆ: ಮೈಸೂರು ಸಂಘಟನಾ ಪರ್ವ–2024ರ ಕೃಷ್ಣರಾಜ ಕ್ಷೇತ್ರದ 265 ಬೂತ್ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಯ ಕೈಪಿಡಿಯನ್ನು ರಾಷ್ಟ್ರೀಯ ಚುನಾವಣಾ ಸಹ ಉಸ್ತುವಾರಿ ಪೊನ್ನು ರಾಧಾಕೃಷ್ಣನ್ ಅವರಿಗೆ ಸಲ್ಲಿಸಲಾಯಿತು.

ಈ ವೇಳೆ ಕೆ.ಆರ್.ಕ್ಷೇತ್ರ ಮಂಡಲ ಅಧ್ಯಕ್ಷ ಗೋಪಾಲ್‌ರಾಜೇ ಅರಸ್, ಮಂಡಲ ಪ್ರಧಾನ ಕಾರ್ಯದರ್ಶಿ ಜಯರಾಮ್, ಜೈ ಶಂಕರ್, ನಗರ ಉಪಾಧ್ಯಕ್ಷೆ ಹೇಮನಂದೀಶ್ ನಗರ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ನಗರ ಮಾಧ್ಯಮ ಸಹ ಸಂಚಾಲಕ ಬಿ.ಎಂ. ಸಂತೋಷ್ ಕುಮಾರ್, ಮುಖಂಡ ಹರೀಶ್, ರಾಜ್ಯ ಸಹ ಚುನಾವಣಾಧಿಕಾರಿ ಡಾ.ನವೀನ್, ಮೈಸೂರು ವಿಭಾಗದ ಸಚ್ಚಿದಾನಂದ ಮೂರ್ತಿ, ಮೈಸೂರು ಜಿಲ್ಲೆಯ ನಾರಾಯಣ ಪ್ರಸಾದ್, ನಿಕಟಪೂರ್ವ ಅಧ್ಯಕ್ಷರಾದ ಮಂಗಳ ಸೋಮಶೇಖರ್, ಮಾಜಿ ಶಾಸಕ ಹರ್ಷವರ್ಧನ್, ಮುಖಂಡರಾದ ಎಸ್.ಮಹದೇವಯ್ಯ, ಕೃಷ್ಣಪ್ಪಗೌಡ, ಎನ್.ವಿ.ಫಣೀಶ್, ಜಿಲ್ಲಾ ಪ್ರಕಾರ್ಯದರ್ಶಿ ಬಾಲಕೃಷ್ಣ, ಕಿರಣ್ ಮಹೇಶ್ ಉಪಸ್ಥಿತರಿದ್ದರು.

ಡಿ.29ಕ್ಕೆ 384 ಕೆಎಎಸ್ ಹುದ್ದೆಗಳ ಮರು ಪರೀಕ್ಷೆ

ಒಂದೇ ದಿನ ಎರಡು ಪೇಪರ್

ಬೆಂಗಳೂರು, ಡಿ. 18–ಕರ್ನಾಟಕ ಸಾರ್ವಜನಿಕ ಸೇವಾ ಆಯೋಗವು ಗೆಜೆಟೆಡ್ ಪ್ರೊಬೇಷನ್ ಅಡಿಯಲ್ಲಿ ಗ್ರೂಪ್ ಎ ಮತ್ತು ಗ್ರೂಪ್ ಬಿ ಹುದ್ದೆಗಳಲ್ಲಿ 384 ಹುದ್ದೆಗಳ ನೇಮಕಾತಿಗಾಗಿ ಮರು ಪರೀಕ್ಷೆಯನ್ನು ಡಿಸೆಂಬರ್ 29 ರಂದು ಕರ್ನಾಟಕ ಆಡಳಿತ ಸೇವೆಗಳ (ಕೆಎಎಸ್) ಪರೀಕ್ಷೆಯನ್ನು ನಡೆಸಲು ಸಜ್ಜಾಗಿದೆ. ವಿವಿಧ ಇಲಾಖೆಗಳಲ್ಲಿ ತಹಸೀಲ್ದಾರ್, ಸಹಾಯಕ ನಿರ್ದೇಶಕರು ಮತ್ತು ಇತರ ಪ್ರಮುಖ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ.

ಒಂದೇ ದಿನ ಎರಡು ಪರೀಕ್ಷೆ: ಕನ್ನಡ ಭಾಷಾಂತರ ಎಡವಟ್ಟಿನಿಂದ ಕೆಎಎಸ್ ಪರೀಕ್ಷೆ ರದ್ದುಗೊಂಡಿತ್ತು. ಆದರೆ ಸದ್ಯ ಡಿಸೆಂಬರ್ 29ರಂದು ಮರು ಪರೀಕ್ಷೆ ನಡೆಸಲು ಕರ್ನಾಟಕ ಲೋಕಸೇವಾ ಆಯೋಗ ನಿರ್ಧರಿಸಿದೆ. ಡಿ.29ರಂದು ಒಂದೇ ದಿನ ಪೇಪರ್–1, ಪೇಪರ್–2 ಪರೀಕ್ಷೆ ನಡೆಯಲಿದೆ. ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 12 ಗಂಟೆವರೆಗೆ ಪೇಪರ್–1 ಪರೀಕ್ಷೆ ನಡೆದರೆ, ಮಧ್ಯಾಹ್ನ 2 ಗಂಟೆಯಿಂದ ಸಂಜೆ 4 ಗಂಟೆವರೆಗೆ ಪೇಪರ್–2 ಪರೀಕ್ಷೆ ನಡೆಯಲಿದೆ.

ಈ ಕೆಪಿಎಸ್‌ಸಿ ಒಟ್ಟು ಹುದ್ದೆಗಳ ನೇಮಕಾತಿಗಾಗಿ ಪ್ರಾಥಮಿಕ ಪರೀಕ್ಷೆಗಳನ್ನು ಇದೇ ವರ್ಷ ಆಗಸ್ಟ್‌ನಲ್ಲಿ ನಡೆಸಲಾಗಿತ್ತು. ಆದರೆ ಆ ದಿನದ ಪ್ರಶ್ನೆ ಪತ್ರಿಕೆಯನ್ನು ಭಾಷಾಂತರ ಮಾಡಲಾಗಿದೆ ಎಂಬ ಸುದ್ದಿ ಮತ್ತು ಸ್ಕ್ರೀನ್ ಶಾಟ್‌ಗಳು ಎಲ್ಲೆಡೆ ಹರಿದಾಡಿದ್ದವು.

ಇದರಿಂದ ಕೆಪಿಎಸ್‌ಸಿ ವ್ಯಾಪಕ ಟೀಕೆ ಗುರಿಯಾಗುವಂತಾಗಿತ್ತು. ಬಳಿಕ ಸಿಎಂ ಸಿದ್ದರಾಮಯ್ಯ ಮರು ಪರೀಕ್ಷೆ ನಡೆಸುವಂತೆ ಸೂಚನೆ ನೀಡಿದ್ದರು. ಅದರ ಬೆನ್ನಲ್ಲೇ ಮರು ಪರೀಕ್ಷೆಯ ದಿನಾಂಕವನ್ನು ಡಿಸೆಂಬರ್ 29ರಂದು ನಿಗದಿ ಮಾಡಲಾಗಿದೆ.

ಈ ಬಗ್ಗೆ ಕೆಪಿಎಸ್‌ಸಿ ಟ್ವೀಟ್ ಕೂಡ ಮಾಡಿತ್ತು. 2023–24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಗ್ರೂಪ್–ಎ ಮತ್ತು ಗ್ರೂಪ್–ಬಿ ವೃಂದದ ಒಟ್ಟು 384 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಪೂರ್ವಭಾವಿ ಮರುಪರೀಕ್ಷೆಯನ್ನು ದಿ:29.12.2024ರಂದು ನಡೆಸಲು ನಿಗದಿಪಡಿಸಿ ತಿದ್ದುಪಡಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಸದರಿ ಪರೀಕ್ಷೆಗೆ ಎಲ್ಲಾ ಅಭ್ಯರ್ಥಿಗಳಿಗೂ ಅವಕಾಶ ಕಲ್ಪಿಸಲಾಗುತ್ತಿದೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ರವರ ಕಾರ್ಯಾಲಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ
ಕಛೇರಿ ದೂರವಾಣಿ: 08176–252749

ಮರು ಟೆಂಡರ್ ಪ್ರಕಟಣೆ ಸಂಖ್ಯೆ: 29/2024–25 ದಿನಾಂಕ: 18.12.2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ, ವ್ಯಾಪ್ತಿಯ ಅರಸೀಕೆರೆ ತಾಲ್ಲೋಕಿಗೆ 2022–23ನೇ ಸಾಲಿನ 3054-LUMPSUM ಕಾರ್ಯಕ್ರಮ–ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ (1)ಅರಸೀಕೆರೆ ತಾ: ಬಾಗೇಶಪುರ, ನಾಗತೀಹಳ್ಳಿ, ಬಿಳೇನಹಳ್ಳಿ ಹಾಗು ಅಪ್ಪೇನಹಳ್ಳಿ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (ಇಂಡೆಂಟ್ ಸಂಖ್ಯೆ 0362/ CALL-8) ಒಟ್ಟು ಟೆಂಡರ್ ಮೊತ್ತ ರೂ 43.10 ಲಕ್ಷಗಳಿಗೆ (2)ಅರಸೀಕೆರೆ ತಾ: ಲಕ್ಕೇನಹಳ್ಳಿ, ಕಾಳೇಗೌಡನಕೊಪ್ಪಲು ಹಾಗು ಅಣ್ಣನಾಯ್ಕನಹಳ್ಳಿ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (ಇಂಡೆಂಟ್ ಸಂಖ್ಯೆ 0448 /CALL-8) ಒಟ್ಟು ಟೆಂಡರ್ ಮೊತ್ತ ರೂ 43.90 ಲಕ್ಷಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಸಾಮಾಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಪೂರೈಸಲು ನೊಂದಣೀಯಾಗಿರುವ ಮಾರಟದಾರರಿಂದ & ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರನ್ನು ಏಕಕಕ ಅಂತರ್ಜಾಲದಲ್ಲಿ ದಿನಾಂಕ: 27.12.2024ರ ಸಂಜೆ 5.00ಘಂಟೆಯವರೆಗೆ ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು https://kppp.karnataka.gov.in/kpppನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 27.12.2024ರ ಸಂಜೆ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ 26.12.2024ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 30.12.2024ರಂದು ಬೆಳಿಗ್ಗೆ 11.00ಗಂಟೆಗೆ ಗುತ್ತಿಗೆದಾರರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು ಇ–ಪ್ರಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪ.ರಾಜ್. ಇಂ.ವಿಭಾಗ, ಚನ್ನರಾಯಪಟ್ಟಣ.
ವಾಸಾಸಂಇ/ಹಿಸನಿ/ಹಾಸನ/761/ಕೆಎಸ್‌ಎಂಸಿಎ/2024–25

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಬಯಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀ ಅಮರನಾಥ್ ಬಿನ್ ಲೇಟ್ ನಾಗೇಂದ್ರಪ್ಪ, ವಯಸ್ಸು ಸುಮಾರು 39 ವರ್ಷ, ವಾಸ : ಮನೆ ನಂ.5568, 2ನೇ ಘಟ್ಟ, ಎನ್.ಪಿ.ಎಸ್ ಸ್ಕೂಲ್ ಹತ್ತಿರ, ವಿಜಯನಗರ 4ನೇ ಹಂತ, ಮೈಸೂರು ರವರು ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತೊರೆಯನ ಕಾಟೂರು ಗ್ರಾಮಕ್ಕೆ ಸೇರಿದ ಸರ್ವೆ ನಂ.134/1 ರಲ್ಲಿನ 11 ಗುಂಟೆ ಮತ್ತು ಸರ್ವೆ ನಂ.136/1 ರಲ್ಲಿನ 1 ಎಕರೆ 37 ಗುಂಟೆ ಜಮೀನನ್ನು (ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತು) ಇದರ ಪ್ರಸ್ತುತ ಕೆಳಕಂಡ ಮಾಲೀಕರುಗಳಾದ:
1.ಶ್ರೀ ಸಂಜೀವಯ್ಯ ಬಿನ್ ಲೇಟ್ ಸಂಜೀವನಾಯಕ, ವಯಸ್ಸು ಸುಮಾರು 69 ವರ್ಷ, 2. ಶ್ರೀ ನಾರಾಯಣ ನಾಯ್ಕ ಬಿನ್ ಲೇಟ್ ಸಂಜೀವ ನಾಯಕ, ವಯಸ್ಸು ಸುಮಾರು 63 ವರ್ಷ, 3. ಶ್ರೀಮತಿ ಪುಟ್ಟಲಕ್ಷ್ಮಮ್ಮ ಬಿನ್ ಲೇಟ್ ಸಂಜೀವ ನಾಯಕ, ವಯಸ್ಸು ಸುಮಾರು 60 ವರ್ಷ, 4. ಶ್ರೀಮತಿ ಪುಟ್ಟಹೊನ್ನಮ್ಮ ಬಿನ್ ಲೇಟ್ ಸಂಜೀವ ನಾಯಕ, ವಯಸ್ಸು ಸುಮಾರು 57 ವರ್ಷ, 5. ಶ್ರೀ ರಂಗನಾಯಕ ಬಿನ್ ಲೇಟ್ ಸಂಜೀವ ನಾಯಕ, ವಯಸ್ಸು ಸುಮಾರು 54 ವರ್ಷ, 6. ಶ್ರೀ ಗೋಪಾಲಸ್ವಾಮಿ ಬಿನ್ ಲೇಟ್ ಸಂಜೀವ ನಾಯಕ, ವಯಸ್ಸು ಸುಮಾರು 51 ವರ್ಷ ಮತ್ತು ಇವರ ಕುಟುಂಬವರ್ಗದವರಿಂದ ಖರೀದಿಸಲು ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾರಿಗಾದರು, ಯಾವುದೇ ತರಹದ ಹಕ್ಕು–ಬಾಧ್ಯತೆಗಳು ಇದ್ದ ಪಕ್ಷದಲ್ಲಿ, ಸದರಿ ವ್ಯಕ್ತಿಗಳು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ನಿಮ್ಮ ಹಕ್ಕು– ಬಾಧ್ಯತೆಗಳನ್ನು ಈ ಸಾರ್ವಜನಿಕ ಪ್ರಕಟಣೆಯ ದಿನಾಂಕದಿಂದ 7 ದಿನಗಳ ಒಳಗಾಗಿ ತಿಳಿಸತಕ್ಕದು. ತಪ್ಪಿದಲ್ಲಿ ಯಾವುದೇ ಹಕ್ಕು–ಬಾಧ್ಯತೆಗಳು ಇರುವುದಿಲ್ಲವೆಂದು ಭಾವಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಐಟಂ.ನಂ .1: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತೊರೆಯನ ಕಾಟೂರು ಗ್ರಾಮಕ್ಕೆ ಸೇರಿದ ಸರ್ವೆ ನಂ.134/1 ರಲ್ಲಿನ 0 ಎಕರೆ 11 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ಸರ್ವೆ ನಂ.136/1 ಇವರದೆ ಜಮೀನು, ಪಶ್ಚಿಮಕ್ಕೆ : ಸರ್ವೆ ನಂ.146/2 ಪುಟ್ಟಚಿಕ್ಕಮ್ಮ ಬಿನ್ ಹನುಮಮ್ಮ @ ಮರಮ್ಮ ಇವರದೆ ಜಮೀನು ಆರ್.ಗೋವಿಂದ, ಸರ್ವೆ ನಂ.146/1 ಯಶೋಧ ಕೋಂ ಚಿಕ್ಕಮಾದನಾಯಕ,
ಉತ್ತರಕ್ಕೆ: ರಸ್ತೆ ಮತ್ತು ಸರ್ವೆ ನಂ.133 ರ ಖರಾಬು, ದಕ್ಷಿಣಕ್ಕೆ: ಸರ್ವೆ ನಂ.134/2 ಆರ್.ಗೋವಿಂದ ಬಿನ್ ಲೇಟ್ ರಂಗನಾಯಕನ ಕಾಡನಾಯಕ, ಐಟಂ ನಂ.2: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತೊರೆಯನ ಕಾಟೂರು ಗ್ರಾಮಕ್ಕೆ ಸೇರಿದ ಸರ್ವೆ ನಂ.136/1 ರಲ್ಲಿನ 1 ಎಕರೆ 37 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ಪಿ.ಶ್ರೀನಿವಾಸ ರವರ ಸರ್ವೆ ನಂ.136/2 ರ ಸ್ವತ್ತು, ಪಶ್ಚಿಮಕ್ಕೆ : ಸರ್ವೆ ನಂ.138/1 ಚಿಕ್ಕತಾಯಮ್ಮ ಕೋಂ ಲೇಟ್ ಪುಟ್ಟಚಿಕ್ಕನಾಯಕ, ರತ್ನಮ್ಮ, ಸಿದ್ದನಾಯಕ ಬಿನ್ ದೊಡ್ಡ ದೇವನಾಯಕ ಬಿನ್ ಮಂಗಳಮ್ಮ, ಸರ್ವೆ ನಂ.138/3 ಬಸಪ್ಪ ಬಿನ್ ಕಾಳಮಾಲೇಗೌಡ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ: ಸರ್ವೆ ನಂ.134/1 ಇವರದೆ ಜಮೀನು, ಸರ್ವೆ ನಂ.134/2 ಗೋವಿಂದ ಬಿನ್ ಲೇಟ್ ರಂಗನಾಯಕ @ ಕಾಡನಾಯಕ, ಸರ್ವೆ ನಂ.135 ಗೋವಿಂದ ಬಿನ್ ಲೇಟ್ ರಂಗನಾಯಕ @ ಕಾಡನಾಯಕ, ಸರ್ವೆ ನಂ.137/1 ಸಣ್ಣಮ್ಮ ಕೋಂ ಕೆಂಪಚಾರಿ, ಸರ್ವೆ ನಂ.137/2 ಸಣ್ಣಮ್ಮ ಕೋಂ ಕೆಂಪಚಾರಿ,

ಸಹಿ/- ಕೆ.ಎಸ್ ಮಹದೇವ ಪ್ರಸಾದ್, ವಕೀಲರು, ಕೆ.ಎ.ಆರ್/1353/2002, ಕಛೇರಿ ವಿಳಾಸ: ನಂ.1028, ಸಿ.ಹೆಚ್–20/ಡಿ, ರೂಂ ನಂ.2 ರಿಂದ 4, 1ನೇ ಮಹಡಿ, ಜಯಲಕ್ಷ್ಮಿ ವಿಳಾಸ ರಸ್ತೆ, ಚಾಮರಾಜಪುರಂ, –570005, ಮೊ: 9164277766

ಕರ್ನಾಟಕ ಸರ್ಕಾರ
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಾರ್ಯಾಲಯ, ಮೈಸೂರು
Email ID: ddcclmys@gmail.com Ph: 2423678, 2430343
ನಗರ ಕೇಂದ್ರ ಗ್ರಂಥಾಲಯ,
ಮಲೆ ಮಹದೇಶ್ವರ ರಸ್ತೆ, ಪೀಪಲ್ಸ್ ಪಾರ್ಕ್, ಮೈಸೂರು–570 001
ಸಂ: ನಕೇಗ್ರಂ.ಮೈ/ತಾ.ವಿ–1/ಕು.ಸಂ.ಗ್ರಂ.ವಾ.ಕ/01/2024–25 ದಿ: 16.12.2024

ಟೆಂಡರ್ ಪ್ರಕಟಣೆ

ಮೈಸೂರು ನಗರ ಕೇಂದ್ರ ಗ್ರಂಥಾಲಯದ ಕುವೆಂಪು ಸಂಚಾರಿ ಗ್ರಂಥಾಲಯ ವಾಹನಕ್ಕೆ ವಾಹನ ಚಾಲಕರ ಸೇವೆಯನ್ನು ಒದಗಿಸಲು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಹಾಗೂ ಈ ಕಛೇರಿ ಅಧೀನ ಕಾರ್ಯನಿರ್ವಹಿಸುತ್ತಿರುವ ಶಾಖಾ/ಸೇವಾ ಕೇಂದ್ರ ಗ್ರಂಥಾಲಯಗಳಿಗೆ ದಿನಪತ್ರಿಕೆ/ನಿಯತಕಾಲಿಕೆಗಳನ್ನು ಸರಬರಾಜು ಮಾಡಲು ಒಂದು ವರ್ಷದ ಅವಧಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿ: 07.01.2025 ಹಾಗೂ ಟೆಂಡರ್‌ಗಳನ್ನು ತೆರೆಯಲು ದಿ: 09.01.2025 ರಂದು ನಿಗಧಿಯಾಗಿರುತ್ತದೆ. ಅರ್ಹ ಆಸಕ್ತಿವುಳ್ಳವರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppps.karnatak.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/– ಉಪನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ, ಮೈಸೂರು.
DIPR/DDMYS-963/KSMCA/648/2024-25